ಸುರಸಕವಿತಾಹಾರ.

ಹರಾವಂಶೇಗಾಗಿ

…ಂಡಿತ ನಿ. ರಾಘವೇಂದ್ರ ಬಲ್ಲಾಳ, ವಿದ್ವಾನ್.

ಸುರಸ

ಕವಿತಾಹಾರ.

ಸರಸ

ಸುಭಾಷಿತಂ.



ಶ್ಲೋಕಸ್ತು ಶ್ಲೋಕತಾಂ ಯಾತಿ ಯತ್ರ ತಿಷ್ಠಂತಿ ಸಾಧವಃ ।
ಲಕಾರೋ ಲುಪ್ಯತೇ ತತ್ರ ಯತ್ರ ತಿಷ್ಠಂತ್ಯಸಾಧವಃ ॥ ೧ ॥

ಪಂಡಿತ ನಿಡಂಬೂರು ರಾಘವೇಂದ್ರ ಬಲ್ಲಾಳ, ವಿದ್ವಾನ್,
ಬೋರ್ಡ್ ಹೈಸ್ಕೂಲ್, ಉಡುಪಿ.

ಶ್ರೀಕೃಷ್ಣಮುದ್ರಣಾಲಯ, ಉಡುಪಿ.

1933.

8 As. ೮ ಆಣೆ.

ಚೆಂದುಟಿಯ ಸವಿಯು, ಕುಚಯುಗ
ದಂದದ ಕಾಠಿಣ್ಯವನ್ನು, ಕುಡುನೋಟದೊಳಾ ।
ಸಂದಿಹ ಬಿರುಸಂ, ಕವಿತೆಯ
ಕುಂದದ ಪರಿಪಾಕವನ್ನರಿಯುವಂ ರಸಿಕಂ ॥

ಕಾಳಿದಾಸ

ಪ್ರಕಾಶಕ:—
ನಿಡಂಬೂರುಬೀಡು ನಾರಾಯಣ ಬಲ್ಲಾಳ.

ಪ್ರಸ್ತಾವನೆ.

ಕನ್ನಡವಾಙ್ಮಯವು ಇತ್ತೀಚೆಗೆ ಆಧುನಿಕ ಪರಿಸ್ಥಿತಿಗೆ ತಕ್ಕಂತೆ ಹೊಸ
ರೂಪವನ್ನು ತಳೆದಿದೆ. ಇತರ ಸಾಹಿತ್ಯಖನಿಗಳಿಂದಲೂ ಹಲವು ರತ್ನಗಳ
ನ್ನಗೆದು ತಂದು ತನಗೊಪ್ಪುವಂತೆ ಕೆತ್ತಿ, ಮಿರುಗುಗೊಟ್ಟು ಧರಿಸಿ
ಮೆರೆಯತೊಡಗಿದೆ. ಆ ಸಾಹಿತ್ಯಶರಧಿಗಳ ರತ್ನಾನ್ವೇಷಣಭರದಲ್ಲಿ
ತನಗೆ ಆದಿಯಿಂದಲೂ ಆಧಾರವಾಗಿದ್ದ ಸಂಸ್ಕೃತ ವಾಙ್ಮಯ ಮಹೋ
ದಧಿಯ ಹಲವೊಂದು ಸೊಬಗಿನ ಮುತ್ತುಗಳು ಅವಜ್ಞೆಯಿಂದಾರಿಸ
ಲ್ಪಡದೆ ಹೋಗಲೂ ಬಹುದೆಂದು, ಆ ಪುರಾತನ ಸಂಸ್ಕೃತ ಕವಿಗಳ
ಬಂಧಚಾತುರ್ಯ್ಯ, ವಕ್ರೋಕ್ತಿಯ ಚಂದ, ಶ್ಲೇಷದ ಸ್ವಾರಸ್ಯ,
ಕಲಾಪ್ರಾವೀಣ್ಯ ಇವುಗಳನ್ನೆಲ್ಲ ಯಥಾಮತಿ ತಿಳಿಗನ್ನಡಕ್ಕೊಪ್ಪುವಂತೆ
ಆರೈದು, ಉಭಯ ಸಾಹಿತ್ಯ ಶರಧಿಗಳ ತಡಿಯಲ್ಲಿ ಅಲೆಯುತ್ತಿದ್ದ
ನನ್ನ ಬಾಳಿನ ಕಾಣಿಕೆಯಾಗಿ ಕನ್ನಡಿಗರಿಗೆ ಅರ್ಪಿಸಬೇಕೆಂಬ ನನ್ನ
ಬಯಕೆಯ ಫಲವೇ ಈ ಚಿಕ್ಕ ಗ್ರಂಥವು.

ಪ್ರೌಢ ವಿದ್ಯಾರ್ಥಿಗಳ ಪದ್ಯಪಾಠದಲ್ಲಿ ಈ ಪದ್ಯಗಳನ್ನುಪಯೋ
ಗಿಸಿ ನೋಡಿದ್ದಲ್ಲಿ ಇವು ಅವರ ಸಾಹಿತ್ಯಾಭಿರುಚಿಯನ್ನು ಹೆಚ್ಚಿಸುವುದ
ರಲ್ಲಿ ವಿಶೇಷ ಪ್ರಯೋಜನಕಾರಿಯಾದ ಅವರ ಮೆಚ್ಚಿನ ಪದ್ಯಸಂಗ್ರಹ
ವಾಗಿದೆಯೆಂದು ನನಗೆ ಮನಗಾಣಬಂದುದರಿಂದ ಅಂತಹ ವಿದ್ಯಾರ್ಥಿ
ಗಳಿಗೆ ತುಂಬಾ ಸಹಾಯವಾಗುವಂತೆ ಇದಕ್ಕೆ ಅಲಂಕಾರವಿವರಣೆ,
ಅನ್ವಯಗಳೊಂದಿಗೆ ಟಿಪ್ಪಣಿಯನ್ನೂ ಸೇರಿಸಿ ಬರೆದುದಾಯಿತು.

ಈ ಪದ್ಯಗಳು ಬೇರೆ ಬೇರೆ ತರದ ಪ್ರತ್ಯೇಕ ಸರಸ ವಿಷಯಗಳ
ಕುರಿತು ಸರಳವಾಗಿ ತಿಳಿಗನ್ನಡದ ಶೈಲಿಯಲ್ಲಿಯೇ ಹರಿವ ಷಟ್ಪದಿಯ
ಮವನ್ನನುಸರಿಸಿ ಬರೆಯಲ್ಪಟ್ಟುವಾದುದರಿಂದ ವಿದ್ಯಾರ್ಥಿಗಳು
ಇವನ್ನು ಕೇವಲ ತಮ್ಮ ಸ್ವಾನಂದಕ್ಕಾಗಿ ಅಭ್ಯಾಸಮಾಡುವರು; ಕಾತು

ಕಕ್ಕಾಗಿ ತಮ್ಮ ಒಡನಾಡಿಗಳಿಗೆ ಹೇಳುವರು, ಹಾಡುವರು. ಹೀಗೆ ಕಲಿಯುತ್ತ, ಕೇಳುತ್ತ, ಹಾಡುತ್ತ, ಹೇಳುತ್ತ ಪದ್ಯಾಭಿರುಚಿಯು ಅವರ ರಸನೆಗೆ ಹಿಡಿದು ಹೋಗುವುದು. ಕಾವ್ಯರಸ ಸಂಗ್ರಹಕ್ಕಾಗಿ ಅಲರಿಂದಲರಿಗೆ ಹಾರಾಡುತ್ತ ಆನಂದಗೊಳ್ಳುವ ಸಾಹಿತ್ಯ ಭ್ರಮರಗಳೇ ಅವರಾಗಿ ಹೋಗುವರು. ಈ ಮಾತು ಕೇವಲ ಊಹೆಯಿಂದ ಬರೆದುದಲ್ಲ. ಪ್ರಯೋಗದಿಂದ ಮನಗೊಂಡು ಹೇಳುವ ಮಾತಿದು.

ಕಠಿಣ ವಿಷಯಗಳ ಪಾಠಗ್ರಹಣದಿಂದ ಬಳಲಿದ ಮನಸ್ಸಿಗೆ ನಡುವೆ ಇಂತಹ ರಸಿಕತೆಯ ಪದ್ಯಪಾಠವು ದೊರಕಿದರೆ ಮನಸ್ಸು ಒಂದು ತರದ ಆನಂದದಾಯಕವಾದ ವಿರಾಮವನ್ನು ಹೊಂದಿ ಮುಂದಿನ ಪಾಠಕ್ಕೆ ಉತ್ಸಾಹದಿಂದ ಎದ್ದೇಳುವಂತಾಗುವುದು ಈ ಪದ್ಯಪಾಠಗಳಿಂದ ವಿದ್ಯಾರ್ಥಿಗಳಿಗೆ ದೊರಕುವ ಮತ್ತೊಂದು ವೈಶಿಷ್ಟ್ಯ.

ಆದುದರಿಂದ ಭಾಷಾಭಿಮಾನಿಗಳಾದ ವಿದ್ವಾಂಸರೂ, ಉಪಾಧ್ಯಾಯ ಉಪಾಧ್ಯಾಯಿನಿಯರೂ, ಇತರ ಸೋದರ ಸೋದರಿಯರೂ ಇದನ್ನೊಮ್ಮೆಯೋದಿ ಮನಗಂಡು, ಇದರ ವಿಷಯ ಗ್ರಹಣಮಾಡಿದ ಮಾತ್ರಕ್ಕೆ ಈ ನನ್ನ ಶ್ರಮವು ಸಫಲವಾಯಿತೆಂದು ನಂಬಿರುವೆನು.

ಅಲ್ಲದೆ ಪ್ರಕೃತ ನನಗೆ ಈ ಗ್ರಂಥಕ್ಕೆ ಟಿಪ್ಪಣಿಕೊಡುವರೆ ತುಂಬ ನೆರವಾದ ಉಡುಪಿ ಬೋರ್ಡು ಹೈಸ್ಕೂಲಿನ ಸಂಸ್ಕೃತ ಪಂಡಿತರಾದ **ಪಿ. ವೆಂಕಟದಾಸಾಚಾರ್ಯರು,** ವಿದ್ವಾನ್. ಮತ್ತು ಉಡುಪಿ ಸಂಸ್ಕೃತ ಕಾಲೇಜಿನ ಸಾಹಿತ್ಯಾಧ್ಯಾಪಕರಾದ **ಬಿ. ಶ್ರೀನಿವಾಸ ಭಟ್ಟರು,** ಸಾಹಿತ್ಯ ಶಿರೋಮಣಿ ಇವರಿಗೂ ಮತ್ತು ಈ ಗ್ರಂಥವನ್ನು ಮುದ್ದಾಗಿ ಮುದ್ರಿಸಿಕೊಟ್ಟ **ಶ್ರೀಕೃಷ್ಣ ಮುದ್ರಣಾಲಯದ** ಪ್ರೊಪ್ರೈಟರರಾದ **ಪಾವಂಜೆ ಗುರುರಾವ್** ಇವರಿಗೂ ಕೃತಜ್ಞತಾಪೂರ್ವಕ ಧನ್ಯವಾದಗಳನ್ನರ್ಪಿಸುತ್ತೇನೆ.

ಶ್ರೀಮುಖ ಸಂ॥ರದ
ಚೈತ್ರ ಶು. ದ್ವಿತೀಯ

ಕನ್ನಡಿಗರಡಿಯಾಳ್,
ವಿ. ರಾ. ಬಲ್ಲಾಳ.

ಅಕಾರಾದ್ಯನುಕ್ರಮಣಿಕೆ.

ಒಪ್ಪೋಲೆ.

ಪದ್ಯದೊಳಗಣದು.

ಪುಟ.	ತಪ್ಪು.	ಶುದ್ಧ.	ಪಙ್ಕ್ತಿ.
3	ಪೋಲ್ವದು	ಪೋಲ್ವುದು	೨೧
5	ನಿಲ್ಪ	ನಿಲ್ವ	೬
8	ಬಲಗೆಯ್ಯ	ಬಲಗೆಯ್ಯು	೨೧
34	ನಂಬಿದಿರರ್	ನಂಬದಿರರ್	೧೦
44	ಅನರ್ಥೋರ್ಜಿತ್ವಾತ	ಅನರ್ಥೋರ್ಜಿತ್ಪಾತ	೧೭
51	ಗುಟ್ಟಿನದ	ಗುಟ್ಟಿನನ	೧
58	ಗುಳುಗುಳಂ	ಗುಳುಗುಳುಂ	೫
,,	ಗುಳುಗಳುಂ	ಗುಳುಗುಳುಂ	೬
78	ಪರುವು	ಪರವು	೧೫

॥ ಶ್ರೀರಸ್ತು ॥

ಪ್ರಥಮ ಮಂಗಲಾಚರಣೆಯು.

ಶ್ರೀಹೇರಂಬಂ ರಮಾಕಾಂತಂ ದುರ್ಗಾದೇವೀಮುಮಾಪತಿಂ ।
ಛಾಯಾನಾಥಮಹಂ ವಂದೇ ತದ್ದಯಾವಾಪ್ತಯೇಽನಿಶಂ ॥

ಸಿರಿರಮಣ! ಕರಿಯರಿಯನರಿದ ಕರುಣಾಕರನೆ!
ನರಹರಿ! ಯಪಾರಸಾಗರದುರಗದಲಿ ಯೊರಗಿ
ಮೆರೆವ ಹರಿಯೇ! "ಶರಣು ಶರಣು" ಎಂದನವರತ ಮೊರೆ
ಮೊರೆವ ನರಪಾಮರಂ ॥
ಕರುಣೆಗಳ ದಾತಾರ! ಬೇರೆ ಪೊರೆವವರ ನಾ .
ನರಿಯೆ ನರೆಯಿರುಳೊಳಂ ನಿನ್ನ ಪೆಸರನ್ನಿರಿಸಿ
ಯರಿಯಬರುವಂತೆನ್ನ ಅಂತರಂಗದಲಂಧಕಾರವಂ ಪರಿ
ಹರಿಸು ನೀಂ ॥

ಶಬ್ದಾರ್ಥ:-ಕರಿ=ಗಜೇಂದ್ರ. ಅರಿ=ಶತ್ರು, (ಮೊಸಳೆ). ಅರಿ=ಕತ್ತರಿಸು. ಅಪಾರಸಾಗರ=ಮೇರೆಯಿರದ ಕ್ಷೀರಸಮುದ್ರ. ಉರಗ=ಶೇಷ. ಒರಗು=ಮಲಗು. ನರಪಾಮರ=ಮನುಷ್ಯರಲ್ಲಿ ಅಜ್ಞಾನಿ. ಅರೆಯಿರುಳ್=ನಡುರಾತ್ರಿ. ಅಂತರಂಗ=ಮನಸ್ಸು. ಅಂಧಕಾರ=ಕತ್ತಲೆ, ಅಜ್ಞಾನ.

ಈ ಕಾವ್ಯದ ಪ್ರಾರಂಭದಲ್ಲಿ ಇಷ್ಟದೇವತೆಯಾದ ಲಕ್ಷ್ಮೀಪತಿಯನ್ನು ಪ್ರಾರ್ಥಿಸಿ ಮಂಗಳಾಚರಣ ಮಾಡಿದುದರಿಂದ ನಿರ್ವಿಘ್ನದಿಂದ ಗ್ರಂಥಸಮಾಪ್ತಿ ಮೊದಲಾದ ಫಲಸಿದ್ಧಿಯೂ ಪದ್ಯದ ಮೊದಲಲ್ಲಿ ಸಿರಿಶಬ್ದ ಪ್ರಯೋಗದಿಂದ ಮಂಗಳವೂ, ಸಕಾರ ಪ್ರಯೋಗದಿಂದ ಸೌಖ್ಯಲಾಭವೂ ಸೂಚಿತವಾಗಿದೆ.

॥ ಶ್ರೀಃ ॥

ಸುರಸಕವಿತಾಹಾರವು.

(ಸರಸಸುಭಾಷಿತ)

೧. ರಾಮ ಪ್ರಾರ್ಥನೆಯು.

ಭ್ರಮಿಸಿ ತಿರುಗಿದೆ ನಾನು ನಾಡುಕಾಡುಗಳಲ್ಲಿ
ಸಮತೆಯಿಲ್ಲದೆ ಕನಕಮೃಗತೃಷ್ಣೆಗೊಳಗಾಗಿ
ಭ್ರಮೆಗೊಂಡು ವೈದೇಹಿ! ವೈದೇಹಿ! ಎನುತ ಕಣ್ಣೀರ
ಕರೆಕರೆದು ಮರುಗೀ ॥
ಸಮತೆಯಾಂತಿರ್ದೊಡಂ ರಾಮತ್ವದಿಂದ ನಾ
ನಮಮ ಕುಶಲವಸುತೆಯ ಪೊಂದಲಾಗದೆ ಪೋಯ್ತು
ಭ್ರಮೆಯನಿದನಳಿದು ಸಲಹೆಂಬ ನೀ ರಾಘವೇಂದ್ರನನು
ಪೊರೆಯೈ ರಾಮನೇ! ॥

ಭಾವಾನುವಾದ:–ಕನಕವೆಂಬ ಮೃಗತೃಷ್ಣೆ. ಮೃಗತೃಷ್ಣೆ=ಬಿಸಿಲ್ಗುದುರೆ. ಕನಕದ+ಮೃಗ, ಕನಕಮೃಗದ+ತೃಷ್ಣೆ=ಬಂಗಾರಬಣ್ಣದ ಜಿಂಕೆಯ ಆಸೆ. ವೈ ದೇಹಿ ವೈ ದೇಹಿ=ಕೊಡು ಕೊಡು. ವೈದೇಹಿ! ವೈದೇಹಿ!=ವಿದೇಹರಾಜನ ಮಗಳೇ! (ಸೀತೆಯೇ!) ಕುಶಲ+ವಸುತೆ=ಹೇರಳ ಹಣ ಉಳ್ಳತನ, ಕುಶ ಮತ್ತು ಲವರೇ ಸುತರಾಗಿಯುಳ್ಳ ಸೀತೆ, ಕುಶಲವ ಸುತೆ, ಧನದಾಸೆಯಿಂದ ಧನಿಕರನ್ನು ಬೇಡಿ ಬೇಡಿ ಮತ್ತು ಧನಾರ್ಜನೆ ಮಾಡಲಾಗಲಿಲ್ಲವೆಂದು ತಾತ್ಪರ್ಯವು.

ಅಲಂಕಾರವು:–ಉಪಮಾನ ಉಪಮೇಯಗಳಿಗೆ ಚೆನ್ನಾಗಿ ಭೇದವಿದ್ದು ಉಪಮೇಯವನ್ನು ವರ್ಣಿಸುವುದು ಆಕ್ಷೇಪಾಲಂಕಾರವು.

ಇಲ್ಲಿ ಉಪಮಾನವಾದ ರಾಮನಿಗೂ ಉಪಮೇಯನಾದ ಕವಿಗೂ ಹೇಳಿದ ಉಪಮೆಯು ಹೆಚ್ಚಿನ ಭೇದವುಳ್ಳದ್ದು. ಕುಶಲವ ಸುತೆಯು ರಾಮನಿಗೆ ಇದೆ. ಕವಿಗೆ ಇಲ್ಲವೆಂದು ನ್ಯೂನಾಕ್ಷೇಪವು. ಕನಕ ಮೃಗತೃಷ್ಣೆ, ವೈದೇಹಿ, ಕುಶಲವಸುತೆ ಶಬ್ದಗಳಲ್ಲಿ ಎರಡರ್ಥವಿರುವುದ ರಿಂದ ಶ್ಲೇಷಾಲಂಕಾರವು ಆಕ್ಷೇಪಕ್ಕೆ ಸಹಕರಿಸುವುದೆಂದು ಅಂಗಾಂಗಿ ಭಾವ ಸಂಕರವು.

೨. ರುದ್ರವಿಷ್ಣುಗಳು.

ಅಗಜಾರ್ತಿನಾಶಕನೆ! ಹೇ! ಅಮರ್ತ್ಯರ ಪತಿಯೆ!
ಶಶಿಖಂಡಮೌಳಿಯೇ! ಶಂಖಕಾಂತಿಯೆ! ಉಮಾ
ಧವನೆ! ಲಂಕೇಶಪೂಜಿತನೆ! ವಾಮಾವಿರಾಜಿತನೆ!
ಪನ್ನಗಧಾರಿಯೇ! ॥
ಅಬಲಾಢ್ಯದೇಹನೇ! ಹೇ ಗವೀಶಾರೂಢ!
ಪರಮೇಶ್ವರನೆ! ಪಿನಾಕಪ್ರೀತಮಾನಸನೆ!
ಹೇ ಕುಮಾರನ ತಾತ! ಪಾಲಿಸೈ ಹರನೆ! ಮೊದಲಿಲ್ಲದಾ
ಹರಿಯೆ ಎನ್ನಾ ॥

ಭಾ:– ಈ ಪದ್ಯದಲ್ಲಿ ರುದ್ರ ವಿಶೇಷಣಗಳ ಮೊದಲಕ್ಷರವನ್ನು ಕಳೆದುಕೊಂಡು ವಿಷ್ಣುವಿನಲ್ಲಿ ಕೂಡಿಸತಕ್ಕದ್ದು. ಅಗಜಾ+ಆರ್ತಿ+ ನಾಶಕ=ಪಾರ್ವತಿಯ ದುಃಖವನ್ನು ಪರಿಹರಿಸುವವ. ಗಜ+ಆರ್ತಿ+ ನಾಶಕ=ಗಜೇಂದ್ರನ ದುಃಖವನ್ನು ಪರಿಹರಿಸಿದವ. ಅಮರ್ತ್ಯಪತಿ=ದೇವ ತೆಗಳ ಒಡೆಯ. ಮರ್ತ್ಯಪತಿ=ಮನುಷ್ಯರ ಒಡೆಯ (ರಾಮ). ಶಂಖ ಕಾಂತಿ=ಶಂಖದಂತೆ ಬಿಳುಪಾದವನು. ಖಕಾಂತಿ=ಆಕಾಶದಂತೆ ನೀಲಬಣ್ಣ ಉಳ್ಳವನು. ಲಂಕೇಶಪೂಜಿತ=ರಾವಣನಿಂದ ಪೂಜಿಸಲ್ಪ ಟ್ಟವನು. ಕೇಶಪೂಜಿತ=ಕ=ಬ್ರಹ್ಮ), ಈಶ=ರುದ್ರ), ಬ್ರಹ್ಮರುದ್ರ ರಿಂದ ಪೂಜಿಸಲ್ಪಟ್ಟವನು. ವಾಮಾವಿರಾಜಿತ=ಪಾರ್ವತಿಯೊಂದಿಗೆ ಶೋಭಿಸುವವನು. ಮಾವಿರಾಜಿತ=ಲಕ್ಷ್ಮಿಯೊಂದಿಗೆ ಶೋಭಿಸು

ವವನು. ಪನ್ನಗಧಾರಿ=ಹಾವುಧರಿಸಿದವನು. ನಗಧಾರಿ=ಪರ್ವತ ವನ್ನು ಪೊತ್ತವನು (ಕೂರ್ಮ). ಅಬಲಾರ್ಧ್ಯದೇಹ=ಅಬಲೆಯಿಂದ ಕೂಡಿದ ಶರೀರವುಳ್ಳವನು (ಅರ್ಧನಾರೀಶ್ವರ). ಬಲಾರ್ಧ್ಯದೇಹ=ಬಲ ದಿಂದ ಕೂಡಿದ ಶರೀರವುಳ್ಳವನು (ಹರಿಯು). ಗವೀಶಾರೂಢ=(ಗೋ+ ಈಶ+ಆರೂಢ), ವೃಷಭವನ್ನು ಏರಿದವನು (ಪರಮೇಶ್ವರ). ವೀಶಾ ರೂಢ=(ವಿ+ಈಶ+ಆರೂಢ), ಹಕ್ಕಿಯನ್ನು ಏರಿದವನು (ರಮೇಶ್ವರ). ಪಿನಾಕಪ್ರೀತಮಾನಸ=ಪಿನಾಕವೆಂಬ ತನ್ನ ಧನುಸ್ಸಿನಲ್ಲಿ ಪ್ರೀತಿಗೊಂಡ ಮನಸ್ಸುಳ್ಳವ. ನಾಕಪ್ರೀತಮಾನಸ=ಸ್ವರ್ಗದಲ್ಲಿ ಪ್ರೀತಿಹೊಂದಿದ ಮನ ಸ್ಸಿನವ. ಮೊದಲಿಲ್ಲದ=ಅನಾದಿಯಾದ, ರುದ್ರನ ವಿಶೇಷಣಗಳ ಮೊದ ಲಕ್ಷರವಿಲ್ಲದ. ಸಂಬೋಧನೆಯ "ಹೇ"ಕಾರವು ವಿಶೇಷಣಗೋಷ್ಠಿಗೆ ಸೇರಿದುದಲ್ಲ.

ಅ:—ಶಬ್ದಗಳನ್ನು ಅಕ್ಷರಗಳ ನಡುವೆ ವಿಂಗಡಿಸಿ ಬೇರೆ ಬೇರೆ ಅರ್ಥಮಾಡಿದರೆ ಸಭಂಗಶ್ಲೇಷವು. ಇಲ್ಲಿ ರುದ್ರ ವಿಷ್ಣುಗಳಿಬ್ಬರೂ ವರ್ಣಿಸಲು ಯೋಗ್ಯರೇ ಇಪ್ಪುದರಿಂದ ಕೇವಲ ಪ್ರಕೃತಶ್ಲೇಷವು.

೩. ಪರಬ್ರಹ್ಮವು.

ಎನ್ನ ನಯನವೆ! ಸಕಲ ತೆರದಿ ಪೋಲುತ್ತಿರ್ಕು
ನಿನ್ನ ನಾ ಪರಬೊಮ್ಮವದುವೆ ಸತ್ತಾರಕಂ
ನಿನ್ನಂತೆ ನಾದಿಯುಂ ನಾಂತವುಂ ಕೃಷ್ಣವರ್ಣವು ಮಾಗಿ
ಬೆಳಗುತಿಹುದೂ ॥
ಬನ್ನಗಳ ಬಿಡಿಸಲ್ಕೆ ಮೂರನೆಯ ಲಿಂಗದಿಂ
ನಿನ್ನನೇ ಸರಿ ಪೋಲ್ವದದನೆ ನೀಂ ನೋಡವೇ
ಳ್ಪಿನ್ನ ಮರುಳಾಗದಿರು ಸ್ತ್ರೀಪುರುಷರಲಿ, ಜಗದಿ ಸಮ
ರೊಳಗೆ ಸ್ನೇಹವಲ್ತೇ? ॥

ಭಾ:—ಸತ್ತಾರಕಂ=ಬಳ್ಳಿಯುಪರನ್ನು (ಸಂಸಾರಸಾಗರದಿಂದ) ಪಾರುಮಾಡತಕ್ಕದ್ದು, ಒಳ್ಳೆಯ ಆಲಿಗಳುಳ್ಳದ್ದು. ನಾದಿ, ನಾಂತ=ತುದಿ

ಮೊದಲಿಲ್ಲದುದು, ಬ್ರಹ್ಮ. ಆದಿ ಮತ್ತು ಅಂತದಲ್ಲಿ ನಕಾರವುಳ್ಳದ್ದು ನಯನ. ಕೃಷ್ಣವರ್ಣ=ನೀಲಮೇಘಶ್ಯಾಮವು, ಕಪ್ಪುವರ್ಣವುಳ್ಳದ್ದು. ಮೂರನೆಯ ಲಿಂಗ=ನಪುಂಸಕಲಿಂಗ, ನಯನ ಬ್ರಹ್ಮಶಬ್ದಗಳೆರಡೂ ನಪುಂಸಕಗಳು. ಈ ಪದ್ಯದಲ್ಲಿ ನಯನ ವಿಶೇಷಣಗಳನ್ನು ಪರ ಬ್ರಹ್ಮನಲ್ಲಿಯೂ ಹೊಂದಿಸಿ ಸಾಮ್ಯವನ್ನು ಸಾಧಿಸತಕ್ಕದು. ವಿಷ ಯಾನುಭವದಲ್ಲಿ ಮಗ್ನವಾಗಿರುವ ಕಣ್ಣು ಸಾಂಸಾರಿಕ ದುಃಖದಿಂದ ಪಾರಾಗಬೇಕಾದರೆ ಅದರಂತಿರುವ ಒಬ್ಬ ಸ್ನೇಹಿತನನ್ನು ಹೊಂದ ಬೇಕು. ಅಂತಹ ಸ್ನೇಹಿತನು ಆ ಪರಬ್ರಹ್ಮನಲ್ಲದೆ ಮತ್ತೊಬ್ಬ ದೊರ ಕಲಾರನು. ಏಕಂದರೆ ಸಮಗುಣರಿಗೆ ಸ್ನೇಹವಲ್ಲದೆ ವಿಷಮಗುಣರಿ ಗಲ್ಲ. ಆದುದರಿಂದ ಕಣ್ಣಿನಂತೆ ಸತ್ತಾರಕವೂ ನಾದಿಯೂ ನಾಂತವೂ ಕೃಷ್ಣವರ್ಣವೂ ಆಗಿ ನಪುಂಸಕಲಿಂಗವುಳ್ಳದಾಗಿಯೂ ಇರುವ ಆ ಪರಬ್ರಹ್ಮವೇ ಯೋಗ್ಯ ಸ್ನೇಹಿತನೆಂದು ಭಾವವು.

ಅ:–ಉಪಮೇಯವನ್ನು ಉಪಮಾನವನ್ನಾಗಿಯೂ ಉಪಮಾನ ವನ್ನು ಉಪಮೇಯವನ್ನಾಗಿಯೂ ವ್ಯತ್ಯಾಸವಾಗಿ ಬಣ್ಣಿಸುವುದು ಪ್ರತೀಪವು. ಇಲ್ಲಿ ಕಣ್ಣನ್ನು ವರ್ಣಿಸುವುದರಿಂದ ಉಪಮೇಯವಾಗಿ ದ್ದರೂ ಉಪಮಾನವನ್ನಾಗಿಟ್ಟುಕೊಂಡು ಪರಬ್ರಹ್ಮನನ್ನೇ ಉಪಮೇಯ ವನ್ನಾಗಿ ಬಣ್ಣಿಸಿಯದೆ. ಅನೇಕಾರ್ಥದ ವಿಶೇಷಣವನ್ನಿತ್ತುದರಿಂದ ಶ್ಲೇಷಾಲಂಕಾರವು ಸಹಕಾರಿಯೆಂದು ಅಂಗಾಂಗಿಭಾವ ಸಂಕರವು. ಕೊನೆಯಲ್ಲಿ "ಜಗದಿ ಸಮರೊಳಗೆ ಸ್ನೇಹವಲ್ತೆ"ಯೆಂದು ಸಾಮಾನ್ಯ ವಚನದಿಂದ ಕಣ್ಣಿಗೆ ಪರಬ್ರಹ್ಮನಲ್ಲಿ ಸ್ನೇಹವು ಯುಕ್ತವೆಂದು ಸಾಧಿ ಸಿದ್ದುದರಿಂದ ಅರ್ಥಾಂತರನ್ಯಾಸಾಲಂಕಾರವು ಹಿಂದಿನ ಅಲಂಕಾರಕ್ಕೆ ಪ್ರತ್ಯೇಕ ಸಂಬಂಧಿಸದೆ ಹೇಳಿದ್ದುದರಿಂದ ಸಂಸೃಷ್ಟಿ. ಹಾಲು ನೀರು ಬೆರೆತಂತೆ ಭೇದ ಕಾಣದೆ ಅಲಂಕಾರಗಳು ಬೆರೆತರೆ ಸಂಕರವು. ಒಂದಕ್ಕೊಂದು ಸಂಬಂಧಿಸದೆ ಭೇದವು ಸ್ಪಷ್ಟವಾಗಿ ಕಂಡು ಪ್ರತ್ಯೇಕ ಅಲಂಕಾರಗಳು ಎಳ್ಳು ಅಕ್ಕಿಗಳಂತೆ ಕೂಡಿದಲ್ಲಿ ಸಂಸೃಷ್ಟಿಯು.

೪. ಸಭೆಯ ಗೌರವ (ಸ್ವಾಹಂಕಾರ ಖಂಡನ).

ಕರೆದರುಂ ಮುಂಪದವನಿಡದೆ, ಕೇಳ್ದರುವುದಕೆ
ಮರುಮಾತುಗೊಡದೆ, ಕಂಪಂ ತಳೆದು, ಸ್ತಂಭವನು
ಮರೆಗೊಂಡು ನಿಂದು, ವೈವರ್ಣ್ಯವಂ ತಾಳ್ದು, ಮಂದಾಕ್ಷದಿಂ
ಮಂದಮುಖವಂ ॥
ಸ್ವರಭಂಗವಂ ಹೊಂದಿಯುಪಕಂಠದೊಳೆ ನಿಲ್ವ
ಸರಸವಾಣಿಯು ಸಭೆಯ ಮುಂದೆ ಮದುಮಗಳಂತೆ
ವರಪಂಡಿತರಿಗಾದೊಡಂ ತಡೆದು ಪೋಪುದೈ ಮತ್ತೆನ್ನ
ಪಾಡದೆಂತೋ! ॥

ಭಾ:-ಮುಂಪದ=ಮುಂದಿನ ಶಬ್ದ, ಮುಂದಿನ ಹೆಜ್ಜೆ. ಕಂಪ=ಸ್ವರಭಂಗ, ನಡುಕ. ತಳೆ=ಹೊಂದು. ಸ್ತಂಭ=ಸ್ತಬ್ಧತೆ, ಕಂಬ. ವೈವರ್ಣ್ಯ=ಅಕ್ಷರಗಳ ಅಭಾವ, ಕಾಂತಿಹೀನತೆ. ಉಪಕಂಠ=ಕುತ್ತಿಗೆಯೊಳಗೆ, ಸಮೀಪ. ಮಂದಾಕ್ಷ=ಕಣ್ಣು ಕಟ್ಟಿದಂತಾಗುವಿಕೆ ಮತ್ತು ಲಜ್ಜೆ. ಮೇಲಿನ ಶಬ್ದಾರ್ಥಗಳನ್ನು ಕ್ರಮವಾಗಿ ಸರಸವಾಣಿಯಲ್ಲಿಯೂ ಮದುಮಗಳಲ್ಲಿಯೂ ಹೊಂದಿಸತಕ್ಕದ್ದು. ಹೊಸ ಮದುಮಗಳನ್ನು ಸಭೆಗೆ ಕರೆದರೆ ಮುಂಧರಿಯದೆ, ಕೇಳಿದ ಮಾತಿಗೆ ಉತ್ತರ ಕೊಡದೆ, ನಡುಗುತ್ತಾ, ಕಂಬದ ಮರೆಯಾಗಿ, ಮುಖಚ್ಛಾಯೆಗೆಟ್ಟು, ನಾಚಿಕೆಯಿಂದ, ಮಂದಮುಖವನ್ನೂ ಸ್ವರಭಂಗವನ್ನೂ ಪಡೆದು, ಸಮೀಪದಲ್ಲಿಯೇ ನಿಲ್ಲುವುದು ಅವಳ ಸ್ವಭಾವವು. ಅಂತೆಯೇ ವಿದ್ವಾಂಸರ ವಾಣಿಯೂ ಸಭೆಯ ಮುಂದೆ ಮುಂದಿನ ಪದತೋರದೆ, ಕೇಳಿದ ಪ್ರಶ್ನೆಗೆ ಉತ್ತರ ಬಾರದೆ, ನಡುಕದಿಂದಲೂ ಸ್ತಬ್ಧತೆಯಿಂದಲೂ ವರ್ಣವ್ಯತ್ಯಾಸದಿಂದಲೂ ಕಣ್ಣುಕಟ್ಟಿದಂತಾಗಿ ಸ್ವರಭಂಗವಾಗಿ ಕುತ್ತಿಗೆಯೊಳಗೇ ನಿಂತುಹೋಗುವುದೆಂಬ ಭಾವವು.

ಅ:-(೧) ಉಪಮಾನ (ಹೋಲಿಸಲಿಕ್ಕೆ ಯೋಗ್ಯವಾದುದು). (೨) ಉಪಮೇಯ ಬಣ್ಣಿಸಲ್ಪಡುವುದು. (೩) ಉಪಮೆ (ಹೋಲಿಕೆ)ಯನ್ನು ತಿಳಿಸುವ ಶಬ್ದ.

(೪) ಉಪಮಾನ ಉಪಮೇಯಗಳೆರಡಲ್ಲಿರುವ ಧರ್ಮ (ಗುಣ) ಈ ನಾಲ್ಕನ್ನು ಹೇಳಿದರೆ ಉಪಮಾಲಂಕಾರವು. ವಿಶೇಷಣಗಳಲ್ಲಿ ಅನೇಕಾರ್ಥವಿರುವುದರಿಂದ ಶ್ಲಿಷ್ಟ ವಿಶೇಷಣ ಉಪಮೆಯೆನಿಸುವುದು. ಇಲ್ಲಿ 'ಸರಸವಾಣಿಯು' ಉಪಮೇಯವು. 'ಸುಮುಮುಗಳು' ಉಪಮಾನವು. 'ತಣಿಸು ಪೋಷಿಪುದೆಂ'ಬುದೇ ಎರಡರಲ್ಲಿರುವ ಧರ್ಮವು 'ಅಂತೆ' ಎಂಬುದು ಉಪಮೆಯನ್ನು ತಿಳಿಸುವ ಶಬ್ದವಾದುದರಿಂದ ಉಪಮಾಲಂಕಾರವು.

---

೫. ಕವಿತೆಯು.

ಇದೆ ಎನ್ನ ಜಾಣ್ನುಡಿಯ ಪದಬಂಧದಾ ಕವಿತೆ
ಇದರ ಸೊಬಗಿನ ಪರಿಯನರಿಯಲಾರದ ಜನರೊ
ಳಿದು ವಿರಸ, ಕಡುಜಾಣರೊಳ್ಸುಭಗ, ಸುರಸ, ರುಚಿರಾಹ್ಲಾದ
ಕಾರಿಯಹುದೈ ॥
ಮುದವೀವುದೇಂ ಚೆಲುವೆಯರೆಬಿರಿದ ಕಣ್ಗೊನೆಯ
ಮದಿರಾಂಬಕಿಯ ಮೋರೆನೋಟ ಕುವರನ ಮನಕೆ?
ಯದೆ ಕಟಾಕ್ಷವು ತರುಣನಿಗೆ ಮೋಹನಾಸ್ತ್ರ ಮಾದನ
ಕಾರಿಯಸ್ತ್ರವಲ್ತೇ? ॥

ಭಾ:– ಪದಬಂಧ=ಶಬ್ದಗಳ ಜೋಡಣೆ. ಸುಭಗ=ಮನೋಹರ. ಚೆಲುವೆಯು=ಸುಂದರಿಯು. ಅರೆ ಬಿರಿದ=ಅರ್ಧ ಅರಳಿದ. ಕಾಮಪ್ರಪಂಚವನ್ನರಿಯದ ಎಳೆಯ ಹುಡುಗರಿಗೆ ಯುವತಿಯರ ಕಡೆಗಣ್ಣೋಟದ ಸ್ವಾರಸ್ಯದ ಅರಿವಾಗದಂತೆ ಕವಿತಾಸ್ವಾರಸ್ಯವು ಸಹೃದಯನಲ್ಲದ ಪುರುಷನ ಮನಸ್ಸಿಗೆ ಒಪ್ಪದು ಎಂದರ್ಥವು.

ಅ:– ಪ್ರತ್ಯೇಕ ಪ್ರತ್ಯೇಕ ಗುಣಗಳಿಂದ ಸದೃಶಗಳಾದ ವಸ್ತುಗಳನ್ನು ಪ್ರತ್ಯೇಕ ವಾಕ್ಯಗಳಿಂದ ಬಣ್ಣಿಸುವುದು ದೃಷ್ಟಾಂತವು. ಇಲ್ಲಿ ಕವಿತೆಯೂ ಚಲುವೆಯೂ ಅವರವರಲ್ಲಿರುವ ವಿಲಾಸಚಮತ್ಕಾರ ಗುಣಗಳಿಂದ ಸದೃಶರಾಗಿರುವುದರಿಂದ ದೃಷ್ಟಾಂತಾಲಂಕಾರವು.

೬. ರಾಮ ಪರಶುರಾಮರು.

ನಿಲ್ಲೆಲೈ ಕ್ಷತ್ರಿಯಕುಲಾಧಮನೆ ರಾಮನೇ!
ಸಲ್ಲಲಿತಬ್ರಾಹ್ಮಣ್ಯವನ್ನರಿತೆನಸ್ತ್ರದಿಂ
ಕೊಲ್ಲಲೇಂ ನೀನ್ನಿಶಾಚರಿಯನೋರ್ವಳ ಪೆಣ್ಣ ಕೊಂದುದಂ
ಭೃಗುರಾಮನೇ! ॥
ಅಲ್ಲವೈ ತಾಟಕೆಯು ಎನ್ನ ಹೆತ್ತಿಹ ತಾಯಿ,
ಮೆಲ್ಲನರುಹೈ ನಾನು ಕ್ಷತ್ರಕುಲವಳಿದವನ
ದೆಲ್ಲರುಂ ಪೊದರೇ! ನಾನಾರು? ಎಂಬ ರಾಮರ ಕಲಹ.
ಕಾಯಾಲಿಸ್ನಾ ॥

ಭಾ:—ಈ ಪದ್ಯದ ಪ್ರತಿ ಒಂದು ಚರಣವೂ ಪರಶುರಾಮ ರಾಮರ ವಾದ ಪ್ರತಿವಾದರೂಪವಲ್ಲಿರುವುದು. ಅವುಗಳಲ್ಲಿ ಪ್ರಥಮ ಚರಣವೇ ಪರಶುರಾಮನ ಮಾತಿನಿಂದ ತೊಡಗುವುದು. ಎರಡನೆಯ ಚರಣವು ರಾಮನ ಉತ್ತರ. ಬ್ರಾಹ್ಮಣನಿಗೆ ಅಸ್ತ್ರಧಾರಣವು ಅನರ್ಹವೆಂಬ ಭಾವವು. ನಿಶಾಚರಿ=ರಾಕ್ಷಸಿ ತಾಟಕಿ. ನಾಲ್ಕನೇ ಚರಣವು ಪರಶುರಾಮನು ತಾಯಿಯನ್ನು ಕೊಂದುದು ದೊಡ್ಡ ಅನ್ಯಾಯವೆಂಬ ಮರ್ಮವನ್ನು ತೋರಿಸುವ ರಾಮನ ಉತ್ತರ.

ಅ:—ಸ್ವರವಿಶೇಷದಿಂದಲಾಗಲೀ ಶ್ಲೇಷದಿಂದಾಗಲೀ ಒಬ್ಬನ ಮಾತಿಗೆ ಮತ್ತೊಂದರ್ಥಮಾಡಿ ಹೇಳುವುದು ವಕ್ರೋಕ್ತಿಯು. ಇಲ್ಲಿ ಕ್ಷತ್ರಿಯಕುಲಾಧಮನೆ ಎಂಬುವುದಕ್ಕೆ ನೀನೇ ಕುಲಾಧಮನೆಂದೂ, ಪೆಣ್ಣಕೊಂದನೆಂಬುದಕ್ಕೆ ನೀನು ಮಾತೆಯ ಕೊಂದವನೆಂದೂ ಅರ್ಥಾಂತರ ತೋರಿಸಿ ಹೇಳಿದ್ದುದರಿಂದ ಅರ್ಥಶ್ಲೇಷ ಮೂಲ ವಕ್ರೋಕ್ತಿಯಲಂಕಾರವಾಗುವುದು.

---

೭. ಸೀತಾವಿವಾಹವು.

ರಾಮನಾ ಧನುಮುರಿಯೆ ಲಜ್ಜೆ ಕೇರುತಿ ಸೀತೆ
ನಾಮದಿಂ ಮೆರೆವ ಮೂರ್ಪೆಣ್ಗಳೈತಂದರಾ

ರಾಮನಂ ವರಿಸಲೆಂದಾಗ ಕಿರಿಯಳ ಪರಿಗ್ರಹಣವಾಗಲು
ಹಿರಿಯಳು ॥
ರಾಮನೊಳ್ಮನಿಸಿನಿಂ ನೆರೆದ ರಾಯರ ಸೇರ
ಲಾಮಧ್ಯಮಳು ಪರಿದಳೆತ್ತೆತ್ತಲೋ! ಜಗದಿ
ರಾಮನೇ! ಕಾಯು ಕಾಮಿನಿಯರಾಟವನಾರು ತಿಳಿವರೈ
ಮೂಜಗದೊಳುಂ ॥

ಭಾ:—ಲಜ್ಜೆ, ಕೀರ್ತಿ, ಸೀತೆ ಎಂಬ ಹೆಸರುಗಳಿಂದ ಶೋಭಿಸುವ ಮೂರು ಹೆಣ್ಣುಗಳು. ಐತಂದರು=ಬಂದರು. ರಾಮನು ಧನುಸ್ಸನ್ನು ಮುರಿಯಲು ಆ ಧನುಸ್ಸನ್ನು ಮುರಿಯಲಾಗದ ಬೇರೆ ಅರಸರಿಗೆ ಲಜ್ಜೆಯೂ ರಾಮನಿಗೆ ಲೋಕವಲ್ಲೆಲ್ಲಾ ಕೀರ್ತಿಯೂ ಉಂಟಾಗಿ ಸೀತೆಯು ರಾಮನನ್ನು ವರಿಸಿದಳೆಂಬ ಭಾವವು. ಕಿರಿಯಳು=ಸೀತೆ. ಹಿರಿಯಳು=ಲಜ್ಜೆ. ಮಧ್ಯಮಳು=ಕೀರ್ತಿ. ಮುನಿಸು=ಸಿಟ್ಟು. "ಹಿರಿಯಳು ರಾಮನೊಳ್ಮನಿಸಿನಿಂ ನೆರೆದ ರಾಯರ ಸೇರಲು" ಅಂದರೆ ನೆರೆದ ರಾಯರಿಗೆ ಲಜ್ಜೆಯಾಗಲು "ಮಧ್ಯಮಳು ಎತ್ತೆತ್ತಲೋ ಪರಿದಳು" ಕೀರ್ತಿಯು ಜಗತ್ತನ್ನೆಲ್ಲಾ ವ್ಯಾಪಿಸಿತು ಎಂಬ ಭಾವವು.

ಅ:—ತಿಳಿಯಲಿಕ್ಕಿರುವುದನ್ನು ಚಮತ್ಕಾರವಾಗಿ ಬೇರೊಂದು ರೀತಿಯಿಂದ ಬಣ್ಣಿಸುವುದು ಪರ್ಯಾಯೋಕ್ತವು. ಇಲ್ಲಿ ಅರಸರಿಗೆ ಲಜ್ಜೆ ಜಗತ್ತಿನಲ್ಲಿ ಕೀರ್ತಿ ಎಂಬವನ್ನು ಬೇರೊಂದು ರೀತಿಯಿಂದ ಬಣ್ಣಿಸಿದುದರಿಂದ ಪರ್ಯಾಯೋಕ್ತವು.

---

೮. ಶ್ರೀರಾಮನ ಎಡಬಲ ತೋಳುಗಳು.

ರಾಮರಾವಣರೊಳಗಣಾ ಕದನದಲಿ ಬಿಲ್ಲ
ರಾಮನಾ ಬಲಗೈಯ್ಯು ಹಿಂದೆಳೆಯೆ ಜರೆದುದಾ-
ವಾಮಕರ ಬಲತೋಳನೂಟಕೊಟದಿ ಮುಂದೆ
ಸರಿದೀಗ ಹಿಂಜರಿವೆಯಾ ॥

ಸಾಮದಿಂ ಕೇಳ್ದಿಂತು ಮಾರ್ನುಡಿದುದಂಜಿನಾಂ
ತಾಮಸನ ರಾವಣನ ತಲೆಗಳನ್ನೊಮ್ಮೆ ನಿ
ರ್ನಾಮಗೈಯಲೆ? ಬೇರೆ ಬೇರೆ ಕತ್ತರಿಸಲೇ? ಕೇಳೆ
ಕಿವಿಯೆಡೆಗೆಯ್ದಿದೆಂ ॥

ಭಾ:-ವೀರರು ಯುದ್ಧದಲ್ಲಿ ಬಾಣಗಳನ್ನೆಸೆಯುವಾಗ ಬಿಲ್ಲಿನ ಹೆದೆಯನ್ನು ಕಿವಿಗಳ ವರೆಗೆ ಎಳೆಯುವ ವಾಡಿಕೆಯನ್ನು ಮನಸ್ಸಿನಲ್ಲಿಟ್ಟು ಕವಿಯು ರಾಮ ರಾವಣರ ಯುದ್ಧದಲ್ಲಿ ರಾಮನ ಬಲಗೈಯ್ಯು ಬಿಲ್ಲಿನ ಹಗ್ಗವನ್ನು ಹಿಂದೆಳೆದುದನ್ನು ನೋಡಿ, ಎಡಗೈಯ್ಯು ಆಕ್ಷೇಪಿಸಲು ಅದಕ್ಕೆ ಉತ್ತರವಾಗಿ ಬಲಗೈಯ್ಯು "ಅಪ್ಪಾ! ನಾನು ರಾವಣನಿಗೆ ಅಂಜಿ ಹಿಂದೆ ಸಾರಿದ್ದಲ್ಲ. ದುಷ್ಟರಾವಣನ ತಲೆಗಳನ್ನೊಮ್ಮೆಯೇ ಕಡಿಯಲೇ ಅಥವಾ ಬೇರೆ ಬೇರೆ ಕತ್ತರಿಸಲೇ ಎಂದು ರಾಮನೊಡನೆ ಕೇಳಲು ಕಿವಿ ಇದ್ದಲ್ಲಿಗೆ ಹೋದೆನು" ಎಂದು ಹೇಳಿದ್ದಾಗಿ ವರ್ಣಿಸುವನು. ಕದನ=ಯುದ್ಧ. ವಾಮಕರ=ಎಡಕ್ಕೈ. ಊಟಕೂಟ=(ಊಟದ+ಕೂಟ) ಊಟದ ಸೇರಿಗೆ. ಸಾಮ=ಸಮಾಧಾನ. ಮಾರ್ನುಡಿ=ಉತ್ತರಕೊಡು. ತಾಮಸ=ತಮೋಗುಣಪ್ರಧಾನನಾದ ರಾವಣನು. ನಿರ್ನಾಮಗೈ=ನಾಶಪಡಿಸು.

ಅ:-ಇನ್ನೊಬ್ಬ ಭ್ರಾಂತಿಯಿಂದ ಶಂಕಿಸಿದಲ್ಲಿ ಸತ್ಯವನ್ನು ಹೇಳಿ ಭ್ರಾಂತಿಯನ್ನು ಕಳೆವುದು ಭ್ರಾಂತಾಪಹ್ನುತಿಯು. ಇಲ್ಲಿ ಎಡಗೈಗೆ ಭ್ರಾಂತಿಯುಂಟಾಗಿದ್ದನ್ನು ಬಲಗೈಯು ಸತ್ಯ ಹೇಳಿ ನಿರಾಕರಿಸಿರುವುದು. ಮತ್ತು ಎಡಬಲಗೈಗಳಿಗೆ ಪ್ರಶ್ನೋತ್ತರ ನಡೆದಿಲ್ಲವಾದರೂ ನಡೆದಿದೆಯೆಂದು ವರ್ಣಿಸಿದ್ದರಿಂದ ಸಂಬಂಧಾತಿಶಯೋಕ್ತಿಯು ಒಂದೇ ಶಬ್ದದಲ್ಲಿ ಎರಡಲಂಕಾರ ಸೇರಿದ್ದರಿಂದ ಏಕವಾಚಕಾನುಪ್ರವೇಶ ಸಂಕರವಾಗುವುದು.

೬. ಅಂಗದನ ರಾಯಭಾರದಲ್ಲಿ ಸ್ವಬಲಪ್ರಕಾಶವು.

ನೀನದಾಕೀರ್ತಿಯೆ! ಶ್ರೀರಾಮರಾಜ್ಯದೊಳು
ನಾನಹೆನು ಸಂದೇಶಗಳನೊಯ್ವ ದೂತನೈ

ವಾನರಂ ಮುನ್ನೊಮ್ಮೆ ಬಂದಾತನೆಲ್ಲಿಹನು? ಲಂಕೆಯಂ
ಬೆಂಕಿಗಿತ್ತಂ ॥
ಪನನೆಂಜೆಂ ರಾವಣಾತ್ಮಜನ ಕೈಸೇರ್ದ
ಮಾನಹಾನಿಗೆ ಕಪಿಗಳೆಲ್ಲರುಂ ಹೊಯ್ದೊಯ್ಯೆ
ತಾನೆತ್ತ ಸರಿದನೋ! ನಾಣ್ಚೆ ಎಲ್ಲಡಗಿಹನೊ!
ತಕ್ಕುದದು ಹೇಡಿಗವಗೇ ॥

ಭಾ:–ಈ ಪದ್ಯವನ್ನೋದುವಾಗ ಇಂದ್ರಜಿತುವು ಬ್ರಹ್ಮಾಸ್ತ್ರದಿಂದ ಹನುಮಂತನನ್ನು ಕಟ್ಟಿದುದನ್ನು ನೆನಪಿನಲ್ಲಿ ಇಡತಕ್ಕದ್ದು. ಹೊಯ್ಯು=ಬಡಿ. ನಾಣ್ಚು=ನಾಚಿಕೆಪಡು. ಇಲ್ಲಿ "ಲಂಕೆಯಂ ಬೆಂಕಿಗಿತ್ತಂ" ಎಂಬುದರಿಂದ ಆ ಕಪಿಯು ಮಹಾಶೂರನೆಂದು ಪ್ರಾಶ್ನಿಕರ ಅಭಿಪ್ರಾಯ. ಅಂತಹನನ್ನು ಉಳಿದ ಕಪಿಗಳು ಹೊಡೆದರೆಂದು ಹೇಳುವುದರಿಂದ ಅವರೆಲ್ಲಾ ಮತ್ತೂ ಶೂರರೆಂದೂ ಈಗ ಬಂದ ತಾನು ಅವರಲ್ಲೊಬ್ಬನಾಗಿದ್ದು ಹಿಂದೆ ಬಂದ ದೂತನಿಗಿಂತ ಎಷ್ಟೋ ಹೆಚ್ಚಿನ ವೀರನೆಂದೂ ಅಂಗದನ ಅಭಿಪ್ರಾಯ.

ಅ:–ನಿಂದೆಯಿಂದ ಸ್ತೋತ್ರವಾಗಲೀ ಸ್ತೋತ್ರದಿಂದ ನಿಂದೆಯಾಗಲೀ ಸ್ಪಷ್ಟವಾಗುವಲ್ಲಿ ವ್ಯಾಜಸ್ತುತಿಯು. ಇಲ್ಲಿ ಹನುಮಂತನ ನಿಂದೆಯಿಂದ ಬೇರೆ ಕಪಿಗಳ ಸ್ತುತಿಯು ಸ್ಪಷ್ಟವಾಗುವುದರಿಂದ ವ್ಯಾಜಸ್ತುತಿ.

---

೧೦. ಅಂಗದನ ಆಟೋಪವು.

ರಾವಣರೆ! ರಾವಣರೆ! ಎಷ್ಟು ರಾವಣರಿಹರು?
ರಾವಣರನೇಕರೊಳರಾರಾರು? ಪೇಳ್ಗೆರ್ಝ?
ರಾವಣನದೊರ್ವನ್ನೆ ಕಾರ್ತವೀರ್ಯಾರ್ಜುನನ ತೋಳ್ಗ
ಳೆಡೆಯಲ್ಲಿ ಬಿದ್ದಂ ॥
ರಾವಣನದೊರ್ವ ತುತ್ತಿಗೆ ನಲಿದ ಬಲಿಯಲ್ಲಿ
ರಾವಣಂ ಮತ್ತೊರ್ವನೆನ್ನ ತೊಟ್ಟಿಲೊಳಿರ್ದ

ರಾವಣನೆ! ನೀಂ ಬೇರೆಯಾಗೆ ನೀನೊಬ್ಬನೆಂದಂಗದಂ
ಮರ್ಮತಿವಿದಂ ॥

ಭಾ:–ಅನೇಕರು–ಒಳರ್=ಹಲವರಿರುವರು. ಮರ್ಮತಿವಿದಂ=ಮರ್ಮಕ್ಕೆ ಇರಿದನು. ರಾವಣನಿಗೆ ಹಿಂದೆ ಕಾರ್ತವೀರ್ಯಾರ್ಜುನಾದಿಗಳಿಂದುಂಟಾದ ಪರಿಭವವನ್ನು ಹೇಳಲು ಅವನ ಮರ್ಮವನ್ನು ಬಡಿದಂತಾಯಿತು ಎಂಬ ಭಾವವು. ರಾವಣನಿಗೆ ಬಲಿಚಕ್ರವರ್ತಿಯಲ್ಲಿ ಉಂಟಾದ ಪರಿಭವದ ಕಥೆಯನ್ನೂ ವಾಲಿಯಲ್ಲಿ ಬಂದ ಪರಾಜಯದ ಕಥೆಯನ್ನೂ ಮುಂದಿನ ೧೪ನೆಯ ಪದ್ಯದ ಟಿಪ್ಪಣಿಯಲ್ಲಿ ನೋಡಿಕೊಳ್ಳುವುದು.

ಅ:–ಅರ್ಥಶಕ್ತಿಯಿಂದ ಗೋಪ್ಯವಾಗಿಟ್ಟಿದ್ದ ವಿಷಯವನ್ನು ಕೊನೆಗೆ ಕವಿಯು ತನ್ನ ಮಾತಿನಿಂದ ವಿವರಿಸಿದರೆ ವಿವೃತೋಕ್ತಿಯು. ಇಲ್ಲಿ ರಾವಣನಿಷ್ಟಂಬ ಮಾತಿನಲ್ಲಿ ಗೋಪ್ಯವಾದ ನಿಂದೆಯು ಮರ್ಮತಿವಿದಂ ಎಂಬುದರಿಂದ ವಿವರಿಸಿರುವುದರಿಂದ ವಿವೃತೋಕ್ತಿಯೆಂಬ ಅಲಂಕಾರವು.

---

೧೧. ಅಂಗದನೊಡನೆ ರಾವಣನ ಅಹಂಕಾರ ಪ್ರದರ್ಶನ.

ನೋಡು ನಾ ಶ್ರೋತ್ರಿಯನ ಮಗನೈಸೆ, ಮಗಳೊಡನೆ
ಕೂಡಲೆಳಸುವನೇನು ಶ್ರೋತ್ರಿಯನೊ! (ಕೋತಿಕೇಳ್)ಅಂಗದನೆ!
ಜೋಡೆನ್ನ ಗೊಡವೆ ನಾನಗ್ನಿಹೋತ್ರಿಯಮಗಂ (ಹೋಮಿಸಿದೆ
ಲಂಕೆಯನ್ನೇ) ಕಳ್ಳಾಂಸದೇಂ ಹೋಮಪ್ಪೆ? ॥
ಮೂಢ! ಎನ್ನಯ ನಗರ ದುರ್ಭೇದ್ಯವಾಗಿಹುದು,
ಕಾಡುಕೋಡಗ ಸುಟ್ಟು ಸೂರೆಗೆಯ್ದುಳಿದಿಹುದೆ?
ನೋಡೆನ್ನ ರಕ್ಕಸರ ಬೆಂಬಲವ, ಕಂಡೆ ನಿನ್ನಯ ತಂಗೆಯಾ
ಬಲವನೂ ॥

ಭಾ:–ಶ್ರೋತ್ರಿಯ=ವೇದಾಧ್ಯಾಯಿ, ಸದಾಚಾರ ಸಂಪನ್ನ. ರಾವಣನು ವಿಶ್ರವಸ್ಸುಋಷಿಯ ಮಗನು. ಐಸೆ=ಸಿಶ್ಚಯ. ಎಳ

ಸುವನು=ಉದ್ಯೋಗಮಾಡುವವನು. ಇಲ್ಲಿ ಸೀತೆಯು ಮಂಡೋದರಿಯಲ್ಲಿ ಹುಟ್ಟಿದಳೆಂದೂ ಆ ಮೇಲೆ ಮಂಡೋದರಿಯು ಆ ಮಗುವನ್ನು ರಾವಣನಿಗೆ ತಿಳಿಯದಂತೆ ಮಿಥಿಲಾಪಟ್ಟಣದ ಬದಿ ನೆಲದಡಿಯಲ್ಲಿ ಮುದುಗಿಸಿಟ್ಟಳೆಂದೂ ಆ ಮಗುವೇ ಮುಂದೆ ಜನಕರಾಜನಿಗೆ ಸಿಕ್ಕಿತೆಂದೂ ಪುರಾಣ ಕಥೆಯನ್ನು ತಿಳಿಯತಕ್ಕದ್ದು. ಅಗ್ನಿಹೋತ್ರೀ=ಅಗ್ನಿಹೋತ್ರ ಯಾಗಮಾಡುವವ. ದುರ್ಭೇದ್ಯ=ಒಡೆಯಲು ಅಸಾಧ್ಯವಾದುದು. ಜೆಂಬಲ=ಪರಿವಾರ. ತಂಗೆ=ತಂಗಿ ಶೂರ್ಪಣಖೆ.

ಅ:–ಇಲ್ಲಿ ಮಗಳೊಡನೆ ಕೂಡಲು ಬಯಸುವವನು ಎಂತಹ ಶ್ರೋತ್ರಿಯನೋ! ಲಂಕೆಯನ್ನು ಹೋಮಿಸಿದುದು ಯಾವ ಹೋಮವೋ? ಕಪಿಯು ಸುಟ್ಟಮೇಲೂ ನಿನ್ನ ಪಟ್ಟಣವುಂಟೇ! ನಿನ್ನ ಸಾಕ್ಷಾತ್ ತಂಗಿಯು ಬಲವನ್ನು ಕಂಡೆನು ಎಂಬ ಉತ್ತರಗಳಲ್ಲಿ ಸ್ವರವಿಕಾರದಿಂದ ನೀನು ಶ್ರೋತ್ರಿಯನಲ್ಲವೆಂದೂ ಅಗ್ನಿಹೋತ್ರಿಯಲ್ಲವೆಂದೂ ನಿನ್ನ ನಗರವು ದುರ್ಭೇದ್ಯವಲ್ಲವೆಂದೂ ರಕ್ಕಸರ ಬಲವು ಫಲಕಾರಿಯಲ್ಲವೆಂದೂ ಅರ್ಥಾಂತರವನ್ನು ಕಲ್ಪಿಸುವುದರಿಂದ ವಕ್ರೋಕ್ತಿಯೆಂಬ ಅಲಂಕಾರವು.

---

೧೨. ಅಂಗದನನ್ನು ರಾವಣನು ವಿಚಾರಿಸುವುದು.

ಡೇರೆ! ವಟು! ಬಲ್ಲೊಡೆಯಮಾಣೆ(ಯುಮ್ಮರಿದೆಯಾ!)
ಯನ್ನರಿಯೆಯಾ!
ಆರು ನೀಂ? ಎಮ್ಮ (ಕಂಡೊಡಮರಿಯಲಾರೆಯಾ!)
ಕಂಡುಂ ಜಾತಿಯರಿಯೆಯಾ!
ಆರ ಮಗ? ನಿನಗುಪ್ಪುನೀರಕುಡಿಸಿದನ ಮಗ, ತೋಳ್ಬಲವ
ನೋಡು ಮೂಢಾ ॥
ಆರಯಲ್ಕಿಂದೆಯರಿತಿಹೆ ಜಿಟ್ಟವೆತ್ತಲ್ಕೆ.
ಪೇರಿ ದೂತನ ಕೊಲ್ಲೆ ಹೇಸುವೆಂ, ನೋಡೆ ಪರ
ನಾರಿಯರ ಕಳುವಂಗದೇತರದ ಹೇಸುಗೆಯೊ! ಹೇಸುವಂ
ಕಳುವನೇನ್ನೈ ॥

ಭಾ:-ವಟು=ಹುಡುಗ. ಬಲ್ಪೊಡೆಯ=ದೊಡ್ಡ ಹೊಟ್ಟೆವುಳ್ಳ. ಮಾಣಿ=ಹುಡುಗ, ಇಲ್ಲಿ ದೊಡ್ಡ ಹೊಟ್ಟೆಯ ಹುಡುಗನೆಂದರೆ ಗಣಪತಿಯೆಂದು ಅಂಗದನ ಅಭಿಪ್ರಾಯ. ರಾವಣನು ಹಲವು ವರುಷ ರುದ್ರ ತಪಸ್ಸನ್ನು ಮಾಡಿ ತಂದ ಪ್ರಾಣಲಿಂಗವನ್ನು ಮೂತ್ರವಿಸರ್ಜನೆಯ ಸಮಯ ಅಶುದ್ಧವಾಗಬಾರದೆಂದು ಸಮೀಪದಲ್ಲಿದ್ದ ಡೊಳ್ಳುಹೊಟ್ಟೆಯ ಮಾಣಿ ಗಣಪತಿಯ ಹತ್ತಿರ ಕೊಡಲು ಅದನ್ನು ಗಣಪತಿಯು ಗೋಕರ್ಣದಲ್ಲಿ ನೆಲದಲ್ಲಿಟ್ಟು ರಾವಣನಿಗೆ ಆ ಲಿಂಗವು ಸಿಕ್ಕದಂತೆ ಮಾಡಿ ಸಾಕು ಸಾಕೆನಿಸಿದ ಕಥೆಯನ್ನು ನೆನೆಪಿನಲ್ಲಿರಿಸಿಕೊಳ್ಳಬೇಕು. ಎನ್ನ ಕಂಡೊಡಂ ಅರಿಯಲಾರೆಯಾ=ನನ್ನನ್ನು ಕಂಡರೂ ಗುರುತು ಹತ್ತುವುದಿಲ್ಲವೆ. ಅಂದರೆ ತನ್ನ ತೊಟ್ಟಿಲಲ್ಲಿ ಹಲವು ವರುಷಗಳ ವರೆಗೆ ಸಿಕ್ಕಿಬಿದ್ದ ರಾವಣನ ಪರಿಭವವನ್ನು ಅಂಗದನು ಸೂಚಿಸುವನು. ಉಪ್ಪುನೀರ ಕುಡಿಸಿದನ ಮಗ=ರಾವಣನಿಗೆ ಉಪ್ಪುನೀರು ಕುಡಿಸಿದವನು ವಾಲಿ. ಆರಯಲ್ಕೆ=ಆಲೋಚಿಸಲಿಕ್ಕೆ. ಬೆಟ್ಟವ+ಎತ್ತಲ್ಕೆ=ಬೆಟ್ಟವನ್ನು ಎತ್ತಿದಾಗ. ಹಿಂದೆ ರಾವಣನು ಈಶ್ವರನ ಬೆಟ್ಟವಾದ ಕೈಲಾಸವನ್ನು ಎತ್ತುವುದಕ್ಕೆ ಕೈ ಇಕ್ಕಲಾಗಿ ಅದನ್ನು ತಿಳಿದ ಈಶ್ವರನು ಬೆಟ್ಟವನ್ನು ಒತ್ತಲು ಸಿಕ್ಕಿದ ಕೈಯನ್ನು ತೆಗೆಯಲಾರದೆ ರಾವಣನು ಕೆಲ ದಿನಗಳ ವರೆಗೆ ಅಲ್ಲೇ ನರಳುತಿದ್ದನೆಂಬ ಕಥೆಯನ್ನು ತಿಳಿದುಕೊಳ್ಳಬೇಕು.

ಅ:-ಇಲ್ಲಿ ದೊಡ್ಡ ಹೊಟ್ಟೆಯ ಗಣಪತಿಯನ್ನು ಮರೆತೆಯೋ! ನನ್ನನ್ನು ಕಂಡಿದ್ದರೂ ಗುರುತಿಲ್ಲವೇ! ಬೆಟ್ಟವೆತ್ತಿದಾಗ ನಿನ್ನ ಬಲವನ್ನು ಕಂಡಿರುವೆನು 'ಹೇಸುವಂ ಕಳುವನೇನೋ'! ಎಂಬ ಉತ್ತರಗಳಲ್ಲಿ ಕಾಕುಸ್ವರದಿಂದ ನಾನು ಹುಡುಗನಂತಿದ್ದರೂ ಹೆಚ್ಚು ಬಲವುಳ್ಳವನೆಂದೂ ನನ್ನ ಗುರುತು ನಿನಗಿರುವುದೆಂದೂ ನಿನಗೆ ತೋಳ್ಬಲವಿಲ್ಲವೆಂದೂ ದೂತನ ಕೊಲೆಯಲ್ಲಿ ನೀನು ಹೇಸಲಾರೆಯೆಂದೂ ಅರ್ಥಾಂತರವನ್ನು ಕಲ್ಪಿಸುವುದರಿಂದ ವಕ್ರೋಕ್ತಿಯೆಂಬ ಅಲಂಕಾರವು.

೧೩. ವಾಕ್ಚಾತುರ್ಯ.

ಬರ್ಪುದೌ ತ್ರಿದಶಮುಖಹಾನಿ ಈಗಳೆ ಸೀತೆ
ಇರ್ಪುದೌ ವಿಪದಮುಚ್ಚಂ ನಿನಗೆ ವೈದಲೈ
ತರ್ಪನಲ್ತಿದನಾಲಿಸೌ ರಾಮನೀ ರಕ್ಕಸನ ಚಂದವಿನ್ನು ನೋಡೌ ॥
ಬೇರ್ಪಡಿಸೆ ಮನವ ನಿಂತುಸಿರ್ವ ರಕ್ಕಸಿಗಾಗ
ತೋರ್ಪ ಮೂರ್ನೊದಲಡಿಯ ನಾಲ್ಕನೆಯ ವರ್ಣವಂ
ಬೇರ್ಪಡಿಸಿ ಕಳೆದೋದು ಮೂಢೆ! ಯಂತಪ್ಪುದೌ
ಎಂದಳಾ ಸೀತೆಯೊಲವಿಂ ॥

ಭಾ:-ಇಲ್ಲಿ ಸೀತೆಗೆ ಭಯವನ್ನುಂಟುಮಾಡಿ ರಾವಣನಲ್ಲಿ ಅನುರಾಗವನ್ನು ಹುಟ್ಟಿಸಬೇಕೆಂದು ಓರ್ವ ರಕ್ಕಸಿಯು ಸೀತೆಯನ್ನು ಕುರಿತು ಎಲೌ ಸೀತೆ! ಮುಂದೆ ರಾವಣನ ಪ್ರತಾಪದಿಂದ ದೇವತೆಗಳ ಮುಖವು ಬಾಡುವುದು ನಿನಗೂ ಮೇಲಾದ ಕಷ್ಟಗಳು ಬರಲಿಕ್ಕಿವೆ. ರಾಮನಾದರೂ ಇಲ್ಲಿಯ ವರೆಗೆ ಬಂದು ನಿನ್ನನ್ನು ಕೊಂಡೊಯ್ಯುವನೆಂಬ ಮಾತು ಸುಳ್ಳು ಆದುದರಿಂದ ನೀನು ರಾವಣನನ್ನೇ ಪ್ರೀತಿಸು ಎಂದು ಸೀತೆಯ ಮನಸ್ಸನ್ನು ಬೇರಾಗಿಸಲು ಉಸುರುವಳು. ಆ ರಕ್ಕಸಿಯ ಮಾತನ್ನೇ ತಿರಿಗಿಸಿ ಮೂಢೆ! ನಿನ್ನ ಮಾತುಗಳ ನಾಲ್ಕನೆಯ ಅಕ್ಷರಗಳನ್ನು ಕಳೆದೋದಿದರೆ ಎಂತು ಅರ್ಥವಾಗುವುದೋ ಆ ಅರ್ಥವೇ ಸಂಭವಿಸುವುದು ಎಂದು ಸೀತೆಯ ಉತ್ತರವು. ಮೊದಲ ಮೂರು ಚರಣಗಳ ನಾಲ್ಕನೇ ವರ್ಣವನ್ನು ಕಳೆದರೆ "ತ್ರಿದಶಮುಖಹಾನಿ" ಎಂದಿದ್ದುದು "ದಶಮುಖಹಾನಿ"ಯೆಂದೂ "ವಿಪದಂ" ಎಂದಿದ್ದು "ಪದಂ"ಯೆಂದೂ "ಐತರ್ಪನಲ್ತಿದನಾಲಿಸೌ ರಾಮನು" ಎಂದಿದ್ದುದು "ಐತರ್ಪನದನಾಲಿಸೌ"ಯೆಂದೂ ಆಗುವುದು. ಅದರಿಂದ ದೇವತೆಗಳ ಮುಖಗ್ಲಾನಿಗೆ ಬದಲಾಗಿ ರಾವಣನ ಮುಖಗ್ಲಾನಿಯೇ ಆಗುವುದೆಂದೂ ತನಗೆ ವಿಪತ್ತು ಉಂಟಾಗುವ ಬದಲಿಗೆ ಉಚ್ಚಪದವೇ ಉಂಟಾಗುವುದೆಂದೂ ರಾಮನು ಸರ್ವಥಾ ಇಲ್ಲಿವರೆಗೆ ಬರುವನೆಂದೂ ಸೀತೆಯ ಅಭಿಪ್ರಾಯವು ಸೂಚಿಸಿದಂತಾಗುವುದು.

ಅ:-ಇಲ್ಲಿ ರಕ್ಕಸಿಯು ಮಾತಿಗೆ ಶ್ಲೇಷದಿಂದ ಅರ್ಥಾಂತರವನ್ನು ಕಲ್ಪಿಸಿ ಉತ್ತರಕೊಡುವುದರಿಂದ ವಕ್ರೋಕ್ತಿಯೆಂಬ ಅಲಂಕಾರವು.

---

೧೪. ರಾವಣಗೆ ವಿಭೀಷಣನ ಹಿತೋಪದೇಶ.

ಕೇಳು ನಿನ್ನಜ್ಜನಾಲ್ಮೊಗನಿತ್ತ ನಿನಗೀಗ
ಕೇಳು ಮೇಣ್ಮ್ರವೊರ್ಗವ ನೀನವನ ಮುಖಗಳೊಳ್
ಕಾಳುಮಾಡಿದೆ ಯೊಮ್ಮೆಯೊಂದ ಬೆಳ್ವಿಟ್ಟದಡಿಬಿದ್ದು
ಮತ್ತೊಂದ ವಾಲೀ ॥
ಬಾಲದಲಿ ಜೋಲ್ದಾಗಳೆನ್ನೊಂದ ರಕ್ಕಸಿಯು
ಬೀಳಿಸಾ ಕುಕ್ಕೆಯಡಿ ನಿಂತಾಗಲುಳಿದೊಂದ
ಹಾಳುಗೆಡಿಸದಿರಣ್ಣ! ಜಾನಕಿಯ ಕೊಡು ಬೇಗ
ರಾಮಂಗೆ ತಮ್ಮನೆಂದಂ ॥

ಭಾಃ-ನಾಲ್ಮೊಗಂ=ಚತುರ್ಮುಖಬ್ರಹ್ಮ. ಕಾಳುಮಾಡಿದೆ=ಹಾಳುಮಾಡಿದೆ. ಬೆಳ್ವಿಟ್ಟ=(ಬೆಳ್ಪು+ಬೆಟ್ಟ ಕ. ಸ). ಹಿಮಾಚಲ. ಮೊಮ್ಮಗನಾದ ರಾವಣನ ಒಂದೊಂದು ಪರಿಭವವನ್ನು ಎಣಿಸಿದಾಗ ಬ್ರಹ್ಮನ ಒಂದೊಂದು ಮುಖವು ಮ್ಲಾನವಾಯಿತು ಎಂಬ ಭಾವವು. ಇಲ್ಲಿ ರಾವಣನು ಒಮ್ಮೆ ಈಶ್ವರಸಮೇತ ಕೈಲಾಸಪರ್ವತವನ್ನೇ ಎತ್ತಿ ತರುವೆನೆಂದು ಅದರಡಿಗೆ ಕೈಯಿಕ್ಕಿದಾಗ ಈಶ್ವರನು ತನ್ನ ಐಚ್ಛಿಕಗೌರವದಿಂದ ಪರ್ವತವನ್ನೊತ್ತಲು ಕೈಗಳು ಸಿಕ್ಕಿಕೊಂಡು ಅಲ್ಲೇ ಕೆಲವುಕಾಲಗಳ ವರೆಗೆ ನರಳುತ್ತಿದ್ದನೆಂಬ ಕಥೆಯನ್ನೂ ಮತ್ತೊಮ್ಮೆ ವಾಲಿಯೊಡನೆ ಯುದ್ಧಕ್ಕೆ ಹೋದಾಗ ಅವನು ರಾವಣನನ್ನು ಕಂಕುಳುಗಳಿಂದಲೇ ಬಗಿದು ಅನೇಕ ದಿನಗಳ ವರೆಗೆ ಅಂಗದನ ತೊಟ್ಟಿಲಲ್ಲಿ ಕಟ್ಟಿದ್ದನೆಂಬ ಕಥೆಯನ್ನೂ ಹಾಗುವೊಮ್ಮೆ ಬಲಿಯೊಡನೆ ಯುದ್ಧವನ್ನು ಬಯಸಿ ಪಾತಾಳಕ್ಕೆ ಹೋದಾಗ ಅಂಗಳದಲ್ಲಿದ್ದ ರಾವಣನನ್ನು ಓರ್ವ ದಾಸಿಯು ನೋಡಿ ಅವನ ಮೇಲೆ ಒಂದು ಕುಕ್ಕೆ

ವನ್ನು ಕವುಚಿ ಅದರಡಿಯಲ್ಲೇ ಅವನನ್ನು ಕೆಲದಿನ ತಡೆದಿಟ್ಟಳೆಂಬ ಕಥೆಯನ್ನೂ ಮನಸ್ಸಿನಲ್ಲಿಡಬೇಕು. ರಾವಣನು ಕುಕ್ಕೆಯಡಿಯಲ್ಲಿದ್ದಾಗ ದಾಸಿಯು ಅವನಿಗೆ ಆಹಾರವನ್ನು ಕೊಡಬಂದಾಗಲೆಲ್ಲಾ ಅವನನ್ನು ಒಮ್ಮೆ ಕುಣಿಯಹೇಳಿ ಮತ್ತೆ ಆಹಾರವನ್ನು ಕೊಡುತ್ತಿದ್ದಳು.

ಅ:-ಹಿಂದಿನ ಕಾರ್ಯಗಳಲ್ಲಿ ನಿನಗಾದ ಅವಮಾನದಂತೆ ಈಗಲೂ ಅವಮಾನಕ್ಕೆ ಗುರಿಯಾಗುವಿರೆಂಬಭಿಪ್ರಾಯವನ್ನೇ ಬೇರೆ ಕ್ರಮದಿಂದ ಬಣ್ಣಿಸಿದುದರಿಂದ **ಪರ್ಯಾಯೋಕ್ತಾಲಂಕಾರವು.**

---

೧೫. ಹರಿಮಹಿಮೆಯು.

ದೇವ! ನಿನ್ನಯ ಚರಣಸಂಗಮಾತ್ರವ ಪಡೆದ
ಗ್ರಾವದೊಡ್ಡುಂ ಮಹಿಳೆಯಾಯಿತ್ತೈ ದೀನಜನ
ಪಾವನನೆ! ನೀರ್ನಿನ್ನ ಕಾಲ್ಪೊರ್ದೆ, ಗಂಗೆ, ಎಂದಾಯ್ತು
ಪೆಣ್ಣಾನು ಜವದೆ ॥
ಶ್ರೀವಧೂಕಾಂತ! ವಟು ವಾಮನನ ಕಾಲ್ಸೋಂಕೆ,
ಭೂವರಂ ಬಲಿರಾಜನಾದನ್ನೈ ಕೆಳಗಣಾ
ಹಾವಿಳೆಯೊಳಿಳೆಯಾಳ್ಮನೆನಲಾನು ನಿನ್ನಡಿಯ ಮುಟ್ಟದಲೆ
ದೂರ ನಮಿಪೆಂ ॥

ಭಾ:-ಗ್ರಾವ=ಕಲ್ಲು. ಒಡ್ಡು=ಖಂಡ. ಮಹಿಳೆ=ಹೆಂಗಸು. ಪೊರ್ದು=ಹೊಂದು. ಭೂವರ=ಅರಸು. ಹಾವಿಳೆ=ಪಾತಾಳ. ಈ ಪದ್ಯವನ್ನೋದುವಾಗ ಅಹಲ್ಯಾಶಾಪ ಮೋಕ್ಷಕಥೆ, ಗಂಗೋತ್ಪತ್ತಿ ಕಥೆ, ಬಲಿಚಕ್ರವರ್ತಿಯ ದಾನಕಥೆಯನ್ನೂ ನೆನಪಿನಲ್ಲಿಡತಕ್ಕದ್ದು.

ಅ:-ನಿಂದೆಯಂತೆ ಮೇಲಿನಿಂದ ತೋರಿ ತಾತ್ಪರ್ಯದಲ್ಲಿ ಸ್ತೋತ್ರವು ತಿಳಿಯುವಲ್ಲಿ ವ್ಯಾಜಸ್ತುತಿಯು. ಇಲ್ಲಿ ಕಲ್ಲೂ ನೀರೂ ಹೆಂಗಸಾಯಿತು ಬಲಿಯು ಪಾತಾಳಕ್ಕಿಳಿದನೆಂಬ ನಿಂದೆಯಿಂದ ಕಲ್ಲನ್ನೂ ಹೆಣ್ಣುಮಾಡುವ, ಬಲಿಯನ್ನು ಪಾತಾಳಕ್ಕಿಳಿಸಿದ ಮಹಾಮಹಿಮನೆಂದು ಹೊಗಳಿದಂತಾದುದರಿಂದ ವ್ಯಾಜಸ್ತುತಿಯು.

೧೬. ಧನಯಾಚನೆಯು.

ಬೇಡಲೇನಯುತಧನವನದಾಯಿತಧನವೇ
ಬೇಡಲೇಂ ನಿಯುತವಂ ನಿಧನವಿದರಿಂದಾಯ್ತು
ಬೇಡಲಿನ್ನೇನನ್ನು ಧನಪರಾರ್ಧವ ಬೇಡಲದು ನಕಾರವೆ
ನೋಡಲ್ಕೆ ॥
ಬೇಡಲರಿಯೆನು ಹರಿಯೆ! ಹಣವ ಹಣವಂತರೊಳ್
ಕಾಡುವೆನು ಎನ್ನ ಬಟ್ಟೆಯ ತೆರದೊಳಿರ್ಪವನೆ!
ನೀಡು, ನಡುತುದಿಮೊದಲುಯೆಣೆಯಿಲ್ಲದನೆ! ಹಳೆಬ!
ದೆಶೆಯಿಲ್ಲದವನೆ! ಧನವಾ ॥

ಭಾ:-ಅಯುತ=ಹತ್ತುಸಾವಿರ. ಅಯುತಧನ=ಹತ್ತುಸಾವಿರದಷ್ಟುಧನ ಮತ್ತು ಅಕಾರ ಕೂಡಿದ ಧನ. ಅಧನ=ಧನವಲ್ಲದ್ದು. ನಿಯುತ=ಹತ್ತುಲಕ್ಷ. ನಿಯುತಧನ=ಹತ್ತುಲಕ್ಷದಷ್ಟುಧನ ಮತ್ತು ನಿಕಾರ ಕೂಡಿದ ಧನ. ನಿಧನ=ನಾಶ. ಪರಾರ್ಧ=ಸಂಖ್ಯೆಗಳಲ್ಲಿ ಕೊನೆಯ ಸಂಖ್ಯೆ. ಧನಪರಾರ್ಧ=ಧನಶಬ್ದದ ಕೊನೆಯ ಅರ್ಧ ಅಂದರೆ ನಕಾರ. ಅಂದರೆ ಧನಿಕರಲ್ಲಿ ಏನನ್ನು ಬೇಡಲೆಳಸಿದರೂ ಅದು "ಇಲ್ಲ" ಎಂಬ ಭಾವನೆಯನ್ನೇ ಹೊಳೆಯಿಸುವುದು ಎಂಬ ಭಾವವು. ಹಾಗೂ ನನ್ನ ಬಟ್ಟೆಯಂತಿರುವ ನಿನ್ನನ್ನೇ ಬೇಡುವೆನು. ಸಮಾನರಲ್ಲಿ ಸುಖದುಃಖ ನಿವೇದನೆಯು ಫಲಕಾರಿಯಾಗುವುದೆಂಬ ಭಾವವು. ಹರಿಯು ನಡು ತುದಿ ಮೊದಲು ಎಣೆಯಿಲ್ಲದವನು. ಅಂದರೆ ಆದಿಮಧ್ಯಾಂತರಹಿತನೆಂದೂ ಅಸದೃಶನೆಂದೂ ಭಾವವು. ಬಟ್ಟೆಯೂ ನಡು ತುದಿ ಮೊದಲು ಇಲ್ಲದುದು, (ಶೀರಾ ಗಂತೆಯು). ಆದುದರಿಂದಲೇ ಎಣೆಯಿಲ್ಲದುದೆಂಬ ಭಾವವು. ದೇವರು ಹಳಬ ದೆಶೆಯಿಲ್ಲದವನು ಪುರಾತನ, ಅವಸ್ಥಾ ಭೇದಗಳಿಲ್ಲದೆ ಏಕಪ್ರಕಾರನಾದವನು. ಬಟ್ಟೆಯೂ ಪುರಾತನ, ದೆಶೆಯಿಲ್ಲದುದು. ಅಂದರೆ ಎರಡು ಅಂಚುಗಳೂ ಇಲ್ಲದುದು ಎಂದು ಅರ್ಥವು.

ಅ:–ತಾನು ಹೇಳಿದ್ದನ್ನೇ ವಿಚಾರಮಾಡಿ ನಿಷೇಧಿಸುವುದು ಆಕ್ಷೇಪವು. ಇಲ್ಲಿ ಅಯುತಧನವನ್ನು ಬೇಡಲೇ ಅದು ಅಧನವೇ ಆಯಿತೆಂದು ಮುಂತಾದ ವಾಕ್ಯಗಳಲ್ಲಿ ತಾನು ಹೇಳಿದ್ದುದನ್ನೇ ನಿಷೇಧಿಸಿರುವುದು. ಅದು ಶ್ಲೇಷದಿಂದ ಸಾಧಿಸಲ್ಪಟ್ಟದ್ದರಿಂದ ಶ್ಲೇಷಾನುಪ್ರಾಣಿತಾಕ್ಷೇಪಾಲಂಕಾರ ಸಂಕರವು. 'ಬಟ್ಟೆಯ ತೆರದೊಳಿರ್ಪನನೆ'ಯೆಂಬಲ್ಲಿ ಉಪಮಾಲಂಕಾರವು.

---

೧೭. ಹರಿಪ್ರತಿಮೆಯು.

ಮಡದಿಯೊರ್ವಳು ಚಂಚಲೆಯು ತನಗೆ, ಮತ್ತೊರ್ವೆ
ಜಡಪ್ರಕೃತಿಯಾದವಳು, ಮಗನು ದೈವದ್ರೋಹಿ
ಬೆಡಗಿನವ ಮುನಿಗಳಿಗು ಘಾತಕಂ ಮೂಜಗದೊಳಗೆ
ವಿಲಕ್ಷಣಪೂರುಷಂ ॥
ಸಡಗರದ ಮನ್ಮಥನು, ವಿಷದ ಹಾವೇ ಹಾಸು,
ಚಲಜಲಧಿಯೇ ಮಂಚ, ತೇರು ಹಾಸಿನ ಪಗೆಯು,
ಕಡುಚಿಂತೆಗೊಂಡು ನೆನೆನೆನೆದು ಮನೆಯಾಟವಂ ಕಲ್ಲಾದ
ಹರಿಯೆಲ್ಲಿಯುಂ ॥

ಭಾ:–ಈ ಪದ್ಯವಲ್ಲಿ ಕವಿಯು ದೇವರನ್ನು ಶಿಲಾವಿಗ್ರಹದಿಂದ ಆರಾಧಿಸುವ ಪದ್ಧತಿಯನ್ನು ಆಲೋಚಿಸಿ ಸ್ವಾರಸ್ಯಕ್ಕಾಗಿ ದೇವರನ್ನು ಕಲ್ಲಾಗಿ ಇಟ್ಟುಕೊಂಡು, ಹಾಗೆ ದೇವರು ಕಲ್ಲಾದ ಕಾರಣವನ್ನು ಹೀಗೆ ವರ್ಣಿಸುವನು. ಹರಿಗೆ ಶ್ರೀದೇವಿ ಭೂದೇವಿಯರೆಂಬ ಇಬ್ಬರು ಹೆಂಡತಿಯರಷ್ಟೆ? ಅವರಲ್ಲಿ ಶ್ರೀಯು ಚಂಚಲೆ=ಸ್ಥಿರಪ್ರಕೃತಿಯವಳಲ್ಲ. ಮತ್ತೊಬ್ಬಳು ಭೂದೇವಿ. ಅವಳು ಜಡಪ್ರಕೃತಿಯು=ಜಡಸ್ವಭಾವದವಳು. ಇವರಿಂದ ಯಾವ ಕೆಲಸವೂ ಸಾಗದಷ್ಟೆ? ಇನ್ನು ಮಗನ ಮಾತು, ಅವನೇ ಮನ್ಮಥನು, ಅವನು ದೈವದ್ರೋಹಿ=ಸಂಯಮಿಯಾಗಿ ಕುಳಿತ ಹರನಿಗೆ ಬಾಣ ತಿವಿದವನು, ಮುನಿಘಾತಕ, ಮುನಿಗಳ ಮನಸ್ಥೈರ್ಯವನ್ನು ಕೆಡಿಸುವವನು. ಜಗತ್ತಿನಲ್ಲಿ ವಿಲಕ್ಷಣ ಪುರುಷ.

ಅಂದರೆ ಲೋಕದ ಜನರಂತೆ ಸಾಮಾನ್ಯವಾಗಿರದೆ ಕುಸುಮಧನ್ವನೂ ಪುಷ್ಪಬಾಣನೂ ಅನಂಗನೂ ಆಗಿರುವನು. ಅಂಗವೇ ಇಲ್ಲದ ಈತನು ತನ್ನ ಆಯುಧಗಳಾದ ಹೂಗಳಿಂದ ಯಾವ ಕಾರ್ಯವನ್ನು ಮಾಡಲಾಪನು ಎಂಬ ಭಾವವು. ಇನ್ನು ತನ್ನ ಸ್ಥಿತಿಯೋ? ಅದೂ ವಿಚಿತ್ರವಾದುದು. ಅಂದರೆ ತಾನು ಅಹಿಶಯನ, ತನ್ನ ವಾಸವು ಅಗಾಧವಾದ ಸಮುದ್ರಮಧ್ಯದಲ್ಲಿ, ವಾಹನವು ಹಕ್ಕಿ, ಆ ಹಕ್ಕಿಗೂ ಹಾಸಿಗೆಯಾದ ಹಾವಿಗೂ ಸದಾ ವೈರ. ಈ ಗೃಹಕೃತ್ಯದ ವೈಷಮ್ಯವೇ ಹರಿಯ ಚಿಂತೆಗೆ ಕಾರಣವು. ಸದಾ ಚಿಂತೆಗೀಡಾದವನು ಕರ್ತವ್ಯಮೂಢನಾಗಿ ಕಲ್ಲಿನಂತಾಗುವನೆಂಬ ಭಾವವು.

ಅ:—ಒಂದು ವಾಕ್ಯಾರ್ಥವನ್ನು ಸಾಧಿಸಲಿಕ್ಕೆ ಮತ್ತೊಂದು ವಾಕ್ಯಾರ್ಥವು ಕಾರಣವಾದರೆ ಅಥವಾ ಒಂದೇ ವಾಕ್ಯದಲ್ಲಿ ವಿಶೇಷಣವಾಗಿರುವ ಪದಾರ್ಥವು ಮತ್ತೊಂದು ಪದಾರ್ಥವನ್ನು ಸಾಧಿಸುವ ಹೇತುವಾಗಿದ್ದರೆ ಅದು ಕಾವ್ಯಲಿಂಗವು. ಇಲ್ಲಿ ಹರಿಯು ಕಲ್ಲಾಗಲು ಕಾರಣವು ಮಡದಿ ಚಂಚಲೆಯಾದುದೇ ಮೊದಲಾದ ಕುಟುಂಬದ ದುಃಖವು. ಇದನ್ನು ನೆನವುದೆಂಬ ವಿಶೇಷಣ ಪದಾರ್ಥವೇ ಕಾರಣವಾದುದರಿಂದ ಪದಾರ್ಥಹೇತುಕ ಕಾವ್ಯಲಿಂಗವು. ಈ ಅಲಂಕಾರದಿಂದ ಕುಟುಂಬದುಃಖವು ಯಾರಿಗೂ ಸಹಿಸಲಸಾಧ್ಯವೆಂಬರ್ಥವನ್ನು ವ್ಯಕ್ತಪಡಿಸುವುದರಿಂದ ಅಲಂಕಾರದಿಂದ ವಸ್ತುಧ್ವನಿಯು. ಧ್ವನಿ=ಶಬ್ದದಿಂದ ಮುಖ್ಯಾರ್ಥವು ತಿಳಿದ ಮೇಲೆ ಆ ವಾಕ್ಯಾರ್ಥಶೋಭೆಗಾಗಿ ವಿಶೇಷಾರ್ಥವು ಶಬ್ದದಿಂದಲೋ ಅರ್ಥದಿಂದಲೋ ಪ್ರಕಟವಾಗುವುದು. ಈ ಅರ್ಥವಿಶೇಷವಿರುವ ಕಾವ್ಯವೇ ಧ್ವನಿಕಾವ್ಯವು, ಇದೇ ಉತ್ತಮ ಕಾವ್ಯವೆನಿಸುವುದು.

---

೧೮. ರಾಧಾಕೃಷ್ಣರು.

ಹೊರಗದಾ"ನಾರ್ಹರಿಯು" ಪೋಗು ತೋಟಕೆ ಕೋತಿ!
ಬರೆ ಕೃತ್ಯಮೇನರುಹು? "ಕೃಷ್ಣನಾಂ ಬಂದಪಂ"
ಕರಿಕೋತಿ! ಯುಂಜುವೆನ"ದಲ್ಲ ಮಧುಸೂದನಂ" ಗುಂಗಿಯೋ
ತೋಟದೊಳ್ ಕೇಳ್ ॥

"ಅರಲದರಳಿದೆ" ಯೆಂಬ ಮಡದಿರಾಧೆಯ ಹಾಸ್ಯ
ಪರಿಹಾಸ್ಯಮಾತಿಗಚ್ಚರಿಯಗೊಂಡಾ ಹರಿಯು
ಪೊರೆಯಲೆಮ್ಮನು ಎನುತಲಡಿ ಪಿಡಿದು ಬೇಡಿ ನಾಂ
ಕಾಡುವೆಂ ದಿಂಡುಗೆಡವೆಂ ॥

ಭಾ:–ಈ ಪದ್ಯವು ರಾಧಾಮಾಧವರ ಪರಿಹಾಸ್ಯ ಕೇಳೀಸಂವಾದ ಪರವಾದ್ದು. ಹರಿ=ಕೃಷ್ಣ ಮತ್ತು ಕಪಿ. ಕೃಷ್ಣ=ವಿಷ್ಣು, ಕಪ್ಪಾದ್ದು. ಮಧುಸೂದನ=ಮಧು ಎಂಬ ದೈತ್ಯನನ್ನು ಕೊಂದಪ, ಕೃಷ್ಣ ಮತ್ತು ಜೇನನ್ನು ಹೀರತಕ್ಕದ್ದು ಗುಂಗಿಹುಳ. ಕೃಷ್ಣನು ತನ್ನ ಪರವಾಗಿ ಈ ಪಸರುಗಳನ್ನು ಎತ್ತಿದಾಗಲೆಲ್ಲಾ ರಾಧೆಯು ವಿನೋದಕ್ಕಾಗಿಅರ್ಥಾಂತರದಿಂದ ಪ್ರತಿ ಮಾತಾಡುವಳು.

ಅ:–ಒಂದು ಶಬ್ದಕ್ಕೆ ಎರಡರ್ಥವಿರುವುದು ಶ್ಲೇಷವು. ಅಂಥಾ ಶ್ಲೇಷದಿಂದ ಒಬ್ಬನ ಮಾತಿಗೆ ಮತ್ತೊಂದು ಅರ್ಥಮಾಡಿ ಆತನ ಮಾತನ್ನು ಚಮತ್ಕಾರಕ್ಕಾಗಿ ನಿರಾಕರಿಸುವಲ್ಲಿ ವಕ್ರೋಕ್ತಿಯು. ಇಲ್ಲಿ ರಾಧೆಯು ಕೃಷ್ಣನ ಮಾತನ್ನು ಬೇರೆ ಅರ್ಥಮಾಡಿ ನಿರಾಕರಿಸಿರುವುದರಿಂದ ಶ್ಲೇಷಾಲಂಕಾರವು.

---

೧೯. ಕೃಷ್ಣಯಶೋದೆಯರು.

ಅಮ್ಮ! ನೀಂ ಕಡೆಗೋಲ ಬಿಡು ಕಡೆದು (ಬಳಲ್ದೆಯೌ) ಕಂಗೆಟ್ಟೆ
ಯಮ್ಮ ನಾಂ ಕಡೆವೆನೆಂದಾ ಯಶೋದೆಯಿನೀಳ್ದು
ಬೊಮ್ಮಪಿತ ಕಡೆಯಲಿರೆ ಕಂಡು ವಾಸುಕಿ, ಮೊಗಂ
ಮುದುಡಿಪಂ ಪೂರ್ವಭಯದಿಂ ॥
ಸೊಮ್ಮಿನಾ ಲಕುಮಿ ಸವತಿಯು ಮಚ್ಚರದೆ ಬೆಂದ
ಳೊಮ್ಮನದೆ ದೇವರ್ಕಳಮೃತದಾಸರಿನೊಲಿದ
ರ್ಕೆಮ್ಮ ನಿಕ್ಕಡಿಗೊಂಡಮುನ್ನಿನಾಂಗಾಹು ಮಮ್ಮಲಗೊಂಡನೇಂ
ಚೋದ್ಯಮೈ ॥

ಭಾ:-ಕಡೆಗೋಲು=ಕಡೆಯುವಕೋಲು. ಕಂಗೆಡು=ಆಯಾಸಪಡು. ಈಳ್ಕು=ತೆಗೆದುಕೊಂಡು. ಬೊಮ್ಮಪಿತ=ಬ್ರಹ್ಮನ ತಂದೆಯಾದ ಕೃಷ್ಣನು. ಮೊಗಂ ಮುದುಡಿದಂ=ಮುಖವನ್ನು ಮುದುರಿಸಿಕೊಂಡನು. ಪೂರ್ವಭಯ=ಹಿಂದಿನ ಕಾಲದ ಭಯ. ಅಂದರೆ ಅಮೃತಮಥನಕಾಲದಲ್ಲಿ ಆವನನ್ನೇ ಕಡೆಯುವ ನೇಣನ್ನಾಗಿ ಮಾಡಿದುದರಿಂದುಂಟಾದ ಅಂಜಿಕೆಯೆಂದರ್ಥವು. ಮಚ್ಚರ(ತ. ಮತ್ಸರ)=ಹೊಟ್ಟೆಕಿಚ್ಚು. ಒಮ್ಮನ=ಒಂದೇ ಮನಸ್ಸು. ಆಸರ್=ಬಾಯಾರಿಕೆ. ಇಕ್ಕಡಿಗೊಂಡ=(ಎರಡು+ಕಡಿ+ಗೊಳ್ಳು) ಎರಡು ತುಂಡಾದ. ಮುಮ್ಮರಿಗೊಳ್ಳು=ಮರುಗು. ಅಂದರೆ ಕೃಷ್ಣನು ಈಗ ಕಡೆಯಲು ತೊಡಗಿದನಾದರೆ ತನ್ನನ್ನೇ ನೇಣಾಗಿ ಮಾಡುವನೋ! ಎಂಬ ಅಂಜಿಕೆಯಿಂದ ವಾಸುಕಿಯೂ ಮಥನಕಾಲದಲ್ಲಿ ಇನ್ನೊಬ್ಬಳು ಲಕ್ಷ್ಮಿಯು ಹುಟ್ಟಿದರೆ ಅವಳು ತನಗೆ ಸವತಿಯಾಗುವಳೋ! ಎಂಬ ಭಯದಿಂದ ಲಕ್ಷ್ಮಿಯೂ ಮತ್ತೊಮ್ಮೆ ಅಮೃತವು ಹುಟ್ಟಿದರೆ ಅದನ್ನು ಕುಡಿಯುವಾಗ ಕೃಷ್ಣನು ಹಿಂದಿನಂತೆ ತನ್ನನ್ನು ತಿರಿಗಿ ಕಡಿಯುವನೋ! ಎಂಬ ಹೆದರಿಕೆಯಿಂದ ರಾಹುವೂ ಖೇದಗೊಂಡನೆಂದೂ ದೇವತೆಗಳು ತಿರಿಗಿ ಅಮೃತಕುಡಿಯಬರುವದೆಂದು ಸಂತೋಷಗೊಂಡರೆಂದೂ ಅಭಿಪ್ರಾಯವು.

ಅ:-ಇಲ್ಲಿ ಕೃಷ್ಣನ ದಧಿಮಥನೋದ್ಯೋಗದಿಂದ ವಾಸುಕಿ, ಲಕ್ಷ್ಮೀದೇವಿ, ದೇವತೆಗಳು, ರಾಹುಗಳಿಗೆ ಮುಖಮ್ಲಾನತೆ, ಮನಸ್ತಾಪ, ಅಮೃತಪ್ರೀತಿ, ದುಃಖಗಳ ಸಂಬಂಧವಿಲ್ಲದಿದ್ದರೂ ಅವರ ಸಂಬಂಧವನ್ನು ವರ್ಣಿಸುವುದರಿಂದ ಸಂಬಂಧಾತಿಶಯೋಕ್ತ್ಯಲಂಕಾರವು.

೨೦. ಕೃಷ್ಣಗೋಪಿಯರು.

ಆರದ್ದೈ? ಕೃಷ್ಣನಾಂ, ಏತಕಿಲ್ಲಿಗೆ ಬಂದೆ?
ಚೋರ! ಎಮ್ಮಯ ನಿಲಯವಲ್ತೆ ಗೋವಳ್ತಿಯೇ!
ಏರಿದೇತಕೆಯೊರಳ? ನಿನ್ನ ಸಮನಾಗಲ್ಕೆ, ಬೆಣ್ಣೆಗೇಂ
ಕೈಯಿಕ್ಕಿದ್ದೈ? ॥

ಸಾರಿ ಕೂತಿಹ ನೊಣವನೋಡಿಸಲ್, ಬಾಲಕ
ಚೀರಲೇಂ ಗೆಯ್ದು? ನೋಡಾಯಿರುಂಪೆಯು ಸಾಲ
ನೀರೆ ಮಕ್ಕಳ ಮೊಗಕದೇಂ ಬರೆದೆ ಮಸಿಯ! ಪೋರನೆ,
ಎನಲ್ನೋಡಿ ನಕ್ಕಂ ॥

ಭಾ:-ನಿಲಯ=ಮನೆ. ಗೋವಳ್ತಿ=ಗೋವಳರ ಹೆಂಗುಸು. ಒರಳು=ಅವಲಕ್ಕಿ ಮೊದಲಾದುದನ್ನು ಕುಟ್ಟುವುದಕ್ಕೆ ತುದಿ ಹೊಂಡ ಮಾಡಿದ ಮರದ ತುಂಡು (ಸ. ಉಲೂಖಲ). ಏರಿದೆ=ಹತ್ತಿದೆ. ಚೀರು=ಚಂಡಿಹಿಡಿದು ಕೂಗು. ಇರುಂಪೆ=ಇರುವೆ. ನೀರೆ ಮಕ್ಕಳು=ಹೆಣ್ಣು ಹುಡುಗಿಯರು. ಇಲ್ಲಿ ಕೃಷ್ಣನು ಹುಡುಗಿಯರ ಮುಖಕ್ಕೆ ಮಸಿ ಬಳಿದು, ಉಪದ್ರವಿಸಿ, ಕೂಸುಗಳು ಅಳುವಂತೆ ಮಾಡಿ, ಗೋಪಿಯ ಲಕ್ಷವು ಅತ್ತ ಹೋಗಲು ಇತ್ತ ತಾನು ಜೆಣ್ಣೆ ಕಳುತ್ತಿದ್ದಾಗ ಗೋಪಿಯಿಂದ ಕಾಣಲ್ಪಟ್ಟು ಅವಳ ಪ್ರಶ್ನೆಗಳಿಗೆಲ್ಲಾ ಛಲೋತ್ತರಗಳನ್ನೇ ಕೊಟ್ಟು ಕೊನೆಗೆ ಮಕ್ಕಳ ಮುಖಕ್ಕೇ ಮಸಿ ಬರೆದುದೇಕೆಂಬ ಪ್ರಶ್ನೆಗೆ ನಿರುತ್ತರನಾಗಿ ನಕ್ಕನೆಂಬ ಭಾವವು.

ಅ:-ಇಲ್ಲಿ ಗೋವಳ್ತಿಯ ಪ್ರಶ್ನೆಗಳಿಗೆಲ್ಲಾ ಅರ್ಥಶ್ಲೇಷದಿಂದ ಬೇರೆ ಅರ್ಥವನ್ನು ಕಲ್ಪಿಸಿ ಉತ್ತರಕೊಡುವುದರಿಂದ ವಕ್ರೋಕ್ತಿಯೆಂಬ ಅಲಂಕಾರವು.

---

೨೧. ಕೃಷ್ಣನು.

ವಾಯುಮಿತ್ರನ ಸುತನ ಬಂಧುವಾಹನಶತ್ರು
ಭೂಷಣನ ಶಿರದಿರುವವಳ ಮಗನ ಶತ್ರುವಿನ
ತಂಗೆ ಗಂಡನ ಗೆಳೆಯನಾದ ಕೃಷ್ಣನು ಮತ್ತುರಗಶತ್ರುಪತಿ
ಕಾಂತೆಯಾ ॥
ತಾತನಂ ಕಟ್ಟಿದನ ಮಡದಿಯನು ಕೊಂಡೊಯ್ದ
ವನ ತನಯನನು ಕೊಂದವಗೆ ಜೀವವಿತ್ತವನ

ದಾರ ಧ್ವಜದಲಿ ಕಾಂಬನಾತನಾ ಸಖನಾದ ಕೃಷ್ಣನುಂ
ಕಾಯಲೆನ್ನಾ ॥

ಭಾ:– ಗಾಳಿಯ ಮಿತ್ರ=ಅಗ್ನಿ. ಸುತ=ಷಣ್ಮುಖ. ಬಂಧು=ಗಣಪತಿ. ವಾಹನ=ಇಲಿ. ಶತ್ರು=ಹಾವು. ಭೂಷಣ=ಹರ. ಶಿರದಿ ರುವವಳು=ಗಂಗೆ. ಮಗ=ಭೀಷ್ಮ. ಶತ್ರು=ಶಿಖಂಡಿ. ತಂಗೆ=ದ್ರೌಪದಿ. ಗಂಡ=ಅರ್ಜುನ. ಉರಗಶತ್ರು=ಶೇಷ. ಪತಿ=ವಿಷ್ಣು. ಕಾಂತೆ=ಲಕ್ಷ್ಮಿ. ತಾತ=ಸಮುದ್ರ. ಕಟ್ಟಿದವ=ರಾಮ. ಮಡದಿ ಕೊಂಡೊಯ್ದವ=ರಾವಣ. ತನಯ=ಇಂದ್ರಜಿತ್. ಕೊಂದವ=ಲಕ್ಷ್ಮಣ. ಜೀವವಿತ್ತವ=ಹನುಮಂತ. ಆರ ಧ್ವಜದಲಿ=ಅರ್ಜುನ ಧ್ವಜದಲ್ಲಿ.

ಅ:–ಇಲ್ಲಿ ಹನುಮಂತನೆಂಬರ್ಥವನ್ನು ಚಮತ್ಕಾರ ವಿಶೇಷಣಗಳಿಂದ ಶೇಷಿಸಿ ಮಾದರಿಂದ ಪರ್ಯಾಯೋಕ್ತಿವು.

---

೨೨. ದ್ವಾರಕೆಯ ನಾಯಿಕೆಯರು.

ಮಂದಗಮನೆಯರೇನು ದ್ವಾರಕಾಪಟ್ಟಣದೊ
ಳಂದವಾಗಿಹರೊ! ಕೃಷ್ಣನ ಮಡದಿಯರ್ನೋಡೆ
ಚಂದವಾಗಿಹ ಮಲ್ಲಿಗೆಗೆ ಕೈಯು ಸೋಂಕೆಯದು
ಒಡನಾಯ್ತು ಕೆಂಜಾಜಿಯೂ ॥
ಬಂದು ಸುರಹೊನ್ನೆಹೂವನ್ನೆತ್ತೆ ಮೈ ಬಣ್ಣ
ದಿಂದಾಯ್ತು ಸುರಗಿಯದು, ನೈದಲೆಯು ತಾವರೆಯು
ಮಂದಹಾಸದಿನಾಯ್ತು, ಕಣ್ನೋಟದಿಂದ ಕೆಂದಾವರೆಯು
ಕದರ್ಾವರೆ ॥

ಭಾ:– "ಮಲ್ಲಿಗೆಗೆ ಕೈಯು ಸೋಂಕೆಯದು ಒಡನಾಯ್ತು ಕೆಂಜಾಜಿಯೂ" ಅಂದರೆ ಕರತಳದ ರಾಗವು ಮಲ್ಲಿಗೆಯಲ್ಲಿ ಪ್ರತಿ

ಬಿಂಬಿಸಿ ಅದು ಕೆಂಬಣ್ಣವನ್ನು ತಾಳಿತು ಎಂಬ ಭಾವವು. ಮುಂದೆ ನೈಯ ಹಳದಿಬಣ್ಣವು ಬಿಳುಪಾದ ಸುರಹೊನ್ನೆಗೆ ಬಿದ್ದಾಗ ಅದು ಸುರಗಿಯಂತೆಯೂ ಮಂದಹಾಸದ ಛಾಯೆಯು ಕಪ್ಪಾದ ನೈದಲೆಗೆ ಬಿದ್ದಾಗ ಅದು ಬೆಳ್ದಾವರೆಯಂತೆಯೂ ಕಣ್ಣಿನ ನೋಟವು ಬೆಳ್ದಾವರೆಗೆ ಬಿದ್ದಾಗ ಅದು ಕರ್ದಾವರೆಯಂತೆಯೂ ಕಾಣಬಂದುವು ಎಂಬ ಭಾವವು.

ಅ:–ತನ್ನ ಗುಣವನ್ನು ಬಿಟ್ಟು ಇನ್ನೊಂದರ ಗುಣವನ್ನು ಹೊಂದುವುದು ತದ್ಗುಣಾಲಂಕಾರವು. ಕರತಳವು ಅಷ್ಟು ಕೆಂಪೆಂದೂ ಮೈಯು ಚಿನ್ನದಂತೆ ಹಳದಿಯೆಂದೂ ನಗುವು ಬೆಳ್ದಿಂಗಳಂತೆ ಬಿಳಿದೆಂದೂ ಕಣ್ಣಿನ ತುದಿ ಕೆಂಪೆಂದೂ ಭಾವವು ತಿಳಿಯಲ್ಪಡುವುದರಿಂದ ಅಲಂಕಾರದಿಂದ ವಸ್ತುಧ್ವನಿಯು.

---

೨೩. ರಾಧೆಯು.

ನಂದಸುತ, ಮುಖರದಾ ಮುತ್ತ ಪವಳವೆ? ಎನುತ
ಚೆಂದುಟಿಯ ಕಾಂತಿಯಿಂ ಭ್ರಮೆಗೊಂಡು ಕೇಳಿದಂ
ಚೆಂದವೇನಿದು ಮೂಗಿಗಾಹವಳ? ಎನೆ ರಾಧೆಯುದ ನೀ
ಕ್ಷಿಸಲ್ಮುತ್ತಿನೊಳ್ ॥
ಸಂದಿಸಲ್ಕಣ್ಣೊಗರದಹಹ ಗುಂಜಾಮಣಿಯೆ!
ಎಂದನಾ ಶ್ರೀಹರಿಯು ರಾಧೆಯುದಕಾಗಿ ನಗ
ಲಂದು ನಗೆಯಿಂದ ಬಿಳಿ ಬಿಳಿದಾದುದಾ ಮುತ್ತು ಎನಗೀಗೆ
ರಾಧೆ ಮುದವಾ ॥

ಭಾ:–ರಾಧೆಯ ಮುಖರದ ಮುತ್ತು ಚೆಂದುಟಿಯ ಕಾಂತಿಯಿಂದ ಕೆಂಪಾಗಿರಲು ಅದು ಹವಳವೆಂದು ಭ್ರಮಿಸಿದ ಹರಿಯು ಮಾತಿನಿಂದ ಸಂದೇಹಪಟ್ಟು ರಾಧೆಯು ಅದನ್ನು ನೋಡಲು ಮುತ್ತಿನ ಒಂದು ಭಾಗಕ್ಕೆ ಕಣ್ಣಿನ ಕಪ್ಪು ಕಾಂತಿಯು ಬಿದ್ದುದರಿಂದ ಕೃಷ್ಣನು ಮತ್ತು ಭ್ರಮಿಸಿ ಅದನ್ನು ಗುರುಗುಂಜಿಯಾಗಿ ಭಾವಿಸಿದನೆಂದು

ರಾಧೆಯು ನಗಲು ಅವಳ ನಗುಮುಖದ ಕಾಂತಿಯಿಂದ ಆ ಮುತ್ತು ತಿರಿಗಿ ಬೆಳ್ಳಿಗಾಗಿಯೇ ತೋರಿತೆಂಬ ಭಾವವು. ಮುಖರ=ಮೂಗಿನಾಭರಣ. ಕಣ್ಬೊಗರ್=(ಕಣ್ಣಿನ+ಪೊಗರ್)ಕಣ್ಣಿನ ಕಾಂತಿ. ಗುಂಜಾಮಣಿ=ಗುರುಗುಂಜಿ.

ಅ:–ಮುತ್ತೊಂದರ ಸಂಸರ್ಗದಿಂದ ತನ್ನಲ್ಲಿ ತಳೆದ ರೂಪಾಂತರವನ್ನು ಮರಳಿ ಇನ್ನೊಂದರ ಸಂಸರ್ಗದಿಂದ ತನ್ನ ರೂಪವನ್ನೇ ಹೊಂದುವುದು ಪೂರ್ವರೂಪಾಲಂಕಾರವು. ರಾಧೆಯ ತುಟಿ ಅತಿ ಕೆಂಪೆಂದೂ ಕಣ್ಣು ಕನ್ನೈದಿಲೆಯಂತೆ ಕಪ್ಪೆಂದೂ ನಗೆಯು ಬಿಳಿದೆಂದೂ ಭಾವವು ವ್ಯಕ್ತವಾದುದರಿಂದ ಅಲಂಕಾರದಿಂದ ವಸ್ತುಧ್ವನಿಯು.

---

೨೪. ರವಿವರ್ಮ ಚಿತ್ರದ ಲಕ್ಷ್ಮಿಯು.

ಜಲದೊಳರಳಿರುವ ತಾವರೆಯಲ್ಲಿ ನಿಂದವಳೆ!
ಬಲಗಡೆಯೊಳಾಡುತಿಹ ಹಂಸಗಳಿನೊಪ್ಪುವಳೆ!
ಕೆಲದಿ ಪೂಮಾಲೆ ಪಿಡಿದೆದ್ದಿರುವ ಬೆಳ್ಳಾನೆಯಿಂದ ಸೊಗಸಂ
ಗೊಂಬಳೇ! ॥

ಕೆಲಬಲದ ಮರಗಳಿಂದುದುರ್ವಲರ ರಾಶಿಯಿಂ
ಸಲೆ ಬೆಳಗುವವಳೆ! ಕೆಂಬಟ್ಟೆಯಿಂ ಮೆರವಳೇ!
ಸಲಹು ತಾವರೆಗಳನ್ನಿರ್ಕಯ್ಯೊಳಾಂತಳೇ! ರವಿವರ್ಮ
ಚಿತ್ರಲಸಿತೇ! ॥

ಭಾ:–ಕೆಲ=ಬಳಿ. ಬೆಳ್ಳಾನೆ=(ಬಿಳಿದು+ಆನೆ)ಬಿಳುಪಾದ ಆನೆ. ಸಲೆ=ಚೆನ್ನಾಗಿ. ಅಲರ್=ಹೂ. ಇರ್ಕಯ್=ಎರಡು ಕೈ.

ಅ:–ಒಂದು ವಸ್ತುವನ್ನು ಅದರ ಸ್ವಭಾವಕ್ಕೆ ತಕ್ಕಂತೆ ಮನೋಹರವಾಗಿ ಇದ್ದಂತೆ ಬಣ್ಣಿಸುವುದೇ ಸ್ವಭಾವೋಕ್ತಿ ಅಲಂಕಾರವು.

---

೨೫. ಲಕ್ಷ್ಮೀ ವಿಷ್ಣು, ಇವರೊಳಗಣ ಸಂವಾದ.

ಬೆರಲಿನಾಬಾಗಿಲಂ ಮಿಡಿವ? "ಮಾಧವ ನಾನು"
ಖರೆ ವಸಂತನೆ? "ಅಲ್ಲ ಚಕ್ರಿ ನಾಂ ಕೆಳದಿ!" ಕುಂ
ಬರಗದೇಂ ಕೃತ್ಯವಿದೆ? "ಅಲ್ಲ ನಾಂ ಭೂಧರಂ" ನಡೆ
ಫಣಿಪ! ಭೂಮಿಯಡಿಗೆ! ॥
"ಉರಗಭಂಜಕ ನಾನು" ಗರುಡ! ಗಗನಕೆ ಹಾರು
"ಹರಿಯಲ್ತೆ ಹಳಿವುದೇಂ" ಕೋಡಗವೆ! ನಡೆಯೆಂಬ
ಸರಿಕಟ್ಟಿನಾ ಮಾತಿನಿಂದ ಗಂಡನ ಮಾತ ಕಟ್ಟಿರುವ
ರಮೆಯೆ! ಸಲಹೌ ॥

ಭಾ:–ಮಿಡಿ=ಬೆರಳಿಂದ ಬಡೆ(ಸಿಡಿ). ಮಾಧವ=ವಿಷ್ಣು, ವಸಂತ. ಚಕ್ರಿ=ಚಕ್ರವುಳ್ಳವ ವಿಷ್ಣು ಅಥವಾ ಕುಂಬಾರ. ಭೂಧರ=ಭೂಮಿಯನ್ನು ಧರಿಸಿದವ ವಿಷ್ಣು ಅಥವಾ ಶೇಷ. ಫಣಿಪ=ಹಾವುಗಳೊಡೆಯ ಶೇಷ. ಉರಗಭಂಜಕ=ಕಾಳಿಯಮರ್ದನಕೃಷ್ಣ ಅಥವಾ ಹಾವುಗಳನ್ನು ಬಡಿಯುವವ ಗರುಡ. ಹಳಿ=ನಿಂದಿಸು. ಹರಿ=ಕೃಷ್ಣ ಅಥವಾ ಮಂಗ.

ಅ:–ಇಲ್ಲಿ ವಕ್ರೋಕ್ತಿಯನ್ನು ಸಾಧಿಸುವುದಕ್ಕಾಗಿ ಅನೇಕಾರ್ಥವುಳ್ಳ ಶಬ್ದ ಶ್ಲೇಷವಿರುವುದರಿಂದ ಶ್ಲೇಷಾಲಂಕಾರವು. ಅಂಗವು (ಬೆಂಬಲವು), ವಕ್ರೋಕ್ತಿಯು ಅಂಗಿಯು (ಮುಖ್ಯವು), ಎಂದು ಅಂಗಾಂಗಿಭಾವ ಸಂಕರವು.

---

೨೬. ಲಕ್ಷ್ಮಿಯು.

ಕುಡಿದನೆನ್ನಯ ಪಿತನನೊರ್ವ ಹಾರುವ, ಪತಿಯ
ಕಡುರೋಷದಿಂದೊದೆದನೊರ್ವ ಬಾಡವ, ಜಿಹ್ವೆ
ಯೆಡೆಯೊಳೀಗಳುಮೆನ್ನ ಪುರುಡಿಸೊಸೆಯನು ಧರಿಪರಾ
ಪಾರ್ವರೆಲ್ಲೆಲ್ಲಿಯುಂ ॥

ವೃಡನ ಪೂಜೆಗೆ ಯೆನ್ನ ಮನೆಗಳಂ ಮುರಿದಪರ್
ಬಿಡದೆ "ಚಂಚಲೆ"ಯೆಂದು ಹಳಿವರೆನ್ನಾ ಕತದಿ
ಪೊಡವಿ ಬಿಡುಗಣ್ಣರಂ ಬಿಡುವೆನಲ್ಲದೆ ಎನಗದೆತ್ತಣ್ತು
ಮಾತ್ಸರ್ಯವೈ? ॥

ಭಾ:-ಹಾರುವ=ಬ್ರಾಹ್ಮಣ. ಬಾಡವ=ಬ್ರಾಹ್ಮಣ. ಜಿಹ್ವೆ=ನಾಲಿಗೆ. ಪುರುಡಿ=ಮತ್ಸರದವಳು. ಪಾರ್ವ=ಬ್ರಾಹ್ಮಣ. ವೃಡ=ಈಶ್ವರ. ಬಿಡುಗಣ್ಣರು=ಎವೆಯಿಕ್ಕದ ಕಣ್ಣುಳ್ಳವರು (ದೇವತೆಗಳು). ಪೊಡವಿಬಿಡುಗಣ್ಣರು=ಬ್ರಾಹ್ಮಣರು (ಭೂಸುರರು). ಇಲ್ಲಿ ಲಕ್ಷ್ಮಿಯ ತಂದೆಯಾದ ಸಮುದ್ರವನ್ನು ಅಗಸ್ತ್ಯನು ಕುಡಿದುದನ್ನೂ ಲಕ್ಷ್ಮೀಪತಿಯಾದ ನಾರಾಯಣನನ್ನು ಭೃಗುಮುನಿಯು ಒದ್ದುದನ್ನೂ ಸರಸ್ವತಿಯು ಅಂದರೆ ವಿದ್ಯೆಯು ಬ್ರಾಹ್ಮಣರ ಬಾಯಿಯಲ್ಲಿರುವುದನ್ನೂ ಲಕ್ಷ್ಮಿಯ ವಾಸಸ್ಥಾನವಾದ ಕಮಲದ ಹೂವನ್ನು ಈಶ್ವರನ ಪೂಜೆಗೆಂದು ಬ್ರಾಹ್ಮಣರು ಕೊಯ್ಯುವುದನ್ನೂ ನೆನೆಸಿಸಲ್ಲಿಡತಕ್ಕದ್ದು.

ಅ:-ಲಕ್ಷ್ಮಿಯು ಬ್ರಾಹ್ಮಣನನ್ನು ತೊರೆಯಲು ಕಾರಣವು ತಂದೆಯನ್ನು ಕುಡಿದುದೂ ಗಂಡನನ್ನೊದ್ದುದೂ ಸೊಸೆಯನ್ನು ಬಾಯಲ್ಲಿ ಕೊಂಡಾಡುವುದೂ ತನ್ನ ಮನೆಯನ್ನು ಕಿತ್ತು ಒಯ್ಯುವುದೂ ಎಂಬ ವಾಕ್ಯಾರ್ಥಗಳಿಂದ ಹೇಳಲ್ಪಟ್ಟಿರುವುದರಿಂದ ಒಂದನ್ನು ಸಾಧಿಸುವುದಕ್ಕೆ ಕಾರಣವಾಗಿರುವ ವಾಕ್ಯಾರ್ಥವಿದ್ದುದರಿಂದ ವಾಕ್ಯಾರ್ಥಹೇತುಕ ಕಾವ್ಯಲಿಂಗವು.

---

೨೭. ಹರಿಹರರ ಸೊಬಗು.

ಹರಿಯೊಂದುದಿನ ಖಗವನೇರಿ ವೈಕುಂಠದಿಂ
ಹರದರ್ಶನಕೆ ಬರಲು ತವಕದಿಂದುಡೆನೂಲ
ಹರನುರಗದಿಂ ಬಿಗಿದು ಕೌಪೀನವಂ ಧರಿಸಿ ಪೊರಮಟ್ಟು
ನಿದಿರುಗೊಳಲು ॥
ಹರಿಯ ಗರುಡನ ಕಂಡು ಬಲು ಭೀತಿಗೊಂಡಾಗ
ಹರನುರಗ ಬಿಚ್ಚೋಡಿಪ್ರೋಗೆ ನಾಚಿಕೆಪಡದ

ಹರದಿಗಂಬರತೆಯಿಂ ತಾನು ಮೆರೆದನು ಹರನೆ!
ನಿನ್ನಂತೆ ಎಮ್ಮ ರಚಿಸೈ ॥

ಭಾ:–ಖಗ=ಪಕ್ಷಿ, ಗರುಡ. ಉಡೆನೂಲು=ಕಟಿಸೂತ್ರ. ಉರಗದಿಂ ಬಿಗಿದು=ಹಾವನ್ನೇ ಕಟಿಸೂತ್ರವನ್ನಾಗಿ ಬಿಗಿದು. ಹರನ ಕಟಿಸೂತ್ರವಾದ ಹಾವು ಹರಿಯ ಗರುಡನಿಂದ ಹೆದರಿ ಓಡಿಹೋಗಲು ಕೌಪೀನವು ಬಿದ್ದು ಹರನು ದಿಗಂಬರನಾದನೆಂದು ಭಾವವು.

ಅ:–ಹರನು ಮೊದಲು ದಿಗಂಬರನಿದ್ದವನು ಮರಳಿ ದಿಗಂಬರನಾದನೆಂಬದರಿಂದ ಪೂರ್ವರೂಪಾಲಂಕಾರವು. ಹೀಗೆ ದಿಗಂಬರನಾಗಲಿಕ್ಕಿಲ್ಲವಾದರೂ ಆದನೆಂದು ಬಣ್ಣಿಸಿದ್ದುದರಿಂದ ಸಂಬಂಧಾತಿಶಯೋಕ್ತಿಯು. ಈ ಎರಡಲಂಕಾರಗಳಿಗೆ ಏಕವಾಚಕಾನುಪ್ರವೇಶ ಸಂಕರವು.

---

೨೮. ಪಾರ್ವತೀ ಪರಮೇಶ್ವರರು.

ರಾಮುನಿಂ ಬೇಡು ನೀನಿಳೆಯ, ನೇಗಿಲನು ಬಲ
ರಾಮುನಿಂ, ಧನದನಿಂ ಬೇಡು ಬೀಜಗಳನ್ನು
ಸಾಮುದೊಳ್ಯಮುನಿಂದ ಕೋಣವಂ, ನಿನಗುಂಟು ಪೊಂದೆತ್ತು,
ಫಾಲವನ್ನೂ ॥
ಕಾಮನಾಶನ! ನಿನ್ನ ಶೂಲದಿಂ ತೆಗೆ, ಕೇಳು
ಸೋಮಶೇಖರಿಯಿರ್ಪೆ ನಿಕ್ಕೆ, ಮೇಯಿಪ ಕುವರ
ಸಾಮಜಾಸ್ಯಂ ಕೃಷಿಯುನೋಳ್ಪ, ನೀ ಭಿಕ್ಷೆ ಬಿಡು
ಖಿನ್ನೆನಾಂ ಗೆಯ್ಯು ಕೃಷಿಯಾ ॥

ಭಾ:–ಈ ಪದ್ಯದಲ್ಲಿ ಹರನ ಭಿಕ್ಷಾವೃತ್ತಿಯಿಂದ ಬೇಸತ್ತ ಪಾರ್ವತಿಯು ಹರನೊಡನೆ ನೀನು ಭಿಕ್ಷಾವೃತ್ತಿಯನ್ನು ಬಿಟ್ಟು ಬೇಸಾಯವನ್ನಾದರೂ ಮಾಡೆಂದು ಪ್ರಾರ್ಥಿಸುವಂತೆ ಕವಿಯು ವರ್ಣಿಸುವನು. ರಾಮುನಿಂ=ಪರಶುರಾಮುನಿಂದ. ಪರಶುರಾಮನು ಸಮಸ್ತ ಭೂಮಿಯನ್ನೂ ಬ್ರಾಹ್ಮಣರಿಗೆ ದಾನಮಾಡಿದವನೆಂದು ಭಾವವು.

ಇಳೆ=ಭೂಮಿ. ನೇಗಿಲನು ಬಲರಾಮನಿಂ ಬೇಡು. ಬಲರಾಮನು ಹಲಾಯುಧನಾದುದರಿಂದ ಎಂಬ ಭಾವವು. ಧನದ=ಕುಬೇರ. ಕುಬೇರನು ಧನಧಾನ್ಯಾಧಿಪತಿಯು ಎಂಬ ಭಾವವು. ಸಾಮ=ಸಮಾಧಾನ. ಯಮನು ಕ್ರೂರನಾದುದರಿಂದ ಸಮಾಧಾನದಿಂದಲೇ ಅವನಿಂದ ಕೋಣವನ್ನು ಕೊಂಡುಕೊಳ್ಳಬೇಕೆಂದರ್ಥವು. ಯಮನು ಮಹಿಷವಾಹನನು. ಫಾಲ=ನೇಗಿಲಿನ ಮೊನೆ. ಫಾಲವನ್ನು ನಿನ್ನ ಶೂಲದಿಂ ತೆಗೆ=ಶೂಲವನ್ನೇ ಮೊನೆಯನ್ನಾಗಿ ಮಾಡಿಕೋ ಎಂಬ ಭಾವವು. ಸೋಮಶೇಖರಿ=ಪಾರ್ವತಿ. ಇಕ್ಕೆ=ಬಡಿಸಲು. ಅಡಿಗೆ ಮಾಡಿ ಬಡಿಸುವುದಕ್ಕೆ ತಾನಿರುವೆನೆಂದು ಪಾರ್ವತಿಯ ಅಭಿಪ್ರಾಯ. ಕುಮರ ಮೇಯಿಪ=ಕುಮಾರನು ಕೋಣಗಳನ್ನು ಮೇಯಿಸುವನು. ಸಾಮಜಾಸ್ಯಂ=ಗಣಪತಿಯು. ಸಾಮಜ+ಆಸ್ಯ=ಆನೆಯಂತೆ ಮುಖ ಉಳ್ಳವನು.

ಅ:—ವರ್ಣಿಸಲಿಕ್ಕಿರುವ ಅರ್ಥವನ್ನು ತಿಳಿಸುವುದಕ್ಕಾಗಿ ಅದಕ್ಕೆ ಸಮಾನವಾದ ಬೇರೊಂದನ್ನು ಬಣ್ಣಿಸುವುದೇ ಅಪ್ರಸ್ತುತಪ್ರಶಂಸೆಯು. 'ಕೃಷಿತೋ ನಾಸ್ತಿ ದುರ್ಭಿಕ್ಷಂ' ಎಂಬ ಗಾದೆಯಂತೆ ಭಿಕ್ಷೆಬೇಡುವುದಕ್ಕಿಂತ ಕೃಷಿಮಾಡಿಯಾದರೂ ಜೀವಿಸುವುದು ಮೇಲೆಂದು ವರ್ಣಿಸಲಿಕ್ಕಿರುವುದನ್ನು ತಿಳಿಸಲು ಪಾರ್ವತಿಯು ಮಾತನ್ನು ವರ್ಣಿಸಿದ್ದುದರಿಂದ ಅಪ್ರಸ್ತುತ ಪ್ರಶಂಸೆಯು.

೨೯. ಗೃಹಸ್ಥರುದ್ರನು.

ತಿನ್ನಕಾಂಬುದು ಹಸಿದ ಹಾವು ಗಣಪತಿಯಿಲಿಯ
ಸಿನ್ನಳಿಯಗೊಡದು ಕುವರನ ಸೋಗೆ ಹಾವನ್ನು
ಮುನ್ನಮೇ ಮಡದಿಯಾ ಸಿಂಹವದು ಹಿರಿಮಗನ
ತಿನ್ನಲೆಣಿಸಿಪ್ಪುದೈಸೆ ॥
ತನ್ನ ಮಡದಿಯೆ ತಲೆಯ ಗಂಗೆಯಂ ಸ್ಪರ್ಧಿಪಳ್
ಜೊನ್ನೊಡಲನೊಳ್ಪಫಾಲಾನಲಂ ಮುನಿದಿಹಂ
ಖಿನ್ನನಿದರಿಂ ನಂಜನುಂಡನಭವಂ ತಾನು ಗೃಹ
ಕಲಹವಲ್ತೆ? ಕಷ್ಟಂ ॥

ಭಾ:–ಜೊನ್ನೊಡಲ=ಜೊನ್ನ+ಒಡಲ, ಚಂದ್ರ. ಕಪಾಲಾನಲ=ಕಪಾಲದ ಬೆಂಕಿ. ಖಿನ್ನಂ=ದುಃಖಿತನು. ನಂಜು=ವಿಷ. ಇಲ್ಲಿ ಈಶ್ವರನು ವಿಷಪಾನವನ್ನು ಮಾಡಿದುದು ಗೃಹಛಿದ್ರದ ದುಃಖವನ್ನು ತಾಳಲಾರದೆ ಎಂಬಂತೆ ಕವಿಯು ವರ್ಣಿಸುವನು. ಈ ಪದ್ಯವನ್ನೋದುವಾಗ ಈಶ್ವರನು ಉರಗಭೂಷಣನು, ಗಣಪತಿಯು ಮೂಷಿಕವಾಹನನು ಮತ್ತು ಗಜಮುಖನು, ಅಂಬಿಕೆಯು ಸಿಂಹವಾಹಿನಿಯು. ಗಂಗಾಪಾರ್ವತಿಯರು ಒಬ್ಬನನ್ನೇ ಆಶ್ರಯಿಸಿ ಪರಸ್ಪರ ಸವತಿಯರು. ಈಶ್ವರನ ಹಣೆಗಣ್ಣಿನಿಂದೆದ್ದ ಅಗ್ನಿಜ್ವಾಲೆಯು ಮೇಲೇರಿ ಜಟೆಯಲ್ಲಿರುವ ಚಂದ್ರನನ್ನು ಬೇಯಿಸುವುದು ಎಂಬೀ ವಿಷಯಗಳನ್ನು ತಿಳಿದುಕೊಳ್ಳಬೇಕು.

ಅ:–ರುದ್ರನು ತನ್ನ ಕುಟುಂಬದ ಕಲಹದಿಂದ ಖಿನ್ನನಾದನೆಂಬುವನ್ನು ಮನೆಯು ಜಗಳವು ಕಷ್ಟವೆಂಬ ಸಾಮಾನ್ಯ ವಾಕ್ಯದಿಂದ ಸಾಧಿಸಿದ್ದುದರಿಂದ ಅರ್ಥಾಂತರನ್ಯಾಸವು.

---

೩೦. ಈಶ್ವರನು.

ಐದು ಬಾಯಿಯ ಕತದಿ ಮುನ್ನಮೇ ತಿರಿದುಂಬೆ
ಮೊದಲಮಗನಾನೆಬಾಯವ, ಮತ್ತೆ ಪುಟ್ಟಿದವ
ವದನಷಟ್ಕದಿನುಂಬ, ಮಡದಿ ಚಂಡಿಕೆ, ಹಾವುರುಂಡಗಳ್
ಹಾರಪದಕಾ ‖
ಸದನ ಮಂಜಿನ ಬೆಟ್ಟ, ಬಟ್ಟೆ ಮೃಗಗಳ ತೊಗಲು
ಮುದಿಯೆತ್ತು ತೇರಾಗೆ ನಿನಗೆ ಮಾದೇವಗಂ
ಮುದದಿ ನನಗೇನೀವೆಯೋನುಂಟು ನಿನ್ನಡಿಯ ಭಕ್ತಿಯ
ನ್ನೀಡು ಮೃಡನೇ! ‖

ಭಾ:–ಐದು ಬಾಯಿಯ ಕತದಿ=ಐದು ಬಾಯಿಗಳುಳ್ಳ ಕಾರಣ. ಈಶ್ವರನು ಪಂಚಾಸ್ಯನೆಂದು ಭಾವವು. ತಿರಿದು=ಭಿಕ್ಷೆಬೇಡಿ. ಮೊದ

ಲಿಮಗ=ಗಣಪತಿ. ಆನೆಬಾಯವ=ಗಜಮುಖ. ಮತ್ತೆ ಪುಟ್ಟಿದವ=ಎರಡನೆಯ ಮಗ ಷಣ್ಮುಖ. ಸದನ=ಮನೆ. ಮಂಜಿನ ಬೆಟ್ಟ=ಹಿಮಾಲಯ. ತೊಗಲು=ಚರ್ಮ. ತೇರು=ವಾಹನ. ಮಾದೇವ=ಮಹಾದೇವ.

ಅ:-ಇಲ್ಲಿ ಈಶ್ವರನ ನಿಂದೆಯು ವ್ಯಾಜದಿಂದ ಭಕ್ತಿಯನ್ನಿತ್ತು ಮೋಕ್ಷವನ್ನೀವ ಮಹಾನುಭಾವನೆಂದು ಸ್ತುತಿಯು ಸ್ಪಷ್ಟವಾಗುವುದರಿಂದ ವ್ಯಾಜಸ್ತುತಿಯು.

---

೩೧. ಲಕ್ಷ್ಮೀಪಾರ್ವತಿಯರು.

ತಿರುಪೆಗೋಸುಗವೆಲ್ಲಿ ತಿರಿದಪಂ ಗಂಡನಾ?
ತಿರುಗುತಿಹ ಬಲಿರಾಜನಾ ಯಜ್ಞವಾಟದೊಳ್
ಅರುಹು ತಾಂಡವವೆಲ್ಲಿ? ಯಮುನೆಯಾತಟದಲ್ಲಿ, ಮಿಗ
ಮರಿಯದೆಲ್ಲಿ ಕೇಳ್ಳೊ ॥
ಕರನ ವಾರ್ತೆಯನರಿಯೆ, ವೃಷಭಪತಿಯೆಲ್ಲಿಹನು?
ಕರೆದು ಕೇಳಮ್ಮ ಗೋವಳರರಸನನ್ನೆಂಬ
ಗಿರಿಜೆಸಾಗರಜೆಯರ ಸರಸಸಲ್ಲಾಪವದು ನಮಗೀಗೆ
ಸೊಬಗ ಸೊಗವಾ ॥

ಭಾ:-ತಿರುಪೆ=ಭಿಕ್ಷೆ. ಯಜ್ಞವಾಟ=ಯಾಗಶಾಲೆ. ಅರುಹು=ಹೇಳು. ಮಿಗಮರಿ=ಜಿಂಕೆಯ ಮರಿ. ಸೂಕರ=ಹಂದಿ. ನಮಗೆ+ಈಗೆ=ನಮಗೆ ಕೊಡಲಿ. ಈ ಪದ್ಯದಲ್ಲಿ ಲಕ್ಷ್ಮಿಯು ಭಿಕ್ಷೆಬೇಡುವುದೂ ತಾಂಡವನಾಟ್ಯವಾಡುವುದೂ ಕೈಯಲ್ಲಿ ಮೃಗವನ್ನು ಧರಿಸುವುದೂ ನಂದಿಗೊಡೆಯನಾಗಿರುವುದೂ ಈಶ್ವರನ ಧರ್ಮಗಳೆಂದು ತಿಳಿದು ಅಂತಹ ನಿನ್ನ ಪತಿ ಯೆಲ್ಲಿರುವನೆಂದು ಪಾರ್ವತಿಯೊಡನೆ ಪರಿಹಾಸ ಪ್ರಶ್ನೆ ಮಾಡಲು ಪಾರ್ವತಿಯು ಆ ಧರ್ಮಗಳು ಲಕ್ಷ್ಮಿಯ ಗಂಡನಾದ ಕೃಷ್ಣನಲ್ಲಿಯೂ ಇರುವುದರಿಂದ ಅವಳ ಪ್ರಶ್ನೆಗಳನ್ನು ಅವಳ ಗಂಡನ ಪರವಾಗಿಯೇ ತೋರಿಸುವಳು. ಇಲ್ಲಿ ದೇವರು ವಾಮನಾವತಾರದಲ್ಲಿ ಬಲಿಯೊಡನೆ

ಭೂಮಿ ಬೇಡಿದುದನ್ನೂ ಕೃಷ್ಣಾವತಾರದಲ್ಲಿ ಯಮುನಾನದಿಯ ಬಳಿ ರಾಸಕ್ರೀಡೆ ಮತ್ತು ಗೋಪಾಲನ ಮಾಡಿದುದನ್ನೂ ವರಾಹಾವತಾರವೆತ್ತಿದುದನ್ನೂ ನೆನಪಿನಲ್ಲಿಡಬೇಕು.

ಅ:—ಲಕ್ಷ್ಮಿಯು ಮಾತಿಗೆ ಪಾರ್ವತಿಯು ಬೇರೆ ಅರ್ಥಮಾಡುವಂತೆ ಮಾರ್ಗಸಲ್ಪಟ್ಟದ್ದರಿಂದ ವಕ್ರೋಕ್ತಿಯು.

೩೨. ಪಾರ್ವತೀಪರಮೇಶ್ವರರ ಸಂವಾದ.

ಪೊರಗದಾರ್? ನಾಂ ಶೂಲಿ, ವೈದ್ಯನಂ ಪುಡುಕು ನೀಂ,
ತೆರೆ ಕದವ ನಾಂ ನೀಲಕಂಠನೌ, ಕೇಗೆಲೈ
ಗಿರಿಜೆ ನಾಂ ಪಶುಪತಿಯು, ಕೋಡೇಕೆ ತೋರವೈಯಂತಲ್ಲ
ನಾಂ ಸ್ಥಾಣು ಕೇಳ್ ॥
ಮರನೊರೆವುದನ್ನರಿಯೆನಿದುವರೆಗ, ಮಲ್ಲ ನಾ
ನರಿ ಶಿವಾಪತಿಯೆಂದದಂತಾಗೆ ನಡೆ, ಕಾಡ
ಮರೆಗೊಳ್ಳು ನೀ,ನೆಂಬ ಗಿರಿಯಣುಗಿ ಬಾಂದಲೆಯ
ರಿವರ ಕುಡುನುಡಿ ಕಾಯಲಿ ॥

ಭಾ:—ಶೂಲಿ=ಶೂಲವುಳ್ಳವನು, ಈಶ್ವರ ಅಥವಾ ರೋಗಿ. ನೀಲಕಂಠ=ಕಪ್ಪಾದ ಕತ್ತುಳ್ಳವ, ಈಶ್ವರ ಅಥವಾ ನವಿಲು. ಕೇಗು=ಕೂಗು. ಪಶುಪತಿ=ಈಶ್ವರ ಅಥವಾ ಬಸವ. ಸ್ಥಾಣು=ಈಶ್ವರ ಅಥವಾ ಮರದ ಕಾಂಡ. ಶಿವಾಪತಿ=ಪಾರ್ವತೀಪತಿ ಅಥವಾ ಶಿವಾ=ಹೆಣ್ಣುನರಿಯು. ಪತಿ=ಸ್ವಾಮಿ, ಗಂಡುನರಿ. ಗಿರಿಯ+ಅಣುಗಿ=ಪರ್ವತದ ಮಗಳು. ಪಾರ್ವತಿ. ಬಾಂದಲೆಯ=ಗಂಗಾಧರ, ಮಹೇಶ್ವರ. ಕುಡುನುಡಿ=ಕೊಂಕುನುಡಿ ವಕ್ರೋಕ್ತಿ. ಇಲ್ಲಿ ಈಶ್ವರನ ಉತ್ತರಗಳಲ್ಲಿರುವ ಶೂಲಿ ಮೊದಲಾದ ಹೆಸರುಗಳನ್ನು ಹರನು ತನ್ನ ಪರವಾಗಿ ಹೇಳಿದಾಗ ಪಾರ್ವತಿಯು ವಿನೋದಕ್ಕಾಗಿ ಅವುಗಳನ್ನು ಅನ್ಯಾರ್ಥಪರವಾಗಿ ತೆಗೆದುಕೊಂಡು ಮಾತಾಡುವಳು ಎಂದು ತಾತ್ಪರ್ಯವು.

ಅ:-ಇಲ್ಲಿ ಪರಮೇಶ್ವರನ ಮಾತಿಗೆ ಶ್ಲೇಷದಿಂದ ಅರ್ಥಾಂತರವನ್ನು ಕಲ್ಪಿಸಿ ಉತ್ತರ ಕೊಡುವುದರಿಂದ ವಕ್ರೋಕ್ತಿಯೆಂಬ ಅಲಂಕಾರವು.

---

೩೩. ಲಕ್ಷ್ಮೀಪಾರ್ವತಿಯರು.

ಗೌರಿ! ಎಲ್ಲಿಹ ತಿರುಕ? ಬಲಿಯ ಮುಖವಾಟದೊಳ್
ತರಿಸು ಪಶುಪತಿಯನ್ನು, ಗೊಲ್ಲನಂ ತಿಳಿಯೆ ನಾಂ
ಉರಗಭೂಷಣನಿಲ್ಲವೇ? ಕೆಳದಿ! ಇರ್ದಪಂ ಹಾವಿನಾ
ಮೆಯ್ಯ ಮೇಲೆ ॥
ನಾರಿರತ್ನಳೆ! ನೀ ವಿಷಾದ ಬಿಡು, ಚಂಚಲೆಯೆ!
ಯಾರಿಗರುಹುವೆ? ಬಿಡೆನು ಪಿಡಿದವನ ಕೇಳೆಂಬ
ಗಿರಿರಾಜತನುಜೆ ಸಾಗರತನಯೆಯುವರೊಳಗೆ ನಡೆದ
ಹಾಸ್ಯವೆ ಕಾಯಲಿ ॥

ಭಾ:-ತಿರುಕ=ಭಿಕ್ಷುಕ, ಈಶ್ವರ ಮತ್ತು ವಟುವಾಮನ. ಪಶುಪತಿ=ನಂದಿಯ ಸ್ವಾಮಿ, ಈಶ್ವರ, ಪಶುಗಳ ಪತಿ ಕೃಷ್ಣ. ಉರಗಭೂಷಣ=ಹಾವೇ ತೊಡವಾಗಿವುಳ್ಳವ, ಈಶ್ವರ. ಅಥವಾ ಹಾವಿಗೆ ಭೂಷಣದಂತಿರುವ ಕಾಳಿಯಮರ್ದನ ವ ಶೇಷಶಾಯಿ. ವಿಷಾದ ಬಿಡು=ವಿಷಾದವನ್ನು+ಬಿಡು. ದುಃಖವನ್ನು ಬಿಡು. (ವಿಷಾದನನ್ನು+ಬಿಡು. ಕ್ರಿ. ಸ.) ವಿಷ+ಅದ=ವಿಷವನ್ನು ತಿಂದವ, ಈಶ್ವರ. ಚಂಚಲೆ=ಅಸ್ಥಿರಳು, ಲಕ್ಷ್ಮಿ. ಇಲ್ಲಿ ಲಕ್ಷ್ಮಿಯು ತನ್ನ ಮಾತು ವಿನೋದಕ್ಕಾಗಿ ಸ್ವರೂ ತುಸು ಹಿಯ್ಯಾಳಿಕೆಯನ್ನು ತೋರಿಸುವಂತಹದಾಗಿರುವ ಕಾರಣ ಅದರಿಂದೇನಾದರೂ ನಿನ್ನ ಮನಸ್ಸಿಗೆ ಕೊರತೆಯುಂಟಾಗಿದ್ದರೆ ಅದನ್ನು ಬಿಡು ಎಂದು ಪಾರ್ವತಿಗೆ ಹೇಳಲು ಅವಳು "ಗಂಡನನ್ನು ಬಿಡು" ಎಂಬ ಅರ್ಥಾಂತರವನ್ನೇ ಗ್ರಹಿಸಿಕೊಂಡು ಒಮ್ಮೆ ಸೇರಿದವರನ್ನು ಕೂಡಲೇ ಬಿಟ್ಟುಹೋಗುವುದು ಚಂಚಲೆಯಾದ ನಿನ್ನ ಸ್ವಭಾವವು. ನಾನು ಹಾಗೆಂದಿಗೂ ಮಾಡಲಾರೆನು. ಎಂಬ ಭಾವವನ್ನು ಚಂಚಲೆಯೆಂಬ ಸಂಬುದ್ಧಿಯಿಂದ ತೋರಿಸುವಳು.

ಅ:–ಇಲ್ಲಿ ಲಕ್ಷ್ಮಿಯು ಪಾತಿಗೆ ಗೌರಿಯು ಬೇರೆ ಅರ್ಥಮಾಡುವುದರಿಂದ ವಕ್ರೋಕ್ತಿಯು.

೩೪. ಲಕ್ಷ್ಮೀಪಾರ್ವತಿಯರು.

ಚಂಚಲೆಯೆ! ಕೇಳು ಕಾಪಾಲಿಕನ ಕಾಮಿನಿಯೆ!
ಸೂಚಿಪುದದೇನು? ಪೆತ್ತವನಾರು? ನಿನ್ನ ಕೇ
ಳಚಲಾತ್ಮಜಾತೆ! ಜಲನಿಧಿಯು ಪಡೆದವನೆನ್ನ, ನೀರಿನಿಂ
ಜನಿಪರುಂಟೇ? ॥
ವಂಚಿಪೆಯ! ನಂಬುವರೆ? ಜನರು ನಾನರಿಯೆ ಪ್ರ
ಪಂಚದ ಸ್ಥಿತಿಯನ್ನೆ, ಕೇಳ್ಶೈಲಜಾತೆ! ಪ್ರ
ಪಂಚದೊಳ್ಕಲ್ಮಣ್ಣ ತಿಟ್ಟದಿಂ ಪುಟ್ಟಿದರ್ ನಂಬಿದಿರ
ರಮ್ಮ ಕೇಳಾ ॥

ಭಾ:–ಕಾಪಾಲಿಕ=ಕಪಾಲಧಾರಿ, ಈಶ್ವರ. ಪೆತ್ತವನು=ಪಡೆದವನು, ತಂದೆ. ಅಚಲಾತ್ಮಜಾತೆ=(ಅಚಲ+ಆತ್ಮಜಾತೆ) ಪರ್ವತದ ಮಗಳು. ಜನಿಪರು=ಹುಟ್ಟುವವರು. ಕಲ್ಮಣ್ಣತಿಟ್ಟ=ಕಲ್ಲು ಮಣ್ಣುಗಳ ರಾಶಿ, ಗುಡ್ಡ. ತಾನು ನೀರಿನಿಂದ ಹುಟ್ಟಿದುದು ಸೋಜಿಗವಾದರೆ ಪರ್ವತದಿಂದ ನೀನು ಹುಟ್ಟಿದುದು ಅಂತೆಯೇ ಸರಿಯೆಂದು ಲಕ್ಷ್ಮಿಯ ಭಾವವು.

೩೫. ಪಾರ್ವತೀ-ಗಣಪ-ಷಣ್ಮುಖರ ಸಂವಾದ.

ಗಣಪತಿಯೆ! ಏನಮ್ಮಾತೆ! ಏತಕಳುತಿಹೆ? ಕುವರ
ಕೆಣಕಿ ಬಡೆವನು ಕಿವಿಗಳನು "ಮೊರಗಳಿವು" ಎಂಬ
ಸೆಣಸಲಾಗದು ಸೋಗೆವೇರ! ಅಣ್ಣಂ ಎನ್ನ ಕಣ್ಗ
ಳನ್ನೆಣಿಕೆಗೆಯ್ದಂ ॥

ಗಣಪ! ಏನಿದು ಚೇಷ್ಟೆ? ಅಮ್ಮ ಮೂಗನ್ನಳಿದ
ನಣವೆನ್ನ ತಪ್ಪಿಲ್ಲ ತಾಯೆ! ಎನ್ನಯ ತಲೆಗ
ಳೆಣಿಸಿದಂ ಜನನಿ! ಬಸಿರಿಗೆ ಮಣಿದನೆಂಬುದಂ ಕೇಳಿ
ನಕ್ಕವಳೆ! ಸಲಹೌ ॥

ಭಾ:-ಸೆಣಸು=ಉಪದ್ರವದ ಕೊಡು. ಸೋಗೆದೇರ=ಮಯೂರ ವಾಹನ, ಷಣ್ಮುಖ. ಅಣಂ=ಸ್ವಲ್ಪ. ಬಸಿರ್=ಹೊಟ್ಟೆ. ಮಣಿ=ನಮಸ್ಕರಿಸು. ಇಲ್ಲಿ ಗಣಪತಿ ಷಣ್ಮುಖರು ಪ್ರತಿಯೊಬ್ಬರ ಆವಾವ ಅಂಗಗಳನ್ನುದ್ದೇಶಿಸಿ ಚೇಷ್ಟೆ ಮಾಡುವರೋ ಆಯಾ ಅಂಗಗಳು ಎಲ್ಲರಂತೆ ಸಾಮಾನ್ಯವಾಗಿರದೆ ಬಲು ವಿಕಾರವಾಗಿರುವವೆಂದು ತಿಳಿಯತಕ್ಕದು.

---

೨೬. ಈಶ್ವರನ ತಾಂಡವ ನರ್ತನವು.

ಮದ್ದಲೆಯ ನಂದೀಶ ಬಾರಿಸಲು ಮೋಡದಾ
ಸದ್ದೆನುತ್ತಾ ಕುಮಾರನ ಸೋಗೆಯೋಡಿಬರಲ್
ಎದ್ದು ರುದ್ರನ ಹಾರವಾದ ಹಾವುಗಳೆರಡು ಕಾಣುತ್ತೆ
ನವಿಲ ಬೆದರಿ ॥
ಸುದ್ದಿಯಿಲ್ಲದೆ ತಾಂಡವದ ಸಮಯದೊಳು ಜಾರಿ
ಬಿದ್ದು ಬಿಲವೆಂದು ಗಣಪತಿಯ ಸುಂಡಿಲವ
ಸಿದ್ದಂತೆ ಮುದುರಿ ಪೊಗಲಾಗಲುಬ್ಬಸಗೊಂಡವನ
ಸಾಲುಸೀನು ಕಾಯ್ಗೆ ॥

ಭಾ:-ಸೋಗೆ=ನವಿಲು. ಹಾರ=ಸರ. ಬೆದರಿ=ಹೆದರಿ. ಮುದುರು=ಅವಯವಗಳನ್ನು ಸಂಕೋಚಮಾಡು. ಸಾಲುಸೀನು=ಸಾಲಾದ ಸೀನುಗಳು.

ಅ:-ಮೋಡದಾ ಸದ್ದೆಂದು ಸೋಗೆಗೆ ಭ್ರಾಂತಿ ಹುಟ್ಟಿದ್ದರಿಂದ ಭ್ರಾಂತಿಮದಲಂಕಾರವು. ಇಂತಹ ವಿಷಯದಲ್ಲಿ ನಡೆದಿಲ್ಲವಾದರೂ ನಡೆದಂತೆ ವರ್ಣಿ

ದ್ದುದರಿಂದ ಸಂಬಂಧಾತಿಶಯೋಕ್ತ್ಯಲಂಕಾರವು. ಈ ಎರಡಲಂಕಾರಗಳಿಗೆ ಅಂಗಾಂಗಿಭಾವ ಸಂಕರವು.

---

೩೭. ಸೂರ್ಯನು.

ತೇರಿಗೊಂದೇ ಗಾಲಿ, ಹಾವುಗಳ ಬಿಗಿದ ಸರಿ
ಬಾರದಿಹ ಏಳ್ಕುದುರೆಗಳು, ಮಾರ್ಗವಾಗಸದಿ
ಸಾರಥಿಗೆ ಕಾಲಿಲ್ಲ, ಮಾದೊಡೆಯು ರವಿ, ಲೋಕವನು
ಬಿಡದೆ ಸುತ್ತು ಗೆಯ್ದ ॥
ಮೀರಿರದೆ ತಕ್ಕ ಕಾಲದಲಿ ದಿನದಿನ ಗಿರಿಯು
ನೇರಿ ಬರೆ ಯೆಂತಾದೊಡಂ ದೊಡ್ಡಿದರ್ ತಮ್ಮ
ಕಾರಿಯವ ಸಾಧಿಪರ್ ತಕ್ಕ ಸಾಧನವಿಲ್ಲದಿರ್ದರೆಯು
ಮಾವರೆ ಸಂತರ್ ॥

ಭಾ:—ತೇರು=ರಥ. ಗಾಲಿ=ಚಕ್ರ. ಆಗಸ=ಆಕಾಶ. ಕಾರಿಯ=ಕಾರ್ಯ. ದೊಡ್ಡಿದರ್=ದೊಡ್ಡವರು. ಸಂತರ್=ಸಜ್ಜನರು. ಸೂರ್ಯನ ರಥಕ್ಕೆ ಒಂದೇ ಚಕ್ರವೆಂದೂ ಆ ರಥಕ್ಕೆ ಏಳು ಕುದುರೆಗಳನ್ನು ಹಾವಿನಿಂದ ಬಿಗಿರುವುದೆಂದೂ ಸಾರಥಿಯಾದ ಅರುಣನಿಗೆ ಕಾಲಿಲ್ಲವೆಂದೂ ಶಾಸ್ತ್ರಪ್ರಸಿದ್ಧಿಯು.

ಅ:—ಸೂರ್ಯನ ನಿತ್ಯಸಂಚಾರವನ್ನು ದೊಡ್ಡವರು ತಮ್ಮ ಸತ್ತ್ವದಿಂದೇ ಕಾರ್ಯವನ್ನು ಸಾಧಿಪರೆಂದು ಸಾಮಾನ್ಯವಾದ ಮಾತಿನಿಂದ ಸಮರ್ಥಿಸಿದ್ದುದರಿಂದ ಅರ್ಥಾಂತರನ್ಯಾಸವು.

---

೩೮. ಮನ್ಮಥನು.

ಕುಸುಮವೇ ಬಿಲ್ಲಾಗೆ ಯಾರಡಿಯೆ ನೇಣಾಗೆ
ಕುಸುಮಗಂಧಿಯರ ಕುಡುನೋಟವೇ ಕಣೆಯಾಗೆ

ನಸುಗಾಣಲಾರದಳಿಮೆಯ್ಯನಂ ತಾನಾಗೆ, ಜಡರೂಪ
ನಾಗೆ ಗೆಳೆಯನ್ ॥
ಕುಸುಮಕೋಮಲವಾದ ಪೆಂಬಡೆಯಿನೊರ್ವನೇ
ಎಸೆವ ಗಿಳಿದೇರನೇರುತ್ತೆ ಮೂಲೋಕವಂ
ಮಸಗಿಸುವನೇಕೆ? ಬಲ್ಲಿದವರ್ಗೆ ಸಾಮಗ್ರಿಯೇಂ
ಕಜ್ಜವನ್ನೆಸಗಲುಂ ॥

ಭಾ:- ಅರಡಿ=ಭ್ರಮರ. ಕುಡುನೋಟ=ಕಡೆಗಣ್ಣೋಟ. ಕಣೆ=ಬಾಣ. ನಸುಗಾಣಲು+ಆರದ=ಸ್ವಲ್ಪವೂ ನೋಡಲಿಕ್ಕಾಗದ. ಅಳಿಮೆಯ್ಯನಂ=ಅನಂಗ. ಜಡರೂಪಂ=ನೀರಿನ ರೂಪವುಳ್ಳವ, ಚಂದ್ರ. ಸಂಸ್ಕೃತದಲ್ಲಿ ಲ ಡ ಅಕ್ಷರಗಳಲ್ಲಿ ಲಕಾರದ ಬದಲಿಗೆ ಡಕಾರವನ್ನು ಉಪಯೋಗಿಸುವುದು ಸಂಪ್ರದಾಯ. ಪೆಂಬಡೆ=ಪೆಣ್ಣುಗಳ ಪಡೆ, ಸ್ತ್ರೀಸೈನ್ಯ. ಗಿಳಿದೇರು=ಗಿಳಿಯೇ ತೇರು, ರಥ. ಮನ್ಮಥನು ತಾನು ಅನಂಗನಾಗಿ, ತುಂಬಿಯೇ ಹೆದೆಯಾಗುಳ್ಳ ಕುಸುಮ ಕೋದಂಡವನ್ನು ಹಿಡಿದು, ಚಂಚಲಾಕ್ಷಿಯರ ಓರೆನೋಟಗಳೆಂಬ ಬಾಣಗಳಿಂದ ಜಡಾತ್ಮನಾದ ಚಂದ್ರನೆಂಬೊಬ್ಬ ಮಿತ್ರನ ಸಹಾಯದಿಂದ ಯಾವ ಕೆಲಸಕ್ಕೂ ಬಾರದ ಹೆಂಗಳ ಪಡೆಯನ್ನು ಮುಂದಿರಿಸಿಕೊಂಡು ಮೂರು ಲೋಕಗಳನ್ನೂ ಜೈಸುವನೆಂದಮೇಲೆ ಸ್ವಯಂಶಕ್ತರಾದವರಿಗೆ ಕಾರ್ಯಸಾಧನೆಯಲ್ಲಿ ಸಾಮಗ್ರಿಯು ಅಪೇಕ್ಷೆಯಿಲ್ಲವೆಂದು ಭಾವವು.

ಅ:- ಇಲ್ಲಿ ಮನ್ಮಥನೊಬ್ಬ ಮೂಲೋಕವನ್ನು ಜೈಸುವನೆಂಬ ವಿಶೇಷವನ್ನು 'ಬಲ್ಲಿದವರ್ಗೆ ಸಾಮಗ್ರಿಯೇಂ ಕಜ್ಜವನ್ನೆಸಗಲುಂ' ಎಂಬ ಸಾಮಾನ್ಯ ಮಾತಿನಿಂದ ಸಮರ್ಥನೆಮಾಡಿದ್ದರಿಂದ ಸಾಮಾನ್ಯದಿಂದ ವಿಶೇಷ ಸಮರ್ಥನರೂಪವಾದ ಅರ್ಥಾಂತರನ್ಯಾಸಾಲಂಕಾರವು.

೩೯. ರತಿ ಮನ್ಮಥರು.

ರಮಣಿಯೇ! ಕಣ್ಮನವನೆಳೆವ ನಿನ್ನೀಮೊಗವ
ಕಮಲಗಳ-ಸಂಗಡಿಗನನ್ನಾಗಿ ಮಾಡೆ, ತಾಂ

ಕಮಲಜಂ, ಹಿಂದೆ ಮರೆದಿರ್ದ ಕತದಿಂದ ತಾವರೆ
ಗೊಳದ ಬದಿಗಳಲ್ಲಿ ॥

ಸಮನಾಗಿ ಬರೆದಿರ್ಪನವ ಹಂಸಪಾದಗಳ
ಕಮನೀಯಚರಿತೆ! ರತಿದೇವಿ! ಎಂದೇಗಳುಂ
ಕ್ರಮದಿ ಮನ್ಮಥನವಳನುಬ್ಬಿಸುತೆ ಕಾರ್ಯಗಳ
ಸಾಧಿಪಂ ಸಾಮ ಲೇಸೈ ॥

ಭಾ:–ಸಂಸ್ಕೃತದಲ್ಲಿ ಏನಾದರೊಂದನ್ನು ಬರೆಯುವಾಗ ನಡುವೆ ಪ್ರಮಾದದಿಂದ ಬರೆಯದೆ ಬಿಟ್ಟುಹೋದ ಸಂಗತಿಯನ್ನು ಸಾಲಿನ ಮೇಲ್ಬದಿಯಲ್ಲಿ ಹಂಸಪಾದವನ್ನು ಅಂದರೆ ॑ ಚಿಹ್ನೆಯನ್ನು ಹಾಕಿ ಕೆಳಬದಿಯಲ್ಲಿ ಯಾ ಬೇರೆ ಕಡೆಯಲ್ಲಿ ಬರೆಯುವುದು ವಾಡಿಕೆ. ಅಂತೆಯೇ ಬ್ರಹ್ಮನು ಕೂಡಾ ತಾವರೆ ಕೊಳದ ಮಧ್ಯದಲ್ಲಿ ಸೃಷ್ಟಿಸ ಬೇಕಾಗಿದ್ದ ರತಿಯ ಮುಖವನ್ನು ಬಿಟ್ಟುದಕ್ಕೆ ಅದರ ಕುರುಹಾಗಿ ಕೊಳದ ಬದಿಯಲ್ಲಿ ಹಂಸಪಾದವನ್ನು ಹಾಕಿರುವನು ಎಂಬುದು ಕವಿಯ ಉತ್ಪ್ರೇಕ್ಷೆ. ತಾವರೆ ಕೊಳದ ಬದಿಯಲ್ಲಿ ಯಾವಾಗಲೂ ಹಂಸಗಳು ಸುಳಿದಾಡುವುದು ಪದ್ಧತಿಯೆಂದು ತಿಳಿಯತಕ್ಕದು. ಮುಖಕ್ಕೂ ತಾವರೆಗಳಿಗೂ ಅಷ್ಟೊಂದು ಹೋಲಿಕೆಯಿದೆ ಎಂಬ ಭಾವವು. ಕಮನೀಯ=ಮನೋಹರ. ಉಬ್ಬಿಸು=ಉತ್ಸಾಹಗೊಳಿಸು. ಸಾಮ=ಸಮಾಧಾನ.

ಅ:–ಇನ್ನೊಂದರ ಧರ್ಮವು ವರ್ಣಿಸಬೇಕಾದ ವಸ್ತುವಿನಲ್ಲಿ ಕಂಡುದ ರಿಂದ ಇದು ಅದಾಗಿರಬೇಕೆಂದೂಹಿಸುವುದೇ ಉತ್ಪ್ರೇಕ್ಷೆಯು. ಇಲ್ಲಿ ಅಂಚೆಗಳ ಪಾದವೇ ಹಂಸಪಾದವೆಂಬ ಶ್ಲೇಷ ಮೂಲಕವಾದ ಅತಿಶಯೋಕ್ತಿಯು. ಕಮಲ ಜೊಡನೆ ನಿನ್ನ ಮುಖವನ್ನಿರಿಸಲು ಮರೆತುದರಿಂದಲೋ ಹಂಸಪಾದವನ್ನು ಹಾಕಿದ ನೆಂದು ಹೇತೂತ್ಪ್ರೇಕ್ಷೆಯು. ಆದರೆ ಉತ್ಪ್ರೇಕ್ಷೆಯನ್ನು ತಿಳಿಸುವ ಶಬ್ದವಿಲ್ಲದ್ದರಿಂದ ಗಮ್ಯೋತ್ಪ್ರೇಕ್ಷೆಯೆನಿಸುವುದು.

೪೦. ಕ್ಷೀಣಚಂದ್ರನು.

ಜಡದೇಹನಿಳಿವೈಯ್ಯ, ತಾಂ ಕಲಂಕಿಯು, ನಿರುತ
ಬಿಡದವಂ ವಕ್ರತೆಯು, ಮಿತ್ರಸಂಕಟದಲ್ಲಿ
ಬಿಡಗಿಸಿಂ ಜಡದಿಂದ ಜನಿಸಿ, ದೋಷಾಕರಂ, ಕಳ್ಳರಾ
ದರ್ಗೆ ಗೆಳೆಯಂ ॥
ನಡತೆಗೆಟ್ಟಿಹ ಜಾರೆಯರಿಗೆಲ್ಲ ನೇಹಿಗಂ
ಕಡು ನಿಶಾಚರನಾದೊಡಂ ಚಂದಿರನು ಹರಗೆ
ಕಡು ನಲ್ಲನಾಗಿ ತಲೆಯನ್ನೇರ್ದನಾಶ್ರಿತರ ಗುಣದೋಷ
ವೆಣಿಸರಾರುಂ ॥

ಭಾ:-ಜಡದೇಹ=ಜಲಮಯವಾದ ದೇಹವುಳ್ಳವ. ಜಾಡ್ಯವುಳ್ಳ ದೇಹದವ. ಇಳಿವೈಯ್ಯ=ಕ್ಷಯರೋಗಿ. ಕ್ಷಯರೋಗಿ=ಕ್ಷಯಿಸುವ ಸ್ವಭಾವದವ. ಕ್ಷಯವೆಂಬ ರೋಗವುಳ್ಳವ. ಕಲಂಕಿ=ಲಾಂಛನವುಳ್ಳವ, ಅಪವಾದವುಳ್ಳವ. ವಕ್ರತೆ=ಬಾಗಿ ಇರುವಿಕೆ. ಕೊಂಕುಸ್ವಭಾವ. ಜಡ=ಜಲ. (ಲಡಯೋಃ ಅಭೇದಃ). ಮಿತ್ರ=ಸೂರ್ಯ. ಸ್ನೇಹಿತ. ದೋಷಾಕರ=ರಾತ್ರಿಯನ್ನುಂಟುಮಾಡುವವ, (ದುರ್ಗುಣ) ಕೆಡುಕುಗಳಿಗೆ ಆಶ್ರಯಸ್ಥಾನವಾದವನು. ನಡತೆಗೆಟ್ಟಿಹ=ಒಂದೇ ತರದ ನಡೆಯಿರದ, ದುರ್ನಡತೆಯು. ನೇಹಿಗ=ಸ್ನೇಹಿತ. ನಿಶಾಚರ=ರಾತ್ರಿಸಂಚರಿಸುವವ, ರಾಕ್ಷಸ.

ಅ:-ಮಿತ್ರಸಂಕಟ, ದೋಷಾಕರ ಮೊದಲಾದ ಪದಗಳಲ್ಲಿ ಶ್ಲೇಷಾಲಂಕಾರವು. ರುದ್ರನು ಮಾನಿಸಲಿಕ್ಕೆ ಬೇಕಾದ ಕಾರಣಗಳು ಚಂದ್ರನಲ್ಲಿಲ್ಲದಿದ್ದರೂ ಮಾನಿಸಿದನೆಂಬುದರಿಂದ ವಿಶೇಷೋಕ್ತ್ಯಲಂಕಾರವು. ಕಾರಣಗಳೆಲ್ಲ ಇದ್ದರೂ ಕಾರ್ಯ ಹುಟ್ಟದಿರುವುದೇ ವಿಶೇಷೋಕ್ತಿಯು. 'ಆಶ್ರಿತರ ಗುಣದೋಷವೆಣಿಸರಾರುಂ' ಎಂಬುದರಿಂದ ಅರ್ಥಾಂತರನ್ಯಾಸವು. ಶ್ಲೇಷ ಅತಿಶಯೋಕ್ತಿಗಳಿಗೆ ಅಂಗಾಂಗಿ ಭಾವ ಸಂಕರವು.

೪೧. ಕರ್ಣಹಿಮಗಳು.

ಜನಿಸಿ ತಾಂ ಕನ್ನೆಯಲಿ, ಕೀಳ್ಜಾತಿಯೊಳ್ನೆಲೆಸಿ
ತನಗೆ ಸರಿಯಿಲ್ಲದೋಲ್ ಕೌಶಲ್ಯವಾಂತು, ಮೇ
ದಿನಿಸಿನಿಸು ಬಲವೇರಲಿದಿರಾದರಂ ಕೆಡಹಿ ಮತ್ತೆ
ಬಲ್ಪಿಂದೆ ಮೆರೆದು ॥

ಧನುವಿನೊಳ್ ಪೌರುಷಂ ದೋರಿ, ಬಲ್ಲಿದರುಗಳ
ನನುವಿನಿಂ ಮೆಟ್ಟಿ, ಮಣಿಯಿಸಿ, ಧನಂಜಯನೊರ್ವ
ಮುನಿಯೆ ಬೆದರ್ದಡಗುವಾ ಕರ್ಣ ಹಿಮರೊಳಗೆ ಭೇದಂ
ಕಾಣ್ಬುದೆಂತು ತಿರೆಯೊಳ್ ॥

ಭಾ:—ಕನ್ನೆ=ಮದುವೆಯಾಗದಿರುವ ಕನ್ನಿಕೆ, ಕನ್ಯಾಮಾಸ. ಕೀಳ್ಜಾತಿ=ಸೂತಕುಲ, ಕೀಳಗಣಜಾತಿ. ಕೌಶಲ್ಯವಾಂತು=ಚಟುಪಟಿಕೆ ಹೊಂದಿ, ಭೂಮಿಯಲ್ಲಿ ಮುಳ್ಳಿನಂತೆಲ್ಲರಿಗೆ ಖೇದಗೊಳಿಸುತ್ತಿದ್ದು. ಪೌರುಷ=ಶಕ್ತಿ, ಸಾಹಸ. ಧನು=ಧನುರ್ಮಾಸ, (ಪೆರಾರ್ದೆ), ಧನುಸ್ಸು, (ಬಿಲ್ಲು). ಅನುವು=ಚಮತ್ಕಾರ, (ಉಪಾಯ). ಮಣಿಯಿಸು=ಬಾಗಿಸು, (ಬಗ್ಗಿಸು). ಧನಂಜಯ=ಅರ್ಜುನ, ಬೆಂಕಿ. ಬೆದರ್=ಹೆದರು. ಅಡಗು=ನಾಶವಾಗು. ಕರ್ಣನು ಕುಂತಿಯ ಕನ್ಯಾದೆಶೆಯಲ್ಲಿ ಹುಟ್ಟಿ, ಕೀಳ್ಜಾತಿಯಾದ ಸೂತನ ಮನೆಯಲ್ಲಿ ಬೆಳೆದು, ಪರಶುರಾಮನಿಂದ ಯುದ್ಧಕೌಶಲ್ಯವನ್ನು ಪಡೆದು, ಬಿಲ್ಲುಬಾಣಗಳ ಪೌರುಷದಿಂದ ಬಂದ ಬಂದ ವೀರರನ್ನು ಸೋಲಿಸುತ್ತಾ ಅರ್ಜುನನಿಗೆ ಮಾತ್ರ ಹೆದರುತ್ತಿದ್ದನು. ಹಿಮವೂ ಕನ್ಯಾಮಾಸದಲ್ಲಿ ಹುಟ್ಟಿ, ಮುಂಜಾನೆ ಮೀಯಲು ಹೆದರುವ ಕೀಳ್ಜಾತಿಯವರಲ್ಲಿ ಹೆಚ್ಚಾಗಿ ನೆಲಸಿ, ಭೂಮಂಡಲದಲ್ಲಿ ಮುಳ್ಳಿನಂತಿದ್ದು, ದಿನ ದಿನಕ್ಕೆ ಬಲಿಯುತ್ತಾ ಜನರನ್ನು ರೋಗಗಳಲ್ಲಿ ಕೆಡಹುತ್ತಾ ಧನುತಿಂಗಳಲ್ಲಿ ಸಂಪೂರ್ಣ ಬಲವನ್ನು ಹೊಂದಿಯೂ ಬೆಂಕಿಗೆ ಮಾತ್ರ ಹೆದರುವುದು ಎಂಬ ಭಾವವು.

ಅ:—ಈ ಪದ್ಯದಲ್ಲಿ ಕನ್ನೆ, ಕೌಶಲ್ಯ, ಘನ, ಧನಂಜಯ ಮೊದಲಾದ ಅನೇಕಾರ್ಥವುಳ್ಳ ಶಬ್ದಯೋಜನೆಯಿರುವುದರಿಂದ ಶ್ಲೇಷಾಲಂಕಾರವು. ಇದು ಒಂದೊಂದು ಅರ್ಥದಲ್ಲಿ ಒಂದೊಂದು ಬಗೆಯಿಂದ ಪದಗಳನ್ನು ಭಂಗಮಾಡದೆ ಅರ್ಥ ಕೊಡುವುದರಿಂದ ಅಭಂಗಶ್ಲೇಷವು. ಮತ್ತು ಇಲ್ಲಿ ಕರ್ಣಾದಿಗಳೆರಡೂ ವರ್ಣನೀಯಗಳಾಗಿ ಪ್ರಕೃತವಾದುದರಿಂದ ಪ್ರಕೃತಾನೇಕವಿಷಯವಾದುದು.

೪೨. ಚತುರ ಕವಿಯು.

ಹರಿಯರ್ಧಮಂ ಹರಿಸಲುಳಿದರ್ಧವನ್ನಗಜೆ
ಹರಿಸೆ ಹರನಿಂತಿಲ್ಲದಾಗಿರಲು ಭೂತಲದಿ
ಪರಿದು ಪೋದಳು ಕಡಲ ಗಂಗೆ ಬಾನ್ನೇರಿದಂ ಚಂದಿರಂ
ತಾಣವಿರದೆ ॥
ಉರಗಪತಿ ಪಾತಾಳವಂ ಪೋಗಿ ಸೇರ್ದನಂ
ದರಿವುಮಧಿಕಾರವುಂ ಪೊರ್ದಿದುವು ನಿನ್ನ ನಿ
ನ್ನರಿಕೆಗೆಯ್ವಲದೇನನೆನ್ನ ಸೇರಿತು ಒಂದೆ ತಿರಿದುಂಬ
ಗತಿಯು ರಾಯಾ! ॥

ಭಾ:—ಅನೇಕ ಪ್ರಾಣಿಗಳಿಗೆ ಆಶ್ರಯವಾದ ಮರವು ಬಿದ್ದೊಡನೆ ಅದನ್ನಾಶ್ರಯಿಸಿದ ಪ್ರಾಣಿಗಳು ಚದರಿ ಬೇರೆ ಬೇರೆ ಕಡೆಗೆ ಹೋಗುವಂತೆ ಹರಿಯೂ ಪಾರ್ವತಿಯೂ ಹರನ ಅರ್ಧಾರ್ಧ ಭಾಗಗಳನ್ನು ಅಪಹರಿಸಿದುದರಿಂದ ಹರನೇ ಇಲ್ಲದಂತಾಗಲು ಅವನನ್ನಾಶ್ರಯಿಸಿದ್ದ ಚಂದ್ರ ಮೊದಲಾದವರು ಬೇರೆ ಬೇರೆ ಕಡೆಗೆ ಹೋಗಲು ಅಧಿಕಾರವೂ ಜ್ಞಾನವೂ ನಿನ್ನನ್ನೂ, ಭಿಕ್ಷಾವೃತ್ತಿಯು ನನ್ನನ್ನೂ ಸೇರಿದವು. ಎಂದು ವರ್ಣಿಸುತ್ತಾ ಚತುರ ಕವಿಯು ರಾಜನೊಡನೆ ದೇವ! ನಿನ್ನ ಅಧಿಕಾರದಲ್ಲಿ ನನ್ನಂತಹ ವಿದ್ವಾಂಸನಿಗೂ ಭಿಕ್ಷಾವೃತ್ತಿಯೇ ಲಭಿಸಿತು ಎಂಬ ಅಭಿಪ್ರಾಯವನ್ನು ಗರ್ಭೀಕರಿಸುವನು. ಇಲ್ಲಿ ಹರಿಹರ, ಅರ್ಧನಾರೀಶ್ವರ ಈ ಎರಡು ರೂಪಗಳಲ್ಲಿ ಹರನ ಎರಡು ಭಾಗಗಳೂ ಸೇರಿಹೋಗಿ

ಹರಸಿಲ್ಲದಂತಾದುದೆಂಬ ಭಾವವನ್ನು ತಿಳಿಯತಕ್ಕದು. ಅಗಜೆ=ಪಾರ್ವತಿ. ಹರಿಸು=ಅಪಹರಿಸು. ಕಡಲ್=ಸಮುದ್ರ. ಬಾನ್=ಆಕಾಶ. ಅರಿಕೆಗೈಯ್=ಬೆಸಗೊಳ್ಳು.

ಅ:-ಇಲ್ಲಿ ನೀನು 'ಅಧಿಕಾರಿ, ಜ್ಞಾನಿ' ಎಂಬ ಚತುರ ಕವಿಯು ಸವ್ಯಾಜನಾದ ರಾಜನ ಸ್ತೋತ್ರದಿಂದ, ನನ್ನ ಪಾಂಡಿತ್ಯವನ್ನು ನೀನು ಅರಿತಿದ್ದರೂ ನನಗೇನೂ ಕೊಡಲಾರೆ ಎಂಬ ನಿಂದೆಯು ಸೂಚಿಸಲ್ಪಡುವ ಕಾರಣ ವ್ಯಾಜಸ್ತುತಿಯೆಂಬ ಅಲಂಕಾರವು.

---

೪೩. ಲಲಿತಕವಿಯು.

ಬಲುರಂಧ್ರಗೊಂಡಮೇಣ್ ಕಾಂತವಾಗಿಹ ಮತ್ತೆ
ಯಲುಕದಿಹ ಋಷಿಜನಕವಾದ, ಶೋಭಿಪ, ದಿವ್ಯ
ಕಲೆಗೂಡಿ, ಚಕ್ರಿಯಿಂ ಸೇವ್ಯಮಾಗಿರ್ಪ ವಾದ್ಯಮದಾವುದೈ
ವಸುಧೆಯೊಳ್ ॥
ಸಲೆ ಕೇಳ್ದು ಮಾತನಂದೊರ್ವ ನಸುನಗೆಗೊಂಡ
ಲಲಿತಕವಿಯುಸಿರಿದಂ ವಾದ್ಯಮಲ್ಲದು ನೋಡೆ
ಯೊಲಿದು ವಲ್ಮೀಕಮೆಂದುದ ಕೇಳ್ದು ತಾಂ ರಾಯ ಕಬ್ಬಿಗಂ
ಗಿತ್ತ ಮೆಚ್ಚಂ ॥

ಭಾ:-ರಂಧ್ರ=ತೂತು, ಬಿಲ. ಕಾಂತ=ಸೊಗಸಾದ. ಕಕಾರವೇ ಕೊನೆಯಾಗುಳ್ಳ. ಅಲುಕು=ಹಂದಾಡು. ಋಷಿಜನಕ=ಋಷಿಯ ಉತ್ಪತ್ತಿಗೆ ಕಾರಣವಾದ. ವಾಲ್ಮೀಕಿಯು ಹುತ್ತದಿಂದ ಹುಟ್ಟಿದವನೆಂದು ಭಾವವು. ದಿವ್ಯಕಲೆ=ಅಲೌಕಿಕವಾದ ಸಂಗೀತ ವಿದ್ಯೆ ಮತ್ತು ಹಾವಿನ ತಲೆಯ ಮಾಣಿಕ್ಯರತ್ನದ ಕಾಂತಿ. ಚಕ್ರಿ=ಕೃಷ್ಣ ಮತ್ತು ಹಾವು. ವಾದ್ಯ=ವಾದ್ಯ ಮತ್ತು ವಕಾರವೆ ಆದಿಯಲ್ಲಿ ಉಳ್ಳದ್ದು. ವಲ್ಮೀಕ=ಹುತ್ತು. ಕಬ್ಬಿಗ=ಕವಿ. ರಾಯ=ಅರಸ. ಮೆಚ್ಚು=ಇಷ್ಟಾರ್ಥ. ಇಲ್ಲಿ ರಾಜನು ಕವಿಯೊಡನೆ ಪದ್ಯದ ಪೂರ್ವಾರ್ಧದಿಂದ ಅನೇಕ ತೂತುಗಳಿಂದ ಕೂಡಿ ಸೊಗಸಾದ ಮತ್ತು ಹಂದಾ

ಡದ, ಬಿಸ್ವ ಕಲೆಕೂಡಿ ಚಕ್ರಿಯಿಂದ ಸೇವ್ಯವಾದ, ವಾದ್ಯವಾವುದು ಎಂದು ಬಹುಮುಷ್ಟಿಗೆ ವಾದ್ಯಕ್ಕೂ ಅನ್ವಯಿಸಿಬರುವ ವಿಶೇಷಣಗಳಿಂದ ಕವಿಯನ್ನು ಎತ್ತಿಹಾಕುವುದಕ್ಕೆ ಪ್ರಶ್ನೆ ಮಾಡಲು ಒಡನೆ ಆ ಮರ್ಮವನ್ನು ತಿಳಿದ ಕವಿಯು ನಗುತ್ತ ರಾಜನೆ ನಿನ್ನ ಪ್ರಶ್ನೆಯಲ್ಲಿ ವಾದ್ಯವೆಂದರೆ ಊದುವ ವಾದ್ಯವೆಂದರ್ಥವಲ್ಲ. ವಕಾರವೇ ಮೊದಲಲ್ಲಿ ಉಳ್ಳದೆಂದರ್ಥವು. ಕಾಂತವೆಂದರೆ ಕಕಾರವೇ ಕೊನೆಯಲ್ಲಿ ಉಳ್ಳದು ಎಂಬ ಅರ್ಥವು. ಹಾಗೂ ವಾದಿಯಾಗಿ ಕಾಂತವಾದುದು ವಲ್ಮೀಕ ವುತ್ತು ಎಂದುತ್ತರ ಕೊಡಲು ತನ್ನ ಇಂಗಿತವನ್ನರಿದ ಕವಿಗೆ ಮೆಚ್ಚಿ ರಾಜನು ಅವನಿಗೆ ಬಹುಮಾನ ಕೊಟ್ಟನೆಂದು ಭಾವವು.

ಅ:—ಇಲ್ಲಿ ಕಾಂತನಾಗಿಹ, ಬಿಸ್ವಕಲೆಗೂಡಿ ಶೋಭಿಪ, ಚಕ್ರಿಯಿಂ ಸೇವ್ಯನಾದ ವಾದ್ಯವಾವುದು? ಎಂಬ ಪ್ರಶ್ನೆಯು ಒಡನೇ ತೋರುವ ಅರ್ಥದಿಂದ ಗುಪ್ತವಾದ, ವಿವಕ್ಷಿತವಾದ ಅರ್ಥಾಂತರವನ್ನು 'ಅದು ವಲ್ಮೀಕ'ವೆಂದು ಕವಿ ನಿಬದ್ಧ ವಕ್ತೃವಿನಿಂದ ತೋರ್ಪಡಿಸಿದುದು ಶಬ್ದಶಕ್ತಿಮೂಲಕವಾದ ವಿವೃತೋಕ್ತ್ಯಲಂಕಾರವು.

---

೪೪. ಬಡ ಜಾಣಕವಿಯು.

ಅರಸ ಜಗದೊಳಗೆ ನಾನುಂ ನೀನುಮಿರ್ವರೇ
ಇರುವೆವೈ ಲೋಕನಾಥರ್ಮಿಕ್ಕವರು ನಮ್ಮ
ಸರಿ ಬಾರರೈಯವರು ಯೆನೆಯೊರ್ವ ಭಿಕ್ಷುಕಂ ರಾಜ
ನಾಗಲಿ ಮನದೊಳು ॥

ಬೆರಗಾಗಿ ನಿಲೆ, ಮತ್ತೆಯುಸಿರಿದಂ ಚತುರನಹ
ತಿರುಕನೆನ್ನೊಳು ರಾಯ ಬಹುವ್ರೀಹಿಯರ್ಥವದು
ನೆರೆವುದೈ ತತ್ಪುರುಷವರ್ಥ ನಿನ್ನಲ್ಲೆಂದು ಚತುರತೆಯು
ಸಭೆಗೆ ತೋರ್ದರಂ ॥

ಭಾ:—ಲೋಕನಾಥ=ಅರಸ. ತಿರುಕ=ಭಿಕ್ಷುಕ. ಇಲ್ಲಿ ಸಾಮಾನ್ಯ ಭಿಕ್ಷುಕನೊಬ್ಬನು ಅರಸನೇ "ನಾವಿಬ್ಬರೇ ಲೋಕನಾಥರು. ಉಳಿದ

ಅರಸರು ಲೋಕನಾಥರಾದರೂ ನಮಗೆ ಸರಿಗಟ್ಟುವವರಲ್ಲ"ವೆಂದು ಹೇಳಿದಾಗ ಅರಸನು "ಒಬ್ಬ ಭಿಕ್ಷುಕನು ತಾನು ಲೋಕನಾಥನೆಂದು ಹೇಳಿಕೊಳ್ಳುವುದು ಆಶ್ಚರ್ಯ"ವೆಂದು ಜರಿಗಾಗಲು ತಿರುಕನು ರಾಜನೆ ನಾನು ಲೋಕನಾಥನೆಂದರೆ ಲೋಕವೇ ನಾಥವಾಗಿವುಳ್ಳವನು ಅಂದರೆ ಗತಿ ಇಲ್ಲದವನೆಂದು ಬಹುವ್ರೀಹಿ ಸಮಾಸದಿಂದಲೂ ನೀನು ಲೋಕನಾಥನೆಂದರೆ ಲೋಕಕ್ಕೆಲ್ಲಾ ನಾಥನೆಂದು ತತ್ಪುರುಷ ಸಮಾಸದಿಂದಲೂ ಅರ್ಥಯೋಜನೆಯನ್ನು ಮಾಡಿ ಹಾಗೆ ಹೇಳಿದನೆಂದು ತಿಳಿಯತಕ್ಕದ್ದು.

ಅ:–ಲೋಕವೇ ನಾಥವಾಗಿವುಳ್ಳವನು ಲೋಕಕ್ಕೆ ನಾಥನು ಎಂದೆರಡರ್ಥವಿರುವುದರಿಂದ ಶ್ಲೇಷಾಲಂಕಾರವು.

---

೪೫. ವ್ಯಂಗ್ಯೋಕ್ತಿ.

ಕವಳಿಯೊಳ್ನಾಳದೊಡನಾಯಿತ್ತೈ ತಾವರೆಯು
ಮದರೊಳೊರಗಿದ ಚಂದಿರನು ತೋರ್ಪುದೈಯವನೊ
ಳದು ಕೋಕನದ, ವದರಿನಾದಳ್ತೈ ಜಮುನೆ ತಾಂ ಬಿದ್ದು
ಮಂಜಿನ ಬೆಟ್ಟವಂ ॥
ಚದರದಾವರಿಸಿದಳು ಬಾಂದಳವ ಹೊಂಬಳ್ಳಿ
ಯದ ಮುಸುಕಿತ್ತೈ ಬಿಳುಪುಮೋನನರ್ಥೋತ್ಪಾತ
ಮಿದನೆನ್ನಯ ಪಯಣ ಕೆಟ್ಟುದೈ ದುಶ್ಶಕುನಕಾರು
ಬೆದರಜಗದೊಳು ॥

ಭಾ:–ಈ ಪದ್ಯದಲ್ಲಿ ದೇಶಾಂತರ ಪ್ರಯಾಣಕ್ಕೆ ಸಿದ್ಧನಾಗಿದ್ದು ಮತ್ತೆ ಪ್ರಯಾಣವನ್ನು ಬೆಳೆಸದೆ ಇದ್ದ ಒಬ್ಬ ಗೃಹಸ್ಥನನ್ನು ಕುರಿತು ಅವನ ಗೆಳೆಯನೊಬ್ಬನು "ಅದೇಕೆ ಹಾಗೆ ಮಾಡಿದೆ?" ಎಂದು ಕೇಳಿದಾಗ ಅವನು ತಾನು ಹೊರಡುವ ವೇಳೆ ಮನೆಯಲ್ಲಿ ಒಂದು ಬಾಳೆಯ ದಿಂಡಿನ ಮೇಲೆ ನಾಳದಿಂದ ಕೂಡಿದ ಒಂದು ತಾವರೆಯು ಹುಟ್ಟಿ, ಆ

ತಾವರೆಯ ಮೇಲೆ ಚಂದ್ರನು ಮಲಗಿದ್ದು, ಆ ಚಂದ್ರನಲ್ಲಿ ಎರಡು ಕನ್ನೈದಿಲೆ ಹೂಗಳಿದ್ದು, ಆ ಹೂಗಳಿಂದ ಯಮುನಾನದಿಯು ಉದ್ಭವಿಸಿ, ಅವಳು ಹಿಮಾಲಯವನ್ನು ಹಾದು ಗಗನಾಂಗಣಕ್ಕೆ ಹಾರುವುದೂ ಹಳದಿಬಣ್ಣದ ಹೊಂಬಕ್ಕಿಯು ಒಮ್ಮೆಲೆ ಬಿಳುಪೇರುವುದೂ ಮೊದಲಾದ ದುರ್ನಿಮಿತ್ತಗಳ ತಡೆಯಿಂದ ಪ್ರಯಾಣವು ನಿತ್ತುಹೋಯಿತು ಎಂದು ಹೇಳುವನು. ಕೋಕನದ=ರಕ್ತೋತ್ಪಲ. ಜಮುನೆ=ಯಮುನೆ. ಬಾಂದಳ=ಆಕಾಶ. ಹೊಂಬಕ್ಕಿ=(ಹೊನ್ನಿನ ಹಕ್ಕಿ), ಚಿನ್ನದ ಜೀಳು. ಗೃಹಸ್ಥನು ಪ್ರಯಾಣಕ್ಕೆ ಸಿದ್ಧನಾಗಲು ಅವನ ಹೆಂಡತಿಯು ಗಂಡನ ಅಗಲಿಕೆಯ ವ್ಯಸನದಿಂದ ತೊಡೆಯ ಮೇಲೆ ತೋಳೂರಿ ಕೈಯ್ಯ ತಟ್ಟಿನಲ್ಲಿ ಮುಖವನ್ನಿಟ್ಟು ಚಿಂತಿಸುತ್ತಿರುವಳೆಂದೂ ಅವಳ ಕಣ್ಣಿನಿಂದ ಧಾರೆಕಟ್ಟಿ ಸುರಿಯುವ ಅಶ್ರುಪ್ರವಾಹವು ಅವಳ ಕುಚದ ಮೇಲಿಂದ ಆಕಾಶದಂತೆ ಶೂನ್ಯಪ್ರಾಯವಾದ ಮಧ್ಯಭಾಗವನ್ನು ಸೇರುವುದೆಂದೂ ಹೊಂಬಕ್ಕಿಯಂತಹ ಅವಳ ದೇಹವು ವ್ಯಸನದಿಂದ ಬಿಳುಪೇರುವುದೆಂದೂ ಅತಿಶಯೋಕ್ತಿ ವಿಧದಿಂದ ಚಮತ್ಕಾರವಾಗಿ ಹೇಳುವನು ಎಂದು ಭಾವವು.

ಅ:—ವರ್ಣಿಸಲ್ಪಡಬೇಕಾದದ್ದನ್ನು ಹೇಳದೆ ಅದರಂತಹ ಇನ್ನೊಂದು ವಸ್ತುವನ್ನೇ ಹೇಳಿ ಅದರಿಂದಲೇ ವರ್ಣಿಸಲ್ಪಡುವುದನ್ನು ತಿಳಿಯುವಂತೆ ಮಾಡುವುದು ರೂಪಕಾತಿಶಯೋಕ್ತಿಯು. ಇಲ್ಲಿ ಬಾಳೆಗಿಡ ಮೊದಲಾದ ವರ್ಣನೆಯಿಂದ ತೊಡೆ ಮೊದಲಾದವುಗಳನ್ನು ತಿಳಿಸಿರುವುದರಿಂದ ರೂಪಕಾತಿಶಯೋಕ್ತ್ಯಾಲಂಕಾರವು.

---

೪೬. ತಂಬೂರಿ.

ಚಾರುಭಾಷಿಣೆ, ಸರಳೆ, ಶ್ಯಾಮೆ, ಸನ್ಮುಖಿ ತೊಡೆಯ
ನೇರಿರಲ್ತುಕ್ಕೆ, ಮೃದುನುಡಿಯ ಮುಟ್ಟಿಲ್ ರಾಗ(ಸುಖವ)
ನೇರಿಸಾ ಗುಣವುಳ್ಳ, ಬಡನಡುವಿನಾ, ಸುವಂಶೋತ್ಪನ್ನೆ,
ಲಲಿತಗೀತೆ ॥

ಚೇರಿ ದೇಶದ ಬಂದು ಎನ್ನ ಪಾಣಿಗ್ರಹದೆ
ಸೇರಿ, ನಖಮುಖದಿಂದ ಲಾಲಿತೆ, ಮನೋಹರೆಯು
ಪಾರಿಪೋದಳೆ? ಅಹಹ!! ಎನೆ ಭಿಕ್ಷುಕಂ, (ಕಾಂತೆಯೇನ್? ಅಲ್ತು
"ವೀಣೆ" ಎಂದಂ) ಕಾಂತೆಯೇಂ? ಕೇಳೆ "ವೀಣೆ" ಯೆಂದಂ ॥

ಭಾ:-ಈ ಪದ್ಯದಲ್ಲಿರುವ ವಿಶೇಷಣಗಳನ್ನು ಓರ್ವ ಹೆಂಗುಸಿನಲ್ಲಿಯೂ ತಂಬೂರಿಯಲ್ಲಿಯೂ ಅನ್ವಯಿಸಿ ಅರ್ಥಮಾಡಬೇಕು. ಚಾರುಭಾಷಿಣಿ=ಸವಿಯಾದ ನುಡಿಯುಳ್ಳವಳು. ಮುಟ್ಟಿಲ್ ರಾಗವೇರಿಪ=ಮುಟ್ಟಿದರೆ ಅನುರಾಗವನ್ನು ಉಂಟುಮಾಡುವ. ಇದು ಸ್ತ್ರೀಯರ ಸ್ವಭಾವ. ಮತ್ತು ಮುಟ್ಟಿ ಬಾಜಿಸಿದರೆ ರಾಗವೇರಿಸುವುದು ತಂಬೂರಿಯ ಸ್ವಭಾವವು. ಬಡನಡುವಿನ=ಕೃಶವಾದ ಮಧ್ಯವುಳ್ಳ. ಹೆಂಗುಸರ ನಡುವನ್ನು ತೀರ ಸಪುರವೆಂದು ವರ್ಣಿಸುವುದು ಕವಿಸಮಯ, ತಂಬೂರಿಯ ನಡುವೂ ಸಪುರ. ಸುವಂಶೋತ್ಪನ್ನೆ=ಒಳ್ಳೆ ವಂಶದಲ್ಲಿ ಹುಟ್ಟಿದವಳು. ಭಿಕ್ಷುಕರ ತಂಬೂರಿಯ ದಂಡವೂ ಬಿದಿರಿನಿಂದ ಮಾಡಲ್ಪಡುವುದು. ಪಾಣಿಗ್ರಹಣ=ಮದುವೆ ಮತ್ತು ಕೈಯ್ಯ ಹಿಡಿತ. ನಖಮುಖ=ಉಗುರಿನ ತುದಿ. ನಖಮುಖದಿಂದ ಸ್ತ್ರೀಯರನ್ನು ಲಾಲನೆ ಮಾಡುವಂತೆ ವರ್ಣಿಸುವುದು ಕವಿಸಮಯ, ತಂಬೂರಿಯ ಸರಿಗೆಯನ್ನು ಮಿಡಿಯುವುದೂ ನಖಮುಖದಿಂದ. ಇಲ್ಲಿ ಭಿಕ್ಷುಕನು ತಂಬೂರಿಯ ಗುಣಕಥನವನ್ನು ಮಾಡುವಾಗ ಆ ಗುಣಗಳು ಓರ್ವ ಹೆಂಗುಸಿಗೂ ಸಮವಾಗಿರಲು ಅದನ್ನು ಕೇಳಿದ ನೆರೆಯವನು "ಅದೇನು ನಿನ್ನ ಕಾಂತೆಯೇ?" ಎಂದಾಗ ಭಿಕ್ಷುಕನು "ಅಲ್ಲ, ಅದು ನನ್ನ ವೀಣೆ" ಯೆಂದನು ಎಂದರ್ಥವು.

ಅ:-ಇಲ್ಲಿ ಕಾಂತೆಯುಲ್ಲೂ ಸರಿಬರುವ ವಿಶೇಷಣಗಳ ಬಲದಿಂದ 'ಹಾರಿಹೋದವಳು ಕಾಂತೆ ಯೇನು!' ಎಂಬ ಇನ್ನೊಬ್ಬನ ಭ್ರಾಂತಿಯನ್ನು 'ಕಾಂತೆಯುಲ್ಲ, ವೀಣೆ' ಎಂದು ಕಾಂತಾತ್ವ ನಿಷೇಧ, ವೀಣಾತ್ವಾರೋಪಗಳಿಂದ ಕಳೆಯುವುದು ಭ್ರಾಂತಾಪಹ್ನುತ್ಯಲಂಕಾರವು.

೪೭. ರಾಜಾಧಿರಾಜನು.

ಮಾಶೇಷನಾ ಗದೆಯು, ಭೋಗವಂತಂ, ದೇವ
ಸಾ ಗದೆಯು, ಭಗವಂತ, ದಕ್ಷನಾ ಗದೆಯು, ಪ್ರ
ಜಾಪತಿಯು, ನಿರುತಿಯುದಾಗದೆಯು, ಪುಣ್ಯಜನ
ರೊಡೆಯು ತಾಂ ಯಮನಲ್ಲದೇ ॥
ಇದ್ದರೆಯು ಸಮದೃಷ್ಟಿ, ಜಿನನಲ್ಲದೆಯು ಇವನು
ಲೋಕಜಿತ್ತಾಗಿಹನು. ಎನುತೆ ರಾಜಾಧಿರಾ
ಜನ ನುತಿಸಿರಲ್ಲಿರ್ಪ ಶತ್ರು ಸ್ನೇಹಿತರೆಲ್ಲ ಕೇಳಲಾ
ಶ್ಚರ್ಯವಿತ್ತೆ? ।

ಭಾ:-ಭೋಗ=ಸುಖಾನುಭವ ಮತ್ತು ಹಾವಿನ ಶರೀರ. ಭಗ=ಐಶ್ವರ್ಯ ಮತ್ತು ಐಶ್ವರ್ಯ, ವೀರ್ಯ, ಯಶಸ್ಸು, ಶ್ರೀ, ಜ್ಞಾನ, ವಿಜ್ಞಾನ ಎಂಬ ಈ ಆರು ಗುಣಗಳಿಗೂ ಭಗವೆಂದು ಹೆಸರು. ಪುಣ್ಯಜನ=ರಾಕ್ಷಸ ಮತ್ತು ಸಜ್ಜನರು. ಸಮದೃಷ್ಟಿ=ಎಲ್ಲ ಕಡೆಗಳಲ್ಲಿ ಸಮನಾದ ದೃಷ್ಟಿಯುಳ್ಳವ ಮತ್ತು ಯಮನ ಇನ್ನೊಂದು ಹೆಸರು. ಲೋಕಜಿತ್=ಲೋಕವನ್ನು ಗೆದ್ದವನು ಮತ್ತು ಜಿನನ ಇನ್ನೊಂದು ಹೆಸರು. ದಕ್ಷ=ದಕ್ಷಬ್ರಹ್ಮನು. ಪ್ರಜಾಪತಿ=ಪ್ರಜೆಗಳ ಪತಿ. ಈ ಪದ್ಯದಲ್ಲಿ ಸರ್ಪಶರೀರಕ್ಕೆ ಭೋಗವೆಂಬ ಹೆಸರು ಇದ್ದುದರಿಂದ ಮಹಾಶೇಷನು ಭೋಗವಂತನು. ಅಂದರೆ ಭೋಗವುಳ್ಳವನಾಗುವುದು ಸಹಜವು. ಆದರೆ ವರ್ಣನೀಯ ರಾಜನು ಮಹಾಶೇಷನಲ್ಲದೆಯೂ ಭೋಗವಂತನಾದುದು ಆಶ್ಚರ್ಯ. ಶಬ್ದಶಕ್ತಿಯಿಂದ ರಾಜನು ಸುಖೋಪಭೋಗವುಳ್ಳವನು ಎಂಬ ಅರ್ಥವನ್ನು ತಿಳಿಯಬೇಕು. ಮಹಾಶೇಷನು ಅಲ್ಲ. ಆ ಗದೆಯು ಭೋಗವಂತ ಎಂದು ಅನ್ವಯವನ್ನು ಕೂಡಿಸಿಕೊಳ್ಳಬೇಕು. ಮುಂದೆಯೂ ಹಾಗೆಯೇ.

ಅ:-ಸಾಮಾನ್ಯವಾಗಿ ಅರ್ಥಮಾಡುವಾಗ ವಿರೋಧವಿದ್ದಂತೆ ತೋರಿ, ವಸ್ತುತಃ ವಿಚಾರ ಮಾಡಿದಾಗ ವಿರೋಧವಿಲ್ಲದಿರುವುದೇ ವಿರೋಧಾಭಾಸವು.

೪೮. ರಾಜರಾಜನು.

ರಾಜರಾಜನೆ! ಪೂರ್ಣಕಾಮನೇ! ಸರ್ವದಾ
ಮೂಜಗದಿ ಕರ್ಣವೃತ್ತಿಯನಾಂತು ಶೋರ್ಪನೇ!
ಸಾಜದಿಂ ಪುಣ್ಯಲೋಕದಲಿ ವಿಖ್ಯಾತನೇ! ಕಟುವಚನ
ವಾಡದವನೇ! ॥

ಓಜದಿಂ ತರತರದ ಪಾಕಫಲ ಸೇವಿಯೋ!
ತೇಜವಡಗಿದ ನಿನ್ನ ಹಗೆಯು ನಿನ್ನಂತಿಹನು
ರಾಜ! ಕಂಪಂ ಕಾಣ್ಬೆ ನಾ ನಿನ್ನ ಹಗೆಯಲ್ಲಿ ಯೆಂದು
ನುಡಿದವನು ಚತುರಂ ॥

ಭಾ:-ಇಲ್ಲಿ ಚತುರನಾದ ಒಬ್ಬ ಕವಿಯು ರಾಜನನ್ನು ವರ್ಣಿಸು ವಾಗ ಅರಸನೇ ನಿನ್ನ ವೈರಿಯೂ ನಿನ್ನಂತೆಯೇ ಇರುವನು ಎಂದು ವರ್ಣಿಸುತ್ತಾ ಪ್ರಸ್ತುತ ರಾಜನಿಗೆ ಕೆಲವು ವಿಶೇಷಣಗಳನ್ನು ಹೇಳಿ ನಿನ್ನ ವೈರಿಯ ವಿಷಯದಲ್ಲಿ ನಿನಗೆ ಹೇಳಿದ ವಿಶೇಷಣಗಳ ಕಕಾರ ವನ್ನು "ಪ" ಎಂದು ಉಚ್ಚರಿಸಬೇಕೆಂದು "ಕಂಪಂ ಕಾಣ್ಬೆ ನಾ" ಎಂಬ ಮಾತಿನಿಂದ ಹೇಳುತ್ತಾನೆ. ಪೂರ್ಣಕಾಮ=ಸಕಲೇಷ್ಟಾರ್ಥಸಿದ್ಧಿಯು ಳ್ಳವ, ವೈರಿಯ ಪಕ್ಷದಲ್ಲಿ ಪೂರ್ಣಪಾಮ=ಮೈತುಂಬ ಕಜ್ಜಿಗಳುಳ್ಳವ. ಕರ್ಣವೃತ್ತಿ=ಕರ್ಣನ ವ್ಯಾಪಾರ ದಾನಮಾಡುವುದು. ವೈರಿಯ ಪಕ್ಷ ದಲ್ಲಿ ಪರ್ಣವೃತ್ತಿ=ಎಲೆಗಳಿಂದ ಹೊಟ್ಟೆ ತುಂಬಿಸಿಕೊಳ್ಳುವುದು. ಮುಂದೆಯೂ ಹೀಗೆಯೇ ಪುಣ್ಯಲೋಕ, ಕಟುವಚನ, ಪಾಕಫಲ ಎಂಬಲ್ಲಿಯೂ ಕಕಾರಕ್ಕೆ ಬದಲಾಗಿ ಪಕಾರವನ್ನು ಸೇರಿಸಿಕೊಂಡು ಶತ್ರುಪಕ್ಷದಲ್ಲಿ ಅರ್ಥವನ್ನು ತಿಳಿದುಕೊಳ್ಳಬೇಕು. ಪುಣ್ಯಲೋಕ= ಉತ್ತಮ ಜನರು. ಪುಣ್ಯಲೋಪ=ಸುಕೃತನಾಶ. ಕಟುವಚನ= ಕೆಟ್ಟಮಾತು. ಪಟುವಚನ=ಚಮತ್ಕಾರದ ಮಾತು. ಪಾಕಫಲ= ಒಳ್ಳೆಯ ಅಡಿಗೆ. ಪಾಪಫಲ=ದುಷ್ಕೃತದ ಫಲ.

ಅ:-'ಕ' ಯೆಂಬುದನ್ನು ಬದಲಾಯಿಸಿ 'ಪ' ಯೆಂದು ಶಬ್ದಕ್ಕೆ ವಿಕಾರವನ್ನು ತಂದು ಬೇರೆ ಅರ್ಥವನ್ನು ಮಾಡಿದ್ದರಿಂದ ವಿಕೃತ ಶಬ್ದಶ್ಲೇಷವು. ಅರ್ಥಾಂತರದಿಂದ ಉತ್ತರ ಬಂದುದರಿಂದ ವಕ್ರೋಕ್ತಿಯು. ಈ ಶ್ಲೇಷಕ್ಕೂ ವಕ್ರೋಕ್ತಿಗೂ ಅಂಗಾಂಗಿ ಭಾವ ಸಂಕರ.

---

೪೯. ಮಹಾರಾಜನು.

ರಾಜರಾಜಂ ಧನದನಾಗೆ ದಿಕ್ಪತಿಯಲ್ಲ
ವಾಹಿನೀಪತಿಯಾಗೆ ಕಡಲಲ್ಲ ದಾನಿಯಾ
ದರು ಮಾನೆಯಲ್ಲ, ದುರ್ಗಾಧೀಶನಾದೊಡಂ ಶಿವನಲ್ಲ
ಧರ್ಮರಾಜಂ ॥
ಆದೊಡಂ ಕೌಂತೇಯನಲ್ಲ ಸರ್ವಜ್ಞನಾ
ದರು ಗೌತಮನುಮಲ್ಲ, ತಾಂ ಶತಾನಂದನಾ
ದರು ಬೊಮ್ಮನಲ್ಲವೈ ಈ ಮಹಾರಾಜನೆಂದಾ ನಾಡಿ
ಗರ್ನುತಿಪರ್ವೈ ॥

ಭಾ:-ಧನದ=ಧನವನ್ನು ದಾನಮಾಡುವವ ಮತ್ತು ಕುಬೇರ. ವಾಹಿನೀ=ಸೇನೆ, ನದಿ. ದಾನಿ=ದಾನಮಾಡುವ ಸ್ವಭಾವದವ, ಮದ ಜಲವುಳ್ಳದ್ದು. ದುರ್ಗ=ಕೋಟೆಯು ಸುತ್ತನಿರುವ ಜಲಾದಿ ದುರ್ಗಗಳು ಮತ್ತು ಪಾರ್ವತಿ. ಕೌಂತೇಯ=ಕುಂತಿಯ ಮಗ. ಸರ್ವಜ್ಞ=ಎಲ್ಲವನ್ನೂ ತಿಳಿದವ, ಗೌತಮ ಬುದ್ಧನ ಹೆಸರು. ಶತಾನಂದ=ಹೆಚ್ಚು ಆನಂದವುಳ್ಳವ ಮತ್ತು ಬ್ರಹ್ಮನು.

ವಿರೋಧಾಭಾಸಾಲಂಕಾರವು.

---

೫೦. ಚಕ್ರವರ್ತಿಯು.

ಅಡಿಯನೊಂದೆರಡ ನೀನಿಡಲು ರಣದಲಿ ರಾಜ!
ತಡೆಯದಿಡುವಂ ಸಾಸಿರಾರು ಪಜ್ಜೆಯ ಪಗೆಯು

ಬಿಡಲು ನಾಲ್ಕಾರು ಬಾಣಗಳನ್ನು ನೀನಾಗಲಸ್ತ್ರಶಸ್ತ್ರ
ಗಳನೆಲ್ಲಾ ॥
ಬಿಡುವನೈ ನಿನ್ನ ಕೈಯಿಂದ ಮಡಿದವನವಂ
ಬಿಡದೆ ರಂಭಾದಿಗಳ ಪತಿಯಪ್ಪನೈ ನಾಡ
ಮಡದಿಯರ ಪತಿಯಾದರುಂ ನಿನಗೆ ಕೀರ್ತಿಯಪ
ಕೀರ್ತಿಯವನಿಗೆ ಪೇಳದೇಂ ॥

ಭಾ:—ಅಡಿ=ಹೆಜ್ಜೆ. ಪಗೆ=ಶತ್ರು. ಮಡಿ=ಸಾಯು. ರಂಭಾದಿಗಳು=ರಂಭೆಯೇ ಮೊದಲಾದ ಸ್ವರ್ಗದ ಸ್ತ್ರೀಯರು. ನಾಡಮಡದಿಯರು=ಊರ ಹೆಂಗುಸರು. ಕೀರ್ತಿಯನ್ನು ಗಳಿಸಲಿಕ್ಕೆ ಬೇಕಾದ ಸಾಧನಗಳು ಶತ್ರುವಿನಲ್ಲಿದ್ದು, ಅಪಕೀರ್ತಿಯ ಸಾಧನಗಳು ನಿನ್ನಲ್ಲಿದ್ದರೂ ಕೀರ್ತಿಯು ನಿನಗೆ ಬರುವುದು ಆಶ್ಚರ್ಯವು. ಅಂದರೆ ಶತ್ರುವು ಸಾವಿರಾರು ಹೆಜ್ಜೆಗಳನ್ನಿಡುವುದೆಂದರೆ ಯುದ್ಧಭೂಮಿಯಿಂದ ಹೆದರಿ ಓಡುವುದೆಂದೂ ಶಸ್ತ್ರಾಸ್ತ್ರಗಳನ್ನು ಬಿಡುವುದೆಂದರೆ ಅವುಗಳನ್ನು ಬಿಸುಟು ಬಿಡುವುದೆಂದೂ ರಂಭಾದಿಗಳ ಪತಿಯಾಗುವುದೆಂದರೆ ನಿನ್ನ ಕೈಯಿಂದ ಸತ್ತು ಸ್ವರ್ಗಾರೋಹಣವನ್ನು ಮಾಡುವುದೆಂದೂ ಅರ್ಥವು. ಆದ್ದರಿಂದ ಶತ್ರುವಿಗೆ ಅಪಕೀರ್ತಿಯು ಸಹಜವಾದುದೆಂಬ ಭಾವವು.

ಅ:—ಶತ್ರುಗಳಿಂದ ನೀನು ಕಡಿವೆ ಯೆಂದು ನಿಂದೆಯು ವ್ಯಾಜದಿಂದ ಶತ್ರುಗಳನ್ನು ಕೊಂದವನೆಂಬ ಸ್ತೋತ್ರವು ತಿಳಿಯಲ್ಪಡುವುದರಿಂದ ವ್ಯಾಜಸ್ತುತಿಯಲಂಕಾರವು.

---

೫೧. ಭುಕ್ಕುಂಡ ಭೂಪತಿಗಳು.

ಭಟ್ಟಿಕಪಯಾಗಲೀ ಮಡಿದ ಭಾರವಿ ಕವಿಯು
ಬಟ್ಟಿಹನು ಪ್ರಾಣಗಳಮವನುಮುಂದೇ ರಾಜ
ಕಟ್ಟೆ ಕವನಗಳನ್ನು ಮೆರೆದ ಭಿಕ್ಷುವು ಮಡಿದ
ಭೀಮಸೇನನು ತೀರಿದಂ ॥

ಗುಟ್ಟಿನದನೇಂ ಪೇಳ್ವೆ ಭುಕ್ಕುಂಡ ಕವಿ ನಾನು
ನೆಟ್ಟನಾಲಿಸು ದೇವ! ಭೂಪತಿಯು ನೀನಲ್ತೆ?
ಕೆಟ್ಟಿವೈ ಯಮನು "ಭಭಾ" ಪಜ್ತಿಯುಂ ಪೊಕ್ಕನಿನ್ನ
ಲೇಸೆಮಗೆ ಧರ್ಮಂ ॥

ಭಾ:–ಕವನ=ಕವಿತೆ. (ಭಟ್ಟಿ, ಭಾರವಿ, ಭಿಕ್ಷು, ಭೀಮಸೇನ ಇವರೆಲ್ಲ ಕವಿಗಳು). ಭಿಕ್ಷು=ದಂಡಿಕವಿಯು. ಭೋಜಭೂಪತಿಯು ಭುಕ್ಕುಂಡನೆಂಬೊಬ್ಬ ಕಳ್ಳನಿಗೆ ಅವನ ಕಳ್ಳತನದ ತಪ್ಪಿಗಾಗಿ ಶೂಲ ಕ್ಕೇರಿಸುವ ದಂಡವನ್ನು ವಿಧಿಸುವಾಗ ಅವನು ತನ್ನ ಕವಿತಾಚಾತು ರ್ಯದಿಂದ ರಾಜನನ್ನು ಒಲಿಸಿ ಶಿಕ್ಷೆಯನ್ನು ತಪ್ಪಿಸಿಕೊಂಡನೆಂಬ ಕಥೆಯ ಸಾರಾಂಶವನ್ನು ಇಲ್ಲಿ ನೆನೆಸಿನಲ್ಲಿಡತಕ್ಕದು. ಭುಕ್ಕುಂಡನು ಹೇಳುವ ಗುಟ್ಟೇನೆಂದರೆ ಭ ಭಾ ಪಳಿಯಲ್ಲಿ ಕ್ರಮವಾಗಿ ಒಂದೊಂದೇ ಅಕ್ಷರವು ಮೊದಲಿನಕ್ಷರವಾಗುಳ್ಳ ನಾಲ್ವರು ಕವಿಗಳು ಹೋದರು. ಇದೀಗ ಭುಕಾರವೇ ಮೊದಲಕ್ಷರವಾದ ಭುಕ್ಕುಂಡನ ಸರ್ತಿಯು. ಮುಂದಿನ ಸರ್ತಿಯು ಭೂಪತಿಯಾದ ನಿನ್ನದಾಗಿದೆ. ಹಾಗೂ ನನ್ನನ್ನು ಶೂಲಕ್ಕೇರಿಸಿದ ನಿನ್ನನ್ನು ಯಮನು ಬಿಡಲಾರನು ಎಂಬ ಭಾವವು. ಅವಸಾನಕಾಲ ಸಮೀಪಿಸಿದಾಗಲಾದರೂ ಧರ್ಮಾಶ್ರಯಣವು ನಮ ಗಿರ್ವರಿಗೂ ಮೇಲೆಂಬದರಿಂದ ತನ್ನನ್ನು ಬಿಟ್ಟು ಬಿಡುವುದು ಯೋಗ್ಯ ವೆಂದು ವ್ಯಂಗ್ಯವು.

ಅ:–ಭ-ಭಾ-ಭಿ-ಭೀ-ಭು-ಭೂ ಎಂದು ಅಕ್ಷರಮಾಲೆಯ ಕ್ರಮವನ್ನನುಸರಿಸಿ ಕವಿಗಳನ್ನು ವರ್ಣಿಸಿದ್ದರಿಂದ ಯಥಾಸಂಖ್ಯಾಲಂಕಾರವು. ಕ್ರಮವಾಗಿದ್ದಂತೆ ವರ್ಣಿಸುವುದೇ ಯಥಾಸಂಖ್ಯವು. ಮತ್ತು ಪರ್ಯಾಯಾಲಂಕಾರವು ಕ್ರಮದಿಂದ ಒಂದು ವಸ್ತುವು ಅನೇಕ ವಸ್ತುವನ್ನಾಶ್ರಯಿಸುವುದೇ ಪರ್ಯಾಯವು. ಇಲ್ಲಿ ಯಮನು ಭಟ್ಟಿ ಮೊದಲಾದವರನ್ನು ಕ್ರಮವಾಗಿ ಕೊಲ್ಲಲು ಆಶ್ರಯಿಸಿರುವನು. ಈ ಎರಡಲಂಕಾರಗಳೂ ಒಂದೇ ವಾಕ್ಯದ ಶಬ್ದಗಳಲ್ಲಿ ಸೇರಿದ್ದರಿಂದ ಏಕವಾಚಕಾ ನುಪ್ರವೇಶ ಸಂಕರವು.

೫೨. ವಿದ್ವಾಂಸನಾದ ರಾಜನು.

ನಿನಗಿರದು ದೃಷ್ಟಾಂತ ಸಂದೇಹ ಲೇಶವುಂ
ನಿನಗಿಲ್ಲ ತಿಳುವಿನೊಳ್ವ್ಯಾಜೋಕ್ತಿಯನ್ನರಿಯೆ
ಅನುಮಾನವಂ ಶಾಸ್ತ್ರವಾಕ್ಯಾರ್ಥದಲಿ ಕಾಣೆ ಪೇಳಲೇಂ
ರಾಜರಾಜ! ॥

ಮನದಿಲ್ಲವಾಕ್ಷೇಪ ವ್ಯಾಘಾತಗಳು ದೇವ!
ನಿನಗೆ ಸಾಮಾನ್ಯವೈ ಪಿಂಗದೆ ವಿಶೇಷವುಂ
ಇನಿತಿಲ್ಲದಿರ್ದೊಡಂ ನೀನಲಂಕಾರತರ್ಕಜ್ಞನೆಂದೆಂತು
ಮೆರೆದೈ? ॥

ಭಾ:- ಇಲ್ಲಿ ವರ್ಣನೀಯ ರಾಜನು ಅಲಂಕಾರ ಮತ್ತು ತರ್ಕ ಶಾಸ್ತ್ರಗಳನ್ನು ತಿಳಿದವನೆ ಆಗಿರುತ್ತಾ ದೃಷ್ಟಾಂತ, ಸಂದೇಹ, ಲೇಶ, ವ್ಯಾಜೋಕ್ತಿ, ಆಕ್ಷೇಪ, ವ್ಯಾಘಾತ, ಸಾಮಾನ್ಯ, ವಿಶೇಷ ಮೊದಲಾದ ಅಲಂಕಾರಗಳನ್ನೂ ಶಾಸ್ತ್ರ ವಾಕ್ಯಾರ್ಥದಲ್ಲಿ ಅನುಮಾನವೆಂಬ ಪ್ರಮಾಣವನ್ನೂ ತಿಳಿಯದೆ ಇರುವುದು ಹೇಗೆ? ಎಂಬುದು ವಿರೋಧ. ಆದರೆ ಈ ರಾಜನಿಗೆ ದೃಷ್ಟಾಂತವಿಲ್ಲ ಅಂದರೆ ಎಣೆಯಿಲ್ಲ. ಜ್ಞಾನ ಭಾಗದಲ್ಲಿ ಸಂಶಯದ ಲೇಶವೂ ಇಲ್ಲ. ಇವನು ವ್ಯಾಜೋಕ್ತಿಯೆಂದರೆ ಕಪಟದ ಮಾತನ್ನೇ ಅರಿಯನು. ಶಾಸ್ತ್ರವಾಕ್ಯಾರ್ಥದಲ್ಲಿ ಇವನಿಗೆ ಅನುಮಾನವೆಂದರೆ ಸಂಶಯವೇ ಇಲ್ಲ, ಇವನ ಮನಸ್ಸಿನಲ್ಲಿ ಆಕ್ಷೇಪವೋ ವ್ಯಾಘಾತವೋ ಅಂದರೆ ಮನೋವ್ಯಥೆಯೋ ಇಲ್ಲ. ಇವನಿಗೆ ಯಾವ ವಿಷಯವೂ ಸಾಮಾನ್ಯವೇ ಅಲ್ಲದೆ ವಿಶೇಷವಾದುದಲ್ಲ ಎಂದು ವಿರೋಧ ಪರಿಹಾರವನ್ನು ಮಾಡಬೇಕು. ತಿಳಿವು=ಜ್ಞಾನ. ಪಿಂಗು=ಹಿಂದುಳಿ. ಇನಿತು=ಇಷ್ಟು. ಅಲಂಕಾರ ತರ್ಕಜ್ಞ=ಅಲಂಕಾರ, ತರ್ಕಶಾಸ್ತ್ರಗಳನ್ನು ತಿಳಿದವ.

ಅ:- ದೃಷ್ಟಾಂತ ಮೊದಲಾದ ಶಬ್ದಗಳಿಗೆರಡರ್ಥವಿರುವುದರಿಂದ ಶ್ಲೇಷಾಲಂಕಾರವು ದೃಷ್ಟಾಂತಾದಿಗಳಿಲ್ಲದಿದ್ದರೂ ಅಲಂಕಾರ ತರ್ಕಜ್ಞನೆಂದು ಮೆರೆದ

ಎಂಬುದು ವಿರೋಧಾಭಾಸಾಲಂಕಾರವು. ಈ ಎರಡಲಂಕಾರಗಳಿಗೆ ಅಂಗಾಂಗಿ ಭಾವ ಸಂಕರವು.

---

೫೩. ಸುಗುಣಿ ಭೋಜರಾಜನು.

ಪೇಳೆ ಮೂಕಂ ನಿನ್ನ ದುರ್ಗುಣಂಗಳ, ಕಿವುಡ
ನಾಲೈಸನಪಯಶವನಾ ಬಂಜೆಮಗ ತಾನು
ಕೇಳಿ ಮುದವಾಂತು ಬರೆಯುವನು ಕೈಕುಂಟ ನಿನ್ನದ
ನೋಡಿ ಕುರುಡ ನಲಿವಂ ॥
ಹೆಳವನಾಗಲ್ಬಯಲ್ತೊರೆಯೊಳಗೆ ತಾ ಮಿಂದು
ಮೇಲೇರಿ ಬಿಸಿಲ್ಗುದುರೆಯನು ತಿರುಗಿ ತಿರುಗಿ ವೈ
ಬಳಲಿ ನಿನ್ನವಗುಣಂಗಳ ಕಂಡು, ಬಂದ, ನಾಡಿದು
ರಾಜ ರಾಜ ಭೋಜಾ! ॥

ಭಾ:-ಮೂಕ=ಬಾಯಿಲ್ಲದವ. ಕಿವುಡ=ಕಿವಿಯಿಲ್ಲದವ. ಆಲೈಸು=ಕೇಳು. ಅಪಯಶ=ದುಷ್ಕೀರ್ತಿ. ಬಂಜೆ=ಮಕ್ಕಳಿಲ್ಲದವಳು. ಮುದ=ಸಂತೋಷ. ಕೈಕುಂಟ=ಕೈಯಿಲ್ಲದವ. ಹೆಳವ=ಕಾಲಿಲ್ಲದವ. ಬಯಲ್ತೊರೆ=ಮೃಗತೃಷ್ಣಿಕೆ. ಬಿಸಿಲ್ಗುದುರೆ=ಮರೀಚಿಕೆ. ಇಲ್ಲಿ ಮೂಕನು ಪೇಳುವುದೂ ಕಿವುಡನು ಕೇಳುವುದೂ ಬಂಜೆ ಮಗನು ಸಂತೋಷ ಪಡುವುದೂ ಕೈಕುಂಟನು ಬರೆಯುವುದೂ ಕುರುಡನು ನೋಡುವುದೂ ಹೆಳವನು ಬಯಲ್ತೊರೆಯಲ್ಲಿ ಮಿಂದು, ಬಿಸಿಲ್ಗುದುರೆಯೇರಿ, ತಿರುಗಿ, ನಾಡಿದು ಬಂದುದೂ ಇವೆಲ್ಲಾ ಅತ್ಯಂತ ಅಸಂಭಾವ್ಯ ವಿಷಯಗಳಾದುದರಿಂದ ಇವರ ಆಯಾ ಕ್ರಿಯೆಗಳಿಗೆ ಸಂಬಂಧಿಸಿದಂತೆ ವರ್ಣಿಸಿದ ಭೋಜರಾಜನ ದುರ್ಗುಣಗಳಾಗಲೀ ಅವನ ಅಪಯಶಸ್ಸಾಗಲೀ ಅತ್ಯಂತ ಅಸಂಭಾವ್ಯವೆಂದರ್ಥವು.

ಅ:-ಒಂದನ್ನು ಸುಳ್ಳೆಂದು ಸಾಧಿಸಲು ಸುಳ್ಳಾದ ಮತ್ತೊಂದು ವಸ್ತುವನ್ನು ಕಲ್ಪಿಸಿ ವರ್ಣಿಸುವುದು ಮಿಥ್ಯಾಧ್ಯವಸಿತಿಯಲಂಕಾರವು. ಇಲ್ಲಿ ನಿನ್ನಲ್ಲಿ ದುರ್ಗುಣ

ಮೊದಲಾದವು ಸುಳ್ಳು ಎಂದು ಸಾಧಿಸಲು ಮೂಕನು ಹೇಳುವನು, ಕಿವುಡನು ಕೇಳುವನು ಎಂದು ಮೂಕ ಮೊದಲಾದ ಸುಳ್ಳು ವಸ್ತುಗಳನ್ನು ಬಣ್ಣಿಸಿಯದೆ.

---

೫೪. ಹತರಾಜ ಪತ್ನಿಗಳು.

ಇಳೆಯಾಣ್ಮನೇ! ನಿನ್ನ ಪಗೆಯ ಹೆಂಡಂದಿರಿಗೆ
ಬೆಲೆಯಿಲ್ಲದಾಭರಣವಾಯ್ತುದಲುಬದಲಾಗಿ
ಸಲೆ ಕಣ್ಣಿನಲಿ "ಕಂಕಣಂ" ಕೈಗಳಿಗೆ "ತಿಲಕ" ಕಟಿ
ಗಾಯ್ತು "ಪತ್ರಾವಳಿ" ॥
ತಿಳಿಯೆ "ಹಾರಾವಾಪ್ತಿ" ಮೊಗಕಾಯ್ತು ಕಂಡಿದನು
ತಲೆಯನೊಲೆದಂದರೈ ಸಜ್ಜನರು ಬಲ್ಲಿದರ
ಮಲೆವುದುಂ ಕೇಸರಿಯ ಕೆಣಕುವುದುವೂಗದೈ
ಜಗದೊಳಬಲರಿಗಾರಿಗುಂ ॥

ಭಾ:–ಇಳೆಯಾಣ್ಮ=ಇಳೆಯ+ಆಣ್ಮ=ಅರಸ. ಸಲೆ=ಚೆನ್ನಾಗಿ. ಕಂಕಣ=ಬಳೆ ಮತ್ತು ನೀರಿನ ಬೊಟ್ಟು. ತಿಲಕ=ಹಣೆಗಿಡುವ ಬೊಟ್ಟು ಮತ್ತು ಎಳ್ಳಿನೊಡನೆ ಕೂಡಿದ ಜಲ. ಕಟಿ=ಸೊಂಟ. ಪತ್ರಾವಳಿ=ಹೆಂಗುಸರು ಕೆನ್ನೆಗಳಲ್ಲಿಯೋ ಕುಚಗಳ ಮೇಲೋ ಚಂದಕ್ಕಾಗಿ ಕಸ್ತೂರಿಯಿಂದ ಅಥವಾ ಕುಂಕುಮಕೇಸರದಿಂದ ಬರೆಯುವ ಚಿತ್ರ ಮತ್ತು ಎಲೆಗಳ ರಾಶಿ. ಹಾರಾವಾಪ್ತಿ (ಹಾರ+ಅವಾಪ್ತಿ) ಹಾರ=ಸರ ಮತ್ತು ಹರಸಂಬಂಧಿಯಾದದ್ದು ಭಸ್ಮ. ಅವಾಪ್ತಿ=ಲಾಭ ಅಥವಾ ಹಾ-ರಾವ+ಆಪ್ತಿ=ಹಾ ಹಾ ಎಂಬ ಕೂಗಿನ ಪ್ರಾಪ್ತಿಯು. ಒಲೆದು=ಅಲ್ಲಾಡಿಸಿ. ಅಂದರು=ಹೇಳಿದರು. ಬಲ್ಲಿದರು=ತಿಳಿದವರು. (ಇಲ್ಲಿ ಬಲಿಷ್ಠರೆಂದರ್ಥವು). ಮಲೆ=ಇದಿರಿಸು. ಕೇಸರಿ=ಸಿಂಹ. ಇಲ್ಲಿ ಶತ್ರು ಸ್ತ್ರೀಯರು ಗಂಡಂದಿರು ಸತ್ತಮೇಲೆ ಕಣ್ಣೀರು ಸುರಿಸುತ್ತಾ ಎಲೆಗಳಿಂದ ಮೈಯನ್ನು ಮರೆಯಿಸಿಕೊಂಡು ಮುಖದಲ್ಲಿ ವಿಭೂತಿ ಯನ್ನೋ: ಹಾ ಹಾ ಎಂಬ ಕೂಗನ್ನೋ ತಾಳಿ, ಮೃತರ ಆತ್ಮಶಾಂತಿ

ಗಾಗಿ ತಿಲತರ್ಪಣವನ್ನು ಕೊಡುವರೆಂದೂ ವರ್ಣಿಸೀಯ ರಾಜನು ಬಲಿಷ್ಠನಾದುದರಿಂದ ಇವನನ್ನು ಆ ಸತ್ತ ಅರಸರು ಕೆಣಕಿದುದು ತಪ್ಪಾಯಿತಾಗಿ ಸಜ್ಜನರು ಹೇಳುವರೆಂದೂ ಭಾವವು.

ಅ:–ಇಲ್ಲಿ ಶ್ಲೇಷ ಮತ್ತು ವಿರೋಧಾಭಾಸಾಲಂಕಾರಗಳಿಗೆ ಅಂಗಾಂಗಿಭಾವ ಸಂಕರವು.

---

೫೫. ಭೋಜರಾಜನು.

ರಾಜರಾಜನ ಭೋಜರಾಜನಾ ಯಶದಿಂ ವಿ
ರಾಜಿಸುವ ಕಾಂತಿಯಿಂ ಜಗವೆ ಬಿಳುಪೇರಿರಲ್
ತ್ರೈಜಗಗಳೊಡೆಯರುಂ ಹುಡುಕಹೊರಟರ್ಮಜ್ಜಿಗೆಯು
ಕೊಂಡು ಹರಿಯು ಕಡಲ ॥
ರಾಜರಾಜನ ಸಖನು ಸುಡುತಲುರಿಗಣ್ಣಿನಿಂ
ಮೂಜಗದ ಬೆಟ್ಟಗಳ, ಕೀರ ನೀರ್ಗಳ ಬೆರೆಸಿ
ಸಾಜದಿಂದಜನಂಚೆಯುಂ, ಸಿಂಹವಂ ಕೊಂಡು ದೇ
ವೇಂದ್ರ ಬೆಳ್ಳಾನೆಯುಂ ॥

ಭಾ:–ಭೋಜರಾಜನ ಯಶಸ್ಸಿನಿಂದ ಜಗವೆಲ್ಲಾ ಬಿಳುಪಾದುದರಿಂದ ಬ್ರಹ್ಮಾದಿ ದೇವತೆಗಳಿಗೂ ತಮ್ಮ ತಮ್ಮ ವಸ್ತುಗಳಲ್ಲಿ ಭ್ರಾಂತಿಯುಂಟಾಯಿತು. ಸಮುದ್ರಗಳೆಲ್ಲಾ ಬಿಳುಪಾಗಿ ಅವುಗಳಲ್ಲಿ ತನ್ನ ಕ್ಷೀರಸಮುದ್ರವಾವುದೆಂದು ಕಂಡುಹಿಡಿಯಲು ಮಜ್ಜಿಗೆಯನ್ನು ಹಿಡಿದು ಕೊಂಡು ಹರಿಯೂ, ಬೆಟ್ಟಗಳೆಲ್ಲಾ ಬಿಳುಪಾದುದರಿಂದ ತನ್ನ ರಜತಾಚಲವಾವುದೆಂದು ನೋಡಲು ಉರಿಗಣ್ಣಿನಿಂದ ಬೆಟ್ಟಗಳನ್ನೆಲ್ಲಾ ಕರಗಿಸುತ್ತಾ ಈಶ್ವರನೂ, ಹಕ್ಕಿಗಳೆಲ್ಲಾ ಬಿಳುಪಾದುದರಿಂದ ತನ್ನ ವಾಹನವಾದ ಹಂಸ ಹಕ್ಕಿಯು ಯಾವುದೆಂದು ತಿಳಿಯಲು ಹಾಲ್ನೀರುಗಳನ್ನು ಬೆರಸಿಕೊಂಡು ಬ್ರಹ್ಮನೂ, ಆನೆಗಳೆಲ್ಲಾ ಬಿಳುಪಾದುದರಿಂದ ತನ್ನ ಐರಾವತವಾವುದೆಂದು ಹುಡುಕಲು ಸಿಂಹವನ್ನು ಹಿಡಿದುಕೊಂಡು

ದೇವೇಂದ್ರನೂ ಹೊರಟರು ಎಂದು ಅರ್ಥವು. ಇಲ್ಲಿ ಕೀರ್ತಿಯನ್ನು ಬಿಳುಪಾಗಿ ವರ್ಣಿಸುವ ಕವಿಸಮಯವನ್ನೂ ಹಾಲು ಮಜ್ಜಿಗೆಯ ಜಿರಕೆಯಿಂದ ಹೆಪ್ಪುಕಟ್ಟುವುದನ್ನೂ ಬೆಳ್ಳಿಯು ಬೆಂಕಿಯಲ್ಲಿ ಕಾಸಿದಾಗ ಕರಗುವುದನ್ನೂ ಹಂಸಕ್ಕೆ ಹಾಲ್ನೀರುಗಳನ್ನು ಪ್ರತ್ಯೇಕಿಸುವ ಶಕ್ತಿಯಿರುವುದನ್ನೂ ಐರಾವತವು ಆನೆಗಳ ಹಗೆಯಾದ ಸಿಂಹಕ್ಕೆ ಹೆದರುವುದನ್ನೂ ತಿಳಿಯತಕ್ಕುದು. ರಾಜರಾಜನ ಸಖ=ಕುಬೇರನ ಮಿತ್ರ ಈಶ್ವರ. ಕೀರ=ಕ್ಷೀರ. ಅಜ=ಬ್ರಹ್ಮ. ಅಂಚೆ=ಹಂಸ. ಬೆಳ್ಳಾನೆ (ಬಿಳಿದು+ಆನೆ)=ಐರಾವತ.

ಅ:–ಒಂದು ವಸ್ತುವು ಇನ್ನೊಂದರ ಗುಣವನ್ನು ಹೊಂದಿದ್ದರಿಂದ ಪ್ರತ್ಯೇಕಿಸಿ ತಿಳಿಯದಿರುವಲ್ಲಿ ಕಾರಣಾಂತರದಿಂದ ಅವರ ಭೇದವನ್ನು ತಿಳಿಯುವುದೇ ಉನ್ಮೀಲಿತವು. ಇಲ್ಲಿ ಹಾಲಿನ ಕಡಲನ್ನು ಮಜ್ಜಿಗೆ ಹಾಕಿ ತಿಳಿದುದು, ಹರನು ಕೈಲಾಸವನ್ನು ಕರಗಿಸಿ ತಿಳಿದುದು, ಬ್ರಹ್ಮನು ಹಾಲು, ನೀರು ಬೇರೆ ಗೈದುದರಿಂದ ಹಂಸವನ್ನು ಕಂಡುದು ಮೊದಲಾಗಿ ವರ್ಣಿಸಲ್ಪಟ್ಟಿದೆ.

೫೬. ರಾಯಯಶವು.

ನಿನ್ನ ಸೊಬಗಿನ ಕೀರ್ತಿರಮಣಿ ಭುಜಗಾಲಯವ
ಚೆನ್ನೆ ಪೊಕ್ಕಳ್, ರಾಯ! ಮಾತಂಗಸಂಗವಂ
ರನ್ನೆ ಗೆಯ್ದುಳ್ದಿಗ್ದಿಗಂತದೊಳ್ ಪೇಳಲೇಂ ನಿನ್ನವಳ
ದುಷ್ಕಾರ್ಯವಾ ॥
ಸನ್ನೆಯಿಂದಂಬರವನುಳಿದು ನಂದನಗೂಡೆ
ಬಿನ್ನಣದೆ ಮೆರೆವಳ್ಳೆ ಕಂಡ ಕಂಡೂರೊಳಗೆ
ಮನ್ನಣೆಯ ಮರೆದಂಕೆ ಸುಂಕವಿಲ್ಲದ, ಪೆಣ್ಗಳೇಂ ಗೆಯ್ಯಲುಂ
ಹೇಸರ್ಪೈ ॥

ಭಾ:–ಕೀರ್ತಿರಮಣಿ=ಕೀರ್ತಿಯೆಂಬ ರಮಣಿ. ಭುಜಗ=ವಿಟಪುರುಷ ಮತ್ತು ಹಾವು. ಮಾತಂಗ=ಹೊಲೆಯ ಮತ್ತು ಆನೆ.

ಅಂಬರ=ವಸ್ತ್ರ ಮತ್ತು ಆಕಾಶ. ನಂದನ=ಮಗ ಮತ್ತು ಸ್ವರ್ಗಲೋಕದ ನಂದನವನ. ಮನ್ನಣೆ=ಮರ್ಯಾದೆ. ಇಲ್ಲಿ ರಾಜನ ಕೀರ್ತಿರಮಣಿಯ ದುಷ್ಕಾರ್ಯವು ಏನೆಂದರೆ— ವಿಟಪುರುಷನ ಮನೆ ಹೊಕ್ಕು, ಹೋದ ಹೋದಲ್ಲಿ ಹೊಲೆಯನ ಸಂಗಮಾಡಿ, ಬಟ್ಟೆ ಬಿಟ್ಟು, ಮರ್ಯಾದೆಯಿಲ್ಲದೆ ಕಂಡ ಕಂಡೂರಲ್ಲಿ ಮಗನೊಡನೆ ನೆರೆದು ಮೆರೆಯುವುದು ಆಗಿದೆ. ಆದರೆ ಇಲ್ಲಿ ವರ್ಣಿಸಲ್ಪಡುವ ರಾಜನ ಕೀರ್ತಿಯು ಕೆಳಗೆ ಪಾತಾಳದ ವರೆಗೂ ದಿಕ್ಕುಗಳಲ್ಲಿ ದಿಗ್ಗಜಗಳ ವರೆಗೂ ಮೇಲೆ ಆಕಾಶಮಾರ್ಗವನ್ನೂ ದಾಟಿ ಸ್ವರ್ಗದ ವರೆಗೂ ಹರಡಿದೆ ಎಂದು ರಾಜನ ಸ್ತೋತ್ರವೇ ಪ್ರಸ್ತುತಾರ್ಥವು.

ಅ:—ಇಲ್ಲಿ ಕೀರ್ತಿಯೇ ರಮಣಿಯೆಂದು ಕೀರ್ತಿಯಲ್ಲಿ ರಮಣೀತ್ವವನ್ನು ಆರೋಪಿಸಿದುದರಿಂದ ಅಭೇದರೂಪಕಾಲಂಕಾರವು. ಕೀರ್ತಿಯಲ್ಲಿ ರಮಣಿಯಿಂದ ಯಾವ ನ್ಯೂನತಾಧಿಕ್ಯಗಳನ್ನೂ ಹೇಳದುದರಿಂದ ಅದು ಅನುಭಯೋಕ್ತ್ಯಾಭೇದ ರೂಪಕವು. ಅವಳು ವಿಟನ ಮನೆ ಹೊಕ್ಕು ಚಂಡಾಲಸಂಸರ್ಗ, ವಸ್ತ್ರಪರಿತ್ಯಾಗ, ನಂದನಸಂಗಮ ಮೊದಲಾದ ದುಷ್ಕಾರ್ಯ ಮಾಡಿದಳೆಂಬ ನಿಂದೆಯಿಂದ ರಾಜನ ಕೀರ್ತಿಯು ಪಾತಾಳ, ದಿಗಂತ, ಸ್ವರ್ಗಪರಿಯಂತವಾಗಿ ಹರಡಿದೆಯೆಂಬ ಸ್ತುತಿಯು ವ್ಯಕ್ತವಾಗುವುದರಿಂದ ವ್ಯಾಜಸ್ತುತಿಯೆಂಬ ಅಲಂಕಾರವು. ಭುಜಗ, ಮಾತಂಗ, ಅಂಬರ, ನಂದನ ಶಬ್ದಗಳಿಗೆ ಹಾವು ಆನೆ, ಆಕಾಶ, ನಂದನವನವೆಂಬ ಬೇರೆ ಅರ್ಥವೂ ಇರುವುದರಿಂದ ಅನೇಕಾರ್ಥಸಂಶ್ರಯರೂಪವಾದ ಶ್ಲೇಷಾಲಂಕಾರವು. ಅದು ಶಬ್ದರೂಪವನ್ನು ಬದಲಾಯಿಸದೆ ಅರ್ಥವನ್ನು ಕೊಡುವುದರಿಂದ ಅಭಂಗಶ್ಲೇಷವು. ಕೀರ್ತಿರಮಣಿಯ ಸ್ವಚ್ಛಂದಾಚಾರವನ್ನು 'ಅಂಕೆ ಸುಂಕವಿಲ್ಲದ ಪೆಣ್ಣಳೇಂ ಗೆಯ್ಯಲಾಂ ಪೇಸರ್ವೆ' ಎಂಬ ಸಾಮಾನ್ಯದಿಂದ ಸಾಧಿಸಿದುದರಿಂದ ಅರ್ಥಾಂತರನ್ಯಾಸಾಲಂಕಾರವು. ಇವುಗಳಿಗೆಲ್ಲಾ ಪರಸ್ಪರ ಕಾರ್ಯಕಾರಣ ಭಾವವಿದ್ದುದರಿಂದ ಅಂಗಾಂಗಿಭಾವ ಸಂಕರವು.

---

೫೨. ಸಮಸ್ಯೆ (ಅಂತರ್ಲಾಪಿ).

ನಿನ್ನ ಪಟ್ಟಾಭಿಷೇಕದಲಿ ಹೊನ್ನಿನ ಕಲಶ
ಮನ್ನೆಯೊರ್ವಳ ಕೈಗಳಿಂ ಸಂಭ್ರಮದೆ ಜಾರೆ

ಬಿನ್ನಣದೆ ಮೆಟ್ಟಲೊಳ್ದನಿಗೈದುದ್ಯೆ ಠಂಠಠಣ ಠಂಠಠಂ
ಠಠಂಠಂ ॥

ಇನ್ನು ಮಿಂತೊಂದು ದಿನ ಕೊಡೆ ಸಮಸ್ಯೆಯ ಭೋಜ
ನನ್ನುಕವಿಯರುಹಿದಂ ಕೋತಿನೇರಿಳೆಯ ಮರ
ವನ್ನಲುಗಿಸಲು ಹಣ್ಣು ಬಿಳ್ದುದ್ಯೆ ನೀರಿನೊಳ್ ಗುಳುಗುಳಂ
ಗುಳುಗಳುಂ ಗುಳ್ ॥

ಭಾ:– ಭೋಜರಾಜನು ತನ್ನ ಪಟ್ಟಾಭಿಷೇಕಕಾಲದಲ್ಲಿ ಓರ್ವ ಹೆಂಗುಸಿನ ಕೈಯಿಂದ ಮೆಟ್ಟಲಿನಲ್ಲಿ ಜಾರಿಬಿದ್ದ ಚಿನ್ನದ ಪಾತ್ರೆಯು ಕೊನೆಯ ಮೆಟ್ಟಲಿನ ವರೆಗೂ ಠಂ ಠಂ ಎಂದು ಶಬ್ದಮಾಡುತ್ತಾ ಹೋದುದನ್ನು ಮತ್ತೊಂದು ದಿನ ಅವನು ಏಕಾಕಿಯಾಗಿ ರಾಜ್ಯದ ಲ್ಲೆಲ್ಲೋ ಸಂಚರಿಸುತ್ತಿದ್ದಾಗ ಒಂದು ಕೆರೆಯ ಬಳಿಯಲ್ಲಿದ್ದ ನೇರಳೆ ಮರದ ಗೆಲ್ಲನ್ನು ಕೋತಿಗಳು ಅಲ್ಲಾಡಿಸಲು ಹಣ್ಣುಗಳು ಕೆರೆಯ ನೀರಲ್ಲಿ ಗುಳು ಗುಳು ಶಬ್ದಮಾಡುತ್ತಾ ಬಿದ್ದುದನ್ನು ಮನಸ್ಸಿನಲ್ಲಿಟ್ಟು ಕೊಂಡು ಒಂದು ದಿನ ತನ್ನ ಆಸ್ಥಾನಕ್ಕೆ ಹೋದಾಗ ಕವಿಗಳಿಗೆಲ್ಲಾ ಆ ಅನುಕರಣ ಶಬ್ದಗಳನ್ನೇ ಜೋಡಿಸಿ ಒಂದೊಂದು ಸಮಸ್ಯೆಯ ನ್ನಾಗಿ ಕೊಟ್ಟನೆಂದೂ ಆಗ ಕಾಳಿದಾಸನನ್ನು ಹೊರತು ಅಲ್ಲಿದ್ದ ಕವಿಗ ಳೆಲ್ಲಾ ಆ ಸಮಸ್ಯೆಗಳನ್ನು ತುಂಬಿಸುವುದಕ್ಕೆ ಅಸಮರ್ಥರಾಗಲು ಕಾಳಿದಾಸನೇ ಅವುಗಳನ್ನು ಪೂರ್ಣಮಾಡಿ ಭೋಜನಿಂದ ವಿಶೇಷ ಮರ್ಯಾದೆಯನ್ನು ಪಡೆದನಾಗಿ ಭೋಜಪ್ರಬಂಧದಲ್ಲಿ ಹೇಳಿದ ಕಥೆಯನ್ನು ಇಲ್ಲಿ ತಿಳಿದುಕೊಳ್ಳಬೇಕು. ಹೊನ್ನ=ಚಿನ್ನ. ಮನ್ನೆ= ಹೆಂಗುಸು. ಬಿನ್ನಣ=ಚಂದ. ಅರುಹು=ಹೇಳು.

---

೫೮. ಭೋಜ.

ಒಂದು ದಿನ ಜಕ್ಕವಕ್ಕಿಯು ಪಾಂಥ ನಡೆವಲ್ಲಿ
ಬಂದು ಕೇಳ್ದುದು ಮಿತ್ರ! ನನಗಿರಲು ತಕ್ಕಾದ

ಸಂದಿರುಳ ದೇಶವದು ಯಾವುದೆನೆ? ಪೇಳಿದಂ ಸಂತ
ವಿರು ಖಗರಾಯ! ನೀಂ ॥
ಇಂದೊ! ನಾಳೆಯೊ! ಭೋಜನಾ ಹೊನ್ನ ಬೆಟ್ಟವಂ
ಒಂದಿನಿತದಿಲ್ಲದಂತಿರೆ ದಾನಗೆಯ್ವುದಂ
ಅಂದಗಾಣಿಪನಿರುಳನಿಲ್ಲದಂತಾಗಿಸಿಯೆ ನಿನಗುಂಟೆ
ಕಷ್ಟವಿನ್ನೂ? ॥

ಭಾ:–ಜಕ್ಕವಕ್ಕಿ=ಚಕ್ರವಾಕಪಕ್ಷಿ. ಪಾಂಥ=ಪ್ರಯಾಣಿಕ. ಸಂದ+ಇರುಳ=ಕತ್ತಲೆಯಿಲ್ಲದ. ಸಂತವಿರು=ಶಾಂತನಾಗಿರು. ಖಗ=ಹಕ್ಕಿ. ಹೊನ್ನು=ಚಿನ್ನ. ಹೊನ್ನಬೆಟ್ಟ=ಮೇರುಪರ್ವತ. ಚಕ್ರವಾಕ ಹಕ್ಕಿಗೆ ರಾತ್ರಿ ಕಣ್ಣು ಕಾಣದೆ ಅದು ಸೂರ್ಯೋದಯದಲ್ಲಿ ಸಂತೋಷ ಗೊಳ್ಳುವುದು ಎಂದು ವರ್ಣಿಸುವುದು ಕವಿಸಮಯ. ಇಲ್ಲಿ ಭೋಜನು ಮೇರುಪರ್ವತವನ್ನು ದಾನಕೊಡುವನು ಎಂದು ವರ್ಣಿಸುವುದು ಅಸಂಭಾವ್ಯವಾಗಿ ಅವನ ದಾನಗುಣದ ಅತಿಶಯವನ್ನು ಮಾತ್ರ ಸೂಚಿಸುವುದು.

---

೫೯. ಭೋಜ.

ಭೋಜರಾಜನೆ! ಮೂರು ಲೋಕದಲಿ ಖ್ಯಾತನೈ
ತೇಜದಿಂ ಮೆರೆದ ಧರ್ಮಿಷ್ಠ ಸತ್ಪಾತ್ರಕಂ
ಸಾಜವಾಗಿಯೆ ನಿನ್ನ ಜನಕನಾತನುಮೆನ್ನ ಜನಕನಿಂ
ಕೊಂಡುಕೊಂಡಂ ॥
ಮೂಜಗವಿದರಿವಂತೆ ಕೋಟಿರತ್ನಗಳ ನೀಂ
ನಾಜದಲಿ ಕೊಡು ಹಿಂದೆ ಆಗದಿರೆ, ಈ ಕವನ
ಬೀಜನರು ಪ್ರೊಸತೆಂದರೆನಗೆ ಕೊಡು ಲಕ್ಷಧನವನ್ನು
ಕೂಡಿಸಿ ಪಾದವಾ ॥

ಭಾ:-ಹಿಂದೆ ಭೋಜರಾಜನೊಮ್ಮೆ ಕಾಳಿದಾಸನಲ್ಲಿ ಸಿಟ್ಟು ಗೊಂಡು ಅವನನ್ನು ರಾಜ್ಯದಿಂದಟ್ಟಿ, ಸಿಟ್ಟು ತಣಿದಾಗ ತಿರಿಗಿ ಕಾಳಿದಾಸನನ್ನು ಎಷ್ಟು ಹುಡುಕಿದರೂ ಅವನು ಸಿಗದೆ ಹೋಗಲು ಅವನನ್ನು ಪತ್ತೆಹಚ್ಚುವ ಸಲುವಾಗಿ ಒಂದು ಉಪಾಯವನ್ನು ಆಲೋಚಿಸಿ ಅರಮನೆಯಲ್ಲಿ ಏಕಪಾಠಿ, ದ್ವಿಪಾಠಿ, ತ್ರಿಪಾಠಿ ಎಂಬ ಮೂವರು ವಿದ್ವಾಂಸರನ್ನು ಇರಿಸಿ, ಯಾರಾದರೂ ಹೊಸ ಕವಿತೆಯನ್ನು ಮಾಡಿ ಈ ವಿದ್ವಾಂಸರಿಂದ "ಇದು ಹೊಸಕವಿತೆಯು ನಿಜ"ವೆಂದು (ಮೆಚ್ಚಿಕೆ) ಶಿಫಾರಸ್ಸು ಪಡೆದರೆ ಅಂಥವರಿಗೆ ತಾನು (ಸಪಾದ) ಒಂದೂಕಾಲು ಲಕ್ಷ ದ್ರವ್ಯವನ್ನು ಬಹುಮಾನವಾಗಿ ಕೊಡುತ್ತೇನೆಂದು ಪ್ರಸಿದ್ಧಿಪಡಿಸಿ ಸುಮ್ಮನಿದ್ದನು. ಹಲವು ದಿನಗಳ ವರೆಗೆ ಈ ವಿದ್ವಾಂಸರ ಪ್ರತಿಭೆಯಿಂದ ಯಾರೂ ಈ ಪಂಥವನ್ನು ಗೆಲ್ಲದಿರಲು ಒಂದು ದಿನ ಹೀಗೆಯೇ ಆಸ್ಥಾನದಿಂದ ಅವಮಾನಿತನಾಗಿ ಹೋಗುತ್ತಿರುವ ಒಬ್ಬ ಕವಿಯನ್ನು ನೋಡಿ ಕಾಳಿದಾಸನು ಈ ಪದ್ಯವನ್ನು ಬರೆದು ಕೊಟ್ಟನು. ಅರ್ಥವೇನೆಂದರೆ-ಓ, ಧರ್ಮಿಷ್ಠನಾದ ಭೋಜರಾಜನೇ! ನೀನು ಸತ್ಯಸಂಧನು. ಹಿಂದೆ ನನ್ನ ತಂದೆಯು ನಿನ್ನ ತಂದೆಗೆ ಒಂದುಕೋಟಿ ರತ್ನಗಳನ್ನು ಸಾಲವಾಗಿ ಕೊಟ್ಟಿದ್ದನು. ಅದಕ್ಕೆ ಈ ವಿದ್ವಾಂಸರೇ ಸಾಕ್ಷಿಗಳು. ಇವರು ಈ ಪದ್ಯೋಕ್ತವಾದ ಸಾಲವನ್ನು ಒಪ್ಪದೆ, ಇದು ಹೊಸಕವಿತೆ ಎಂದರೆ ನನಗೆ ನಿನ್ನ ಪಂಥದ ಬಹುಮಾನವನ್ನಾದರೂ ಕೊಡು ಎಂದು. ಒಲ್ಲದಿರು=ಒಪ್ಪದಿರು. ಕವನ=ಕವಿತೆ.

ಅ:-ಇಲ್ಲಿ ಅಂತಹ ದಾನವಿಲ್ಲದಿದ್ದರೂ ಆ ದಾನಸಂಬಂಧವನ್ನು ಬಣ್ಣಿಸಿರುವುದರಿಂದ ಸಂಬಂಧಾತಿಶಯೋಕ್ತ್ಯಲಂಕಾರವು.

೬೦. ಭೋಜ.

ಗೊಲ್ಲ! ಸುರಲೋಕದಿಂದೆಲ್ಲಿ ಪೋಪೆ ಜವದಿ
ಸೊಲ್ಲಲೇಂ ಕಾಮಧೇನುವಿನ ಕರುಗಳಿಗಾಗಿ

ಹುಲ್ಲ ತರಲೆಂದು ಭೂಮಿಗೆ ಪೋಪೆ ನಾರದನೆ! ಆಕೆಗುಂ
ಹಾಲಿಲ್ಲವೇ? ॥
ಇಲ್ಲದಾಗಿದೆ ಭೋಜರಾಜನಾ ದಾನಗಳ
ನೆಲ್ಲವನು ಕೇಳ್ದಾಗ ಕೆಚ್ಚಲಾರಿತು ನಾಣ್ಚಿ
ಗೊಲ್ಲನೇ! ಫಲವಿಲ್ಲ ಹುಲ್ಲ ಭೂಮಿಯುಲವನ
ಪಗೆಗಳೆಲ್ಲರು ಮೆಂದರೈ ॥

ಭಾ:-ಜವ=ವೇಗ. ಸೊಲ್ಲು=ಹೇಳು. ನಾಣ್ಚು=ನಾಚಿಕೆಪಡು. ಈ ಪದ್ಯವು ಸುರಲೋಕದಿಂದ ಭೂಮಿಗೆ ಹೊರಟ ಗೊಲ್ಲನಿಗೆ ಮಧ್ಯಮಾರ್ಗದಲ್ಲಿ ನಾರದನೊಡನೆ ಆದ ಸಂಭಾಷಣರೂಪವಾದುದು. ಇವರಲ್ಲಿ ಭೋಜನ ದಾನದಿಂದುಂಟಾದ ಕೀರ್ತಿಯನ್ನು ಕೇಳಿದ ಕಾಮಧೇನುವಿನ ಕೆಚ್ಚಲಾರಿತು ಎಂದು ವರ್ಣಿಸುವುದೂ ಅವನ ವೈರಿಗಳು ಹುಲ್ಲು ಮೆಂದರೆಂದು ವರ್ಣಿಸುವುದೂ ಅತಿಶಯೋಕ್ತಿಯಾಗಿ ಭೋಜನ ವಿತರಣವೂ ಅವನ ಪರಾಕ್ರಮವೂ ಅತಿಶಯವಾದುದೆಂಬರ್ಥವನ್ನು ದ್ಯೋತಿಸುವುದು.

ಅ:-ಇಲ್ಲಿ ಕಾಮಧೇನುವಿಗೆ ಕೆಚ್ಚಲಾರಿಲ್ಲವಾದರೂ ಆರಿದೆ ಎಂದು ಹೇಳಿದ್ದುದರಿಂದ ಸಂಬಂಧಾತಿಶಯೋಕ್ತಿಯು. ಹುಲ್ಲನ್ನು ಶತ್ರುಗಳು ಮೇದಿಲ್ಲವಾದರೂ ಮೆಂದರೆಂಬುದರಿಂದ ಮತ್ತೊಂದು ಅತಿಶಯೋಕ್ತಿಯು. ಅವುಗಳಿಗೆ ಅಂಗಾಂಗಿಭಾವ ಸಂಕರವು. ಈ ಅಲಂಕಾರದಿಂದ ಕಾಮಧೇನುವಿನಿಂದಲೂ ಹೆಚ್ಚಾಗಿ ದಾನ ಕೊಡುವನೆಂದೂ, ಪಗೆಗಳನ್ನು ಗೆದ್ದ ಮಹಾಶೂರನೆಂದೂ ಸ್ಪಷ್ಟವಾಗುವುದರಿಂದ ಅಲಂಕಾರದಿಂದ ವಸ್ತುಧ್ವನಿಯು.

---

೬೧. ಮಹಾರಾಜನು.

ಪಾರ್ಥಿವೇಶ್ವರ ರಾಜ! ವಿಜಯವಿಕ್ರಮನಾಗೆ
ಪಾರ್ಥಿಕ್ಯಪೊಂದಿ ಸೀಂ ವತ್ಸರಂಗಳ ತೆರದಿ

ಸಾರ್ಥಕಮದಾಯ್ತು ತವ ರಾಜ್ಯಮಾನಂದನಂದನಮಾಗಿ
ಸೌಮ್ಯಮಾಗಿ ॥

ಪಾರ್ಥಶೂರನೆ! ವಿರೋಧಿಗಳು ಮತ್ಸರದಿಂದ
ಪಾರ್ಥರಹ ದುರ್ಮುಖಿ ವಿಕಾರಿ ಖರ ರಾಕ್ಷಸರ್
ಸಾರ್ಥಕರದಾದರ್ಪೈ ವರ್ಷನಾಮದ ತೆರದಿ ನಿನ್ನಂತೆ
ನಿನ್ನ ಪಗೆಗಳ್ ॥

ಭಾ:-ಪಾರ್ಥಿವೇಶ್ವರ (ಪಾರ್ಥಿವ+ಈಶ್ವರ)=ಅರಸರ ಒಡೆಯ. ವಿಜಯವಿಕ್ರಮ=ವಿಜಯದಿಂದ ಪರಾಕ್ರಮವುಳ್ಳವನು. ಆನಂದನಂದನ=ಸಂತೋಷದಿಂದ ನಂದನವನ ಸದೃಶವಾದದ್ದು. ಸೌಮ್ಯ=ಶಾಂತ. ರಾಜನು ಪಾರ್ಥಿವೇಶ್ವರ, ವಿಜಯವಿಕ್ರಮನಾಗಿ ಅವನ ರಾಜ್ಯವು ಆನಂದನಂದನ ಸೌಮ್ಯವಾದುದರಿಂದ ಪಾರ್ಥಿವ ಮೊದಲಾದ ಸಂವತ್ಸರಗಳಂತೆ ರಾಜನೂ ಸಾರ್ಥಕನಾದನು, ರಾಜ್ಯವೂ ಸಾರ್ಥಕವಾಯಿತು ಎಂಬ ಭಾವವು. ಸಂವತ್ಸರಗಳು ಅವುಗಳ ನಾಮಾನುಗುಣ ಫಲವನ್ನು ಕೊಡತಕ್ಕವುಗಳೆಂದು ತಿಳಿಯಬೇಕು. ಮತ್ತು ವಿರೋಧಿಗಳು ಮತ್ಸರದಿಂದ ಅಪಾರ್ಥರಹ=ಪ್ರಯೋಜನವಿಲ್ಲದ ದುರ್ಮುಖಿ, ವಿಕಾರಿ, ಖರ ರಾಕ್ಷಸರಾಗಿ ವತ್ಸರಗಳ ನಾಮದಂತೆ ಸಾರ್ಥಕರಾದರು. ಆದುದರಿಂದ ನಿನ್ನ ಹಗೆಗಳೂ ನಿನ್ನಂತೆಯೇ ಆದರು. ದುರ್ಮುಖಿ=ಕೆಟ್ಟ ಮೋರೆಯುವ. ವಿಕಾರಿ=ಬುದ್ಧಿ ವಿಕಾರವುಳ್ಳವ. ಖರ=ಕ್ರೂರ. ರಾಕ್ಷಸ=ರಾಕ್ಷಸಸ್ವಭಾವದವ.

ಅ:-ಇಲ್ಲಿ ಸಂವತ್ಸರದಂತೆ ರಾಜನು ಆನಂದನಂದನನಾದನೆಂಬುದರಿಂದ ಆದರಲ್ಲಿ ವಿಶೇಷಣಗಳು ಶ್ಲೇಷ ಶಬ್ದಗಳಿಂದ ಕೂಡಿರುವುದರಿಂದ ಶ್ಲಿಷ್ಟವಿಶೇಷಣೋಪಮಾಲಂಕಾರವು. ಅದರಂತೆ ವಿರೋಧಿಗಳು ಎಂಬಲ್ಲಿ ಇನ್ನೊಂದು ಉಪಮೆಯು. ಈ ಉಪಮೆಗಳಿಗೆ ಸಂಸೃಷ್ಟಿಯು. ಪರಸ್ಪರ ಅಪೇಕ್ಷೆಯಿಲ್ಲದೆ ಭೇದ ಸ್ಪಷ್ಟವಿದ್ದ ಅಲಂಕಾರಗಳ ಕೂಡುವಿಕೆಯು ಎಳ್ಳು ಅಕ್ಕಿಗಳ ಕೂಡುವಿಕೆಯಂತೆ ಸಂಸೃಷ್ಟಿಯೆನಿಸುವುದು.

೬೨. ಕೃಪಣರಾಜನು.

ಕೊಡಲು ಮನವಿಲ್ಲದಿರೆ ಸತ್ಕವಿಗೆ ಮರೆಯನ್ನು
ನುಡಿಯನಿನಿದಾದುದಂ ಕೇಳದೇತಕೆ ನೀನು
ಕಡುಚಿಂತೆಗೊಂಡೆಯ್ಯ ನಾಡಿನಾಣ್ಮನೆ ಕವಿಗೆ ಪೊಗಳು
ವುದು ಹುಟ್ಟುಗುಣವೈ ॥
ಬಿಡದೆ ಪೊಗಳುವೆವಯ್ಯ! ಹೊಳೆ, ಬೆಂಕಿ, ತೋಟಗಳ
ಕಡಲ ಜಂತುಗಳ ಬೆಟ್ಟಗಳ ಗಾಳಿಯ ಝರಿಯ
ಅಡವಿಗಳ ನಮಗೇನು ದೊರೆವುದದರಿಂದ ನೀನೇಕೆ
ಖಾತಿಯಗೊಂಡೆಯ್ಯ? ॥

ಭಾ:–ಇನಿದು=ಸರಸವಾದ. ನಾಡಿನ–ಆಣ್ಮ=ಅರಸ. ಖಾತಿ=ವ್ಯಸನ.

ಅ:–ಪೊಗಳುವುದು ಸ್ವಭಾವ ವೆಂಬುದನ್ನು ಮೇಲಿನರ್ಥದಿಂದ ಸಾಧಿಸಿದ್ದರಿಂದ ವಾಕ್ಯಾರ್ಥವೇ ಹೇತುವಾದ ಕಾವ್ಯಲಿಂಗಾಲಂಕಾರವು.

---

೬೩. ಸತ್ಕವಿ.

ಮೆಲ್ಲ ಮೆಲ್ಲನೆ ಪದಗಳನ್ನಿಡುವ ಶಬ್ದಗಳ
ನೆಲ್ಲವನು ಪರಿಕಾಣುತರ್ಥಗಳನಾಹರಿಪ
ನಲ್ಲದೆ ಸುವರ್ಣಗಳಲಂಕಾರಗಳನೆಳೆಸುವಂ ರಸಾಗತ
ಮಾದೊಡಂ ॥
ಸೊಲ್ಲೆ ದೋಷಾನ್ವೇಷತತ್ಪರನು ತಾನಾಗೆ
ಬಲ್ಲವರ ಸುಳ್ಳುಮಾತಿನಲಿ ಮರುಳಾಗಿಸುವ
ಕಳ್ಳನನು ಮೀರಿಹನು ಸತ್ಕವಿಯದೆಲ್ಲಿಯುಂ ದಂಡನೆಗೆ
ಗುರಿಯಾಗದೇ ॥

ಭಾ:-ಈ ಪದ್ಯದಲ್ಲಿ ಕವಿಯು ಕಳ್ಳನಿಗೆ ಸರಿಹೋಲಿಸಲ್ಪಟ್ಟಿದ್ದಾನೆ. ಆದರೆ ಕವಿಯು ರಾಜದಂಡನೆಗೆ ಗುರಿಯಾಗುವುದಿಲ್ಲವೆಂಬುದು ಅವನಲ್ಲಿರುವ ವಿಶೇಷವು. ಕವಿಯು ಸುಕುಮಾರ ಶಬ್ದಗಳನ್ನೇ ಆರಿಸಿ, ಯೋಗ್ಯವಾದ ಶಬ್ದಸಂಯೋಜನದಿಂದ ಹೃದಯಂಗಮವಾದ ಅರ್ಥವನ್ನು ತಂದು ಸುಕುಮಾರಾಕ್ಷರಗಳಿಂದ ಅನುಪ್ರಾಸಾದಿ ಅಲಂಕಾರಗಳನ್ನಿಟ್ಟು, ಶೃಂಗಾರಾದಿ ರಸಸ್ರಾವಿಯಾಗಿದ್ದರೂ ಕವಿತೆಯಲ್ಲಿ ದೋಷಗಳನ್ನು ಹುಡುಕಿ, ಅಸ್ಮೃತಪ್ರಾಯಗಳಾದ ಉತ್ಪ್ರೇಕ್ಷೆಗಳಿಂದ ತಿಳಿದವರನ್ನೂ ಮರಳು ಮಾಡುವನು. ಕಳ್ಳನು ಮೆಲ್ಲಗೆ ಹೆಜ್ಜೆಗಳನ್ನಿಟ್ಟು, ಒಳಗಿಂದಾಗುವ ಶಬ್ದಗಳನ್ನು ಸರಿಯಾಗಿ ಕೇಳಿ ದ್ರವ್ಯಗಳನ್ನು ಅಪಹರಿಸುವನು. ಅಲ್ಲದೆ ನೆಲದಲ್ಲಿ ಹುಗಿದಿಟ್ಟ ಚಿನ್ನಾಭರಣಗಳನ್ನಾದರೂ ಕದಿಯುವನು, ರಾತ್ರಿಯಲ್ಲಿಯೇ ಯಾವುದನ್ನಾದರೂ ಹುಡುಕುವನು. ಬುದ್ಧಿವಂತರನ್ನು ಸುಳ್ಳು ಮಾತಿನಿಂದ ಮಂಕುಗೊಳಿಸುವನು. ಪದ=ಶಬ್ದ, ಹೆಜ್ಜೆ. ಅರ್ಥ=ಪದಾರ್ಥ. ದ್ರವ್ಯ. ಆಹರಿಸು=ಅಪಹರಿಸು. ಸುವರ್ಣ=ಒಳ್ಳೆಯ ಅಕ್ಷರ. ಚಿನ್ನ. ಅಲಂಕಾರ=ಉಪಮಾದಿ ಅಲಂಕಾರ, ಆಭರಣ. ರಸಾಗತ=ರಸದೊಡನೆ ಬಂದದ್ದು, ಭೂಮಿಯಲ್ಲಿ ಇಟ್ಟಿದ್ದು. ದೋಷ=ಕಾವ್ಯದೋಷಗಳು, ರಾತ್ರಿ.

ಅ:-ಇಲ್ಲಿ ಶ್ಲಿಷ್ಟ ವಿಶೇಷಣದ ಉಪಮಾಲಂಕಾರವು. ಈ ಅಲಂಕಾರದಿಂದ ಕಳ್ಳನಂತೆ ಎಂಬ ನಿಂದೆಯಿಂದ ಕವಿಯು ಅತಿ ಚಮತ್ಕಾರಿಯೆಂದು ಸ್ತೋತ್ರವೇ ತಿಳಿಯುವುದೆಂದು ವ್ಯಾಜಸ್ತುತಿಯಲಂಕಾರವು ಸ್ಪಷ್ಟವಾಗುವುದರಿಂದ ಅಲಂಕಾರದಿಂದ ಅಲಂಕಾರಧ್ವನಿಯು.

---

೬೪. ಸಾಕ್ಷರ ಸರಸನು.

ಸಾಕ್ಷರಾಖ್ಯಂ ನಡತೆಕೆಟ್ಟು ವಿಪರೀತಕ್ಕ
ಪೇಕ್ಷೆಪಡಲಾ ವಿಶೇಷಣ ಪದವ ತಿರುಗಿಸುತೆ

ರಾಕ್ಷಸಾಖ್ಯನು ಎನುತಲಿಡುವುದ್ವೈ ಅವನ ನಡೆಯಂತೆ
ವಿಪರೀತವಾಗಿ ॥
ಸಾಕ್ಷರಾಖ್ಯನ ತೆರದಿ ಸರಸವಿದ್ವಾನ್ ಧರ್ಮ
ಮೋಕ್ಷದಿಂ ವಿಪರೀತನಾಗನವನಾದೊಡಂ
ಸೂಕ್ಷಿಪಂ ತನ್ನ ಸರಸತೆಯನುಪಪದದಿ ತಾನೆಂತಿಟ್ಟರುಂ
ಸರಸನೇ ॥

ಭಾ:–ಸಾಕ್ಷರಾಖ್ಯಂ=ಅಕ್ಷರಸಹಿತನೆಂದು ಹೆಸರು ಉಳ್ಳವನು. ವಿದ್ವಾಂಸನು. ವಿಪರೀತಕ್ಕೆ+ಅಪೇಕ್ಷೆಪಡಲು=ತನ್ನಲ್ಲಿರುವ ಪ್ರಾಜ್ಞತನಕ್ಕೆ ವಿರುದ್ಧವಾದ ತಿಳಿಗೇಡಿತನಕ್ಕೆ ಮನಸ್ಸು ಕೊಟ್ಟರೆ. ವಿಶೇಷಣಪದ=ಸಾಕ್ಷರಾಖ್ಯಂ ಎಂಬ ಸಮಾಸದಲ್ಲಿ ವಿಶೇಷಣವಾದ ಸಾಕ್ಷರ ಎಂಬ ಪದವನ್ನು. ಸರಸವಿದ್ವಾನ್=ರಸಿಕನಾದ ವಿದ್ವಾಂಸನು. ಧರ್ಮ ಮೋಕ್ಷದಿಂ=ಧರ್ಮ ಕೆಡುವುದರಿಂದ. ಸೂಕ್ಷಿಪಂ=ಸೂಚಿಸುವನು. ಸರಸಶಬ್ದವನ್ನು ಹೇಗೆ ತಿರಿಗಿಸಿದರೂ ಅದೂ ಸರಸವೆಂದೇ ಆಗುವುದು. ರಸಿಕರಾದ ವಿದ್ವಾಂಸರು ಧರ್ಮಗೇಡಿಗಳಾದರೂ ರಸಿಕತನದಿಂದ ತಮ್ಮ ತಪ್ಪನ್ನಣಗಿಸಿ ಲೋಕವೃಷ್ಟಿಗೆ ಸಜ್ಜನರೇ ಆಗುವರು.

ಅ:–ಉಪಮಾನದಿಂದ ಉಪಮೇಯಕ್ಕೆ ಉಪಮೇಯದಿಂದ ಉಪಮಾನಕ್ಕೆ ವಿಶೇಷವನ್ನು ಬಣ್ಣಿಸಿದರೆ ವ್ಯತಿರೇಕವು. ಇಲ್ಲಿ ಸಾಕ್ಷರ ಉಪಮಾನವು ಸರಸನು ಉಪಮೇಯವು. ಉಪಮಾನದಿಂದ ಉಪಮೇಯದಲ್ಲಿ ಹೆಚ್ಚಿನ ಗುಣವನ್ನು ಬಣ್ಣಿಸಿದೆ. ಮತ್ತು ಸಭಂಗಶ್ಲೇಷದಿಂದ ಸಾಕ್ಷರ, ರಾಕ್ಷಸ, ಸರಸ, ಸರಸವೆಂಬ ಅಕ್ಷರ ವ್ಯತ್ಯಾಸದಿಂದ ಶಬ್ದಾರ್ಥ ವ್ಯತ್ಯಾಸ ತೋರಿಸಿರುವುದರಿಂದ ವ್ಯತಿರೇಕಾಲಂಕಾರವು.

---

೬೫. ಅಂತರ್ಲಾಪಿ ಬಹಿರ್ಲಾಪಿಗಳು.

ಕಂತುಪಿತಸಖನ ತಾಯಾರ್? ಏನು ಮನೆಗಂದ?
ಪಂಕ್ತಿರಥಸುತನ ಪಗೆಯಾರ್? ಅಗಸ್ತ್ಯನ ತಾಯಿ?

ಕುಂತಿಗಾರ್ಹಿರಿಮಗನದರ್ಥಯೋಜನೆಯಿಲ್ಲದಿಹ
ಮಾತದೇನಿಳೆಯೊಳೂ ॥
ಕುಂತೀಸುತಂ ರಾವಣ ಕುಂಭಕರ್ಣನ್ಸೈ
ಎಂತಿರುವನಾ ಹರಿಯು? ಪಾಲ್ವೊನಲಿಗೇಂ ಪೆಸರು?
ಇಂತೆರಡಕುತ್ತರಂ ಹಿಂದುಮುಂದಾಗಿಸಲ್ ಸಕ್ಕದದಿ
ನಾಲಕ್ಕರಂ ॥

ಭಾ:-ಈ ಪದ್ಯದ ಪೂರ್ವಾರ್ಧವೂ, ಅಪರಾರ್ಧದ ಪ್ರಥಮ ಚರಣವೂ ಅಂತರ್ಲಾಪಿಯ ಉದಾಹರಣವು. ಉಳಿದೆರಡು ಚರಣಗಳು ಬಹಿರ್ಲಾಪಿಯ ಉದಾಹರಣವು. ಕಂತುಪಿತಸಖ=ಅರ್ಜುನ. ಅವನ ತಾಯಾರ್? ಕುಂತೀ. ಮನೆಗೇನು ಚಂದ? ಸುತಂ. ಪಂಕ್ತಿರಥಸುತ=ದಶರಥನ ಮಗ, ರಾಮ. ಅವನ ಹಗೆ ಯಾರು? ರಾವಣ. ಅಗಸ್ತ್ಯನ ತಾಯಿ ಯಾರು? ಕುಂಭ, ಅಗಸ್ತ್ಯನು ಕುಂಭದಿಂದ ಹುಟ್ಟಿದವನು. ಕುಂತಿಯ ಹಿರಿಮಗನಾರು? ಕರ್ಣ. ಅರ್ಥಯೋಜನೆಯಿಲ್ಲದ ಮಾತಾವುದು? "ಕುಂತೀಸುತಂ ರಾವಣ ಕುಂಭಕರ್ಣನ್ಸೈ" ಯೆಂಬುದು. ಪಾಲ್ವೊನಲ್=ಕ್ಷೀರಸಮುದ್ರ. ಸಕ್ಕದ=ಸಂಸ್ಕೃತ. ಹರಿಯು ಎಂತಿರುವನು? ಈ ಪ್ರಶ್ನೆಗೆ "ದೀನರಕ್ಷೀ" ಎಂಬುದು ನಾಲ್ಕು ಅಕ್ಷರಗಳುಳ್ಳ ಉತ್ತರವು. ಅದನ್ನೇ ಹಿಂದುಮುಂದಾಗಿ ಓದಿದರೆ ಎರಡನೆಯ ಪ್ರಶ್ನೆಗೆ "ಕ್ಷೀರನದೀ" ಎಂದು ಉತ್ತರವಾಗುವುದು.

---

೭೮. ಚಮತ್ಕೃತ ಪ್ರಶ್ನೋತ್ತರಗಳು.

ಆರ ಚಾಪಂ ಮುರಿದುದೈ ರಾಮಚಂದ್ರನಿಂ?
ದಾರುಮೆಳಸುವ ನಗರಮಾವುದೈ ಸಜ್ಜನರ
ದಾರು ಗೋವಳ್ತಿಯರ ಕಣ್ಮನಕೆ ಮೆಚ್ಚಿಕೆಯ ಮಾನವಂ
ಗೋಕುಲದೊಳು ॥

ಕೋರಿ ಪಣೆಗಣ್ಣನಂ ಕರೆವರೆಂತೋ? ಮುನಿಗ
ಕ್ಕಿರಿದೈದಕ್ಷರದ ಮಾರ್ನುಡಿಯ ಬೇಡುವೆಂ
ಬೇರೆ ಬೇರಾಗಿ ಮೇಣ್ ಹಿಂದುಮುಂದೋದಿರುಮರ್ಥ
ಕೆಡದಿರ್ಪ ತೆರದಾ ॥

ಭಾ:- ಚಾಪ=ಬಿಲ್ಲು. ಎಳಸು=ಬಯಸು. ಗೋಪಸ್ತ್ರೀ=ಗೊಲ್ಲತಿ. ಮಾನವ=ಮನುಷ್ಯ. ಕೋರು=ಇಚ್ಛಿಸು. ಪಣೆಗಣ್ಣ=ಫಾಲಾಕ್ಷ, (ಈಶ್ವರ). ಕಿರಿದೈದಕ್ಷರದ=ಐದಕ್ಷರಗಳಿಂದ ಕಿರಿದಾದ. ಮಾರ್ನುಡಿ=ಉತ್ತರ.

ಹಿಂದುಮುಂದೋದಿದರೂ ಅರ್ಥ ಕೆಡದಿರುವ ಐದಕ್ಷರದ ಉತ್ತರಗಳು.

೧.—ಪಂಚಾಸ್ಯಚಾಪಂ. ಪಂಚಾಸ್ಯ=ಐದು ಮುಖದ ಈಶ್ವರನ. ಚಾಪಂ=ಬಿಲ್ಲು.

೨.—ರಂಗನಗರಂ. ರಂಗ=ವಿಷ್ಣುವಿನ. ನಗರಂ=ಪಟ್ಟಣವಾದ ವೈಕುಂಠವು.

೩.—ನಂದನಂದನಂ. ನಂದ=ನಂದಗೋಪನ. ನಂದನಂ=ಮಗನಾದ ಕೃಷ್ಣನು.

೪.—ಮದನದಮ. ಮದನ=ಮನ್ಮಥನನ್ನು. ದಮ!=ನಿಗ್ರಹಿಸಿದವನೇ!

---

೨೭. ಬಹಿಲಾರ್ಪಿ.

ಇದನಾಲಿಸಿರಿ ಗುಂಗಿಹುಳುಗೆ ಬದಿಗೇಂ ಪೆಸರ್?
ಮುದದಿಂದ ನೀರ್ದಾಟಲೇಂ ಮಾರ್ಗವೆರಳ್ವರ್ಣ
ಪ್ರೋದ್ಗಿದಾ ಕನ್ನಡದ ಮಾರ್ನುಡಿಗಳಂ ಹಿಂದುಮುಂದಾಗಿ
ನಿಲಿಸೆಯುವಕೆ ॥

ಪುದುವಾಳ್ವ ಸಕ್ಕದದಿ ಹನಿಗೊಂಡು ಪಟ್ಟಣಕೆ,
ಮದನಪಿತೃವೈರಿಗುಂ, ಬರ್ಪುದೆಂತೋ ಪೆಸರ್?
ಸದಯರೇ! ಇಂತಿರ್ಪ ಮೂರ್ನುಡಿಗಳಸ್ಸೀಯೆ
ಕಂಕಣಂ ಮಾನವಿಹುದೂ ॥

ಭಾ:–ಗುಂಗಿಹುಳು=ಭ್ರಮರ. ಪುದುವಾಳ್ವ=ಸೊಗಸಾದ. ಪೊರ್ದಿದ=ಕೂಡಿದ. ಮದನಪಿತೃವೈರಿ=ಮನ್ಮಥನ ತಂದೆಯಾದ ಕೃಷ್ಣನ ಶತ್ರು, ಕಂಸ. ಈ ಪದ್ಯದ ಪೂರ್ವಾರ್ಧದಲ್ಲಿರುವ ಮೂರು ಪ್ರಶ್ನೆಗಳಿಗೆ ಕ್ರಮವಾಗಿ ದುಂಬಿ, ಕೆಲಂ, ಸಂಕ ಎಂದಿರುವ ಉತ್ತರಗಳನ್ನು ಹಿಂದುಮುಂದಾಗಿ ಓದಿದರೆ ಅಪರಾರ್ಧದ ಮೂರು ಪ್ರಶ್ನೆಗಳಿಗೆ ಕ್ರಮವಾಗಿ ಬಿಂದು, ಲಂಕೆ, ಕಂಸ ಎಂಬ ಉತ್ತರಗಳು ಆಗುವವು.

---

೬೮. ಮತ್ಕುಣ (ತಗಣೆ).

ಪೀರ್ವನಂ ನೆತ್ತರನದಲ್ಲ ರಕ್ಕಸ,ನೆಣಿಸೆ,
ಸೇರ್ವನೆಡೆಯಂ, ಸರ್ಪನಲ್ಲ, ಮರೆಯಿರುಳಿನೊಳ್
ಪಾರ್ವನಂ, ಭೂತನಲ್ತು,ಗಳೀ ಜನರ ಕಣ್ಮರೆಯುಪ್ಪ,
ಸಿದ್ಧನಲ್ತು ॥
ಪಾರ್ವನಂ ವೇಗದಿಂ, ಹಯನಲ್ಲ, ಜನರ ಬೆ
ನ್ನೇರ್ವನಂ, ಪಿಶುನನಲ್ಲಂ, ತೀಕ್ಷ್ಣ, ಕಣೆಯಲ್ಲ,
ಕೋರ್ವೆ ನಾನಿದಕುತ್ತರವ ಪೇಳ್ವರಾರವರ್ಪಂಡಿತ
ಮಾನ್ಯರವರೇ ॥

ಭಾ:–ಪೀರ್ವನಂ=ಹೀರುವವನು. ಜೆನ್ನೀರುವ=ಜೆನ್ನನ್ನು ಏರುವವ. ರಕ್ಕಸ=ರಾಕ್ಷಸ. ಎಣಿಸೆ=ಆಲೋಚಿಸಲು. ಅರೆಯಿರುಳು=ಅರ್ಧರಾತ್ರಿ. ಸಿದ್ಧ=ದೇವಯೋನಿಭೇದ. ಪಿಶುನ=ದುರ್ಜನ. ಕಣೆ=ಶರ. ಕೋರು=ಅಪೇಕ್ಷಿಸು. ಇಲ್ಲಿ ನೆತ್ತರನ್ನು ಹೀರುವುದೂ, ಎಡೆ

ಸೇರುವುದೂ, ಅರ್ಧರಾತ್ರಿ ಸಂಚಾರವೂ, ಅದೃಶ್ಯವಾಗುವುದೂ, ಅತಿವೇಗವೂ, ಜನರ ಬೆನ್ನೇರುವುದೂ, ತೀಕ್ಷ್ಣತೆಯೂ ಕ್ರಮವಾಗಿ ರಾಕ್ಷಸ, ಸರ್ಪ, ಭೂತ, ಸಿದ್ಧ, ಅಶ್ವ, ದುರ್ಜನ, ಶರಗಳ ಧರ್ಮ ವಾಗಿದ್ದರೂ ಇಲ್ಲಿ ವರ್ಣಿಸುವ ಪ್ರಾಣಿಯು ಅವುಗಳಲ್ಲಿ ಒಂದೂ ಆಗಿ ರದೆ ಮತ್ತೆ ಅವುಗಳೆಲ್ಲವುಗಳ ಧರ್ಮವನ್ನು ತಾನೊಂದೇ ಪಡೆದಿರು ವುದು. ಆದುದರಿಂದ ಅಂತಹ ಪ್ರಾಣಿ ಯಾವುದೆಂಬ ಪ್ರಶ್ನೆಗೆ ಅವ ಕಾಶವು. ಅದೇ ತಗಣೆ.

---

೬೯. ಕಲಿಯುಗದ ಕೃಪಣ ದಾತಾರನು.

ದೂರದಲಿ ಬರುವ ಬೇಡುವನ ಕಂಡಾಗಲೇ
ಮೋರೆಗೆಟ್ಟು ವಿರೂಪಾಕ್ಷನಾದಂ ಧನಿಯು
ಸಾರೆ ಸನಿಯುವ ಯಾಚಕನು ವಿರೋಚನನಾದ ಕೂಡೆ
ನರಸಿಂಹನಾದಂ ॥
ಸೇರಿ ಮಾತಾಡೆ ತಾಂ ವಕ್ರತುಂಡನುಮಾದ
ಕೋರಿಕೆಯ ಪೇಳೆ, ಯಾಚಕನ ಪರ್ಣಾತ್ಮದಾ
ತಾರನಾದುತ್ತೈದುದೇವನಪ್ಪಂ ದನಿಯು ಬೇಡಲೀ
ಯುಗದಿ ಬಡವಂ ॥

ಭಾ:—ವಿರೂಪಾಕ್ಷಂ=ವಿಕಾರವಾದ ಕಣ್ಣುಗಳುಳ್ಳವನು. ತಿರುಕ ನನ್ನು ನೋಡಿದರೆ ಧನಿಕನ ಕಣ್ಣುಗಳು ವಿಕಾರವಾದವು ಎಂಬ ಭಾವವು. ಈಶ್ವರನಾದನು ಎಂಬುದು ಅರ್ಥಾಂತರ. ಸನಿಯು= ಸಮೀಪ. ವಿರೋಚನ=ಮನಸ್ಸಿಗೆ ಇಷ್ಟವಿಲ್ಲದವ. ಅರ್ಥಾಂತರ ಬಲಿಚಕ್ರವರ್ತಿಯ ತಂದೆ. ನರಸಿಂಹ=ರೇಗಿದವನು. ಅರ್ಥಾಂತರ ನರಸಿಂಹದೇವರು. ವಕ್ರತುಂಡ=ತಿರುಕನು ಮಾತಾಡುವುದು ಇಷ್ಟ ವಿಲ್ಲದೆ ಮುಖ ಮುರುಟಿದವನು. ಅರ್ಥಾಂತರ ಗಣಪತಿಯು. ಕೋರಿಕೆ=ಬಯಕೆ. ಅಪರ್ಣಾತ್ಮ=ಎಲೆಯ ಚೂರೂ ಇಲ್ಲದವ,

ಯಾಚಕನು ಬೇಡಲು, ಧನಿಯು ಅವನಿಗೆ ಕಸಕಡ್ಡಿಯು ಚೂರನ್ನೂ ಕೊಡಲು ಇಷ್ಟವಿಲ್ಲದವನಾದನೆಂದು ಭಾವವು, ದುರ್ಗಾರೂಪಿಯಾದ ನೆಂಬುದು ಅರ್ಥಾಂತರ. "ಅಪರ್ಣಾ ಪಾರ್ವತೀ ದುರ್ಗಾ."

ಅ:–ವಿರೂಪಾಕ್ಷ, ವಿರೋಚನನಾದನೆಂಬಲ್ಲಿ ವಿರೋಧಾಭಾಸವು ಇಲ್ಲಿ ಎರಡರ್ಥವಿರುವುದರಿಂದ ಶ್ಲೇಷಾಲಂಕಾರವು. ಇವುಗಳಿಗೆ ಅಂಗಾಂಗಿಭಾವ ಸಂಕರವು. ಈ ಅಲಂಕಾರದಿಂದ ದಾನಕೊಡುವವನಿಗೆ ಇರಬಾರದ ದುರ್ಗುಣಗಳೆಲ್ಲ ಇವನಲ್ಲಿರುವುವೆಂದು ಅಲಂಕಾರದಿಂದ ವಸ್ತುಧ್ವನಿಯು.

---

೨೦. ಕವಿಗಳ ಸಾಮ್ರಾಜ್ಯವು.

ವಿಧಿನಿಯಮವಿರದೆ,ಯನವರತದಾಹ್ಲಾದದಿಂ
ಮುದವಾಂತು ಪರರಿಂಗೆ ತಾಗಿ ಬಾಗಿರದೆ. ಪೇಣ್
ಪದುಳದಿಂ ನವರಸದೆ ಮೆರೆವ ನವನಿರ್ಮಿತಿಯ ಗೈವ
ಕವಿಸೃಷ್ಟಿ ಕಂಡೂ ॥

ಪದುಮದಣುಗನ ಸೃಷ್ಟಿಯೊಳ್ಪೆಸರ್ವಡೆದಿರ್ಪ
ಸೊದೆಯು ನಾಣ್ಚುತ್ತೆ ಸಗ್ಗವನೇರ್ದುದೈ ದ್ರಾಕ್ಷೆ
ಯದು ಮೊಗಂ ಮುರುಟಿಸಲ್ ಕಲ್ಗಟ್ಟಿತೈ ಸಕ್ಕರೆಯು
ಮೇನೊ! ಚಿತ್ರಮಿದರೊಳ್ ॥

ಭಾ:–ವಿಧಿನಿಯಮ=ಅದೃಷ್ಟನಿಯಮ. ಇರದೆ=ಇಲ್ಲದೆ. ಅದೃಷ್ಟದ ಮಾತು ಬ್ರಹ್ಮಸೃಷ್ಟಿಯಲ್ಲಲ್ಲದೆ ಕಾವ್ಯನಿರ್ಮಾಣದಲ್ಲಿಲ್ಲವೆಂದರ್ಥವು. ಅನವರತದ=ನಿರಂತರವಾದ. ಆಹ್ಲಾದದಿಂ=ನಲ್ಮೆಯಿಂದ. ಬ್ರಹ್ಮಸೃಷ್ಟಿಯಲ್ಲಿ ಸುಖದುಃಖಗಳು ಮಿಶ್ರವಾಗಿರುವುದರಿಂದ ನಿರಂತರಾಹ್ಲಾದವು ದುರ್ಘಟವು. ಕಾವ್ಯವಾದರೂ ಸದಾ ಸಂತೋಷಜನಕವಾಗಿರುವುದು. ಮುದವಾಂತು=ಸಂತೋಷಪಡೆದು. ಪರರಿಂಗೆ ತಾಗಿ ಬಾಗಿರದೆ=ಪರರಿಗೆ ಅಧೀನವಾಗದೆ ಬ್ರಹ್ಮಸೃಷ್ಟಿಯಲ್ಲಿ ಹೆಂಡತಿ ಗಂಡನಿಗೂ, ಮಗನು ತಂದೆಗೂ, ಭೃತ್ಯನು ಸ್ವಾಮಿಗೂ ಅಧೀನ

ವಾಗಿರುವುದರಿಂದ ಪರಾಧೀನತೆಯೇ ಹೆಚ್ಚು ಕಡೆಯಲ್ಲಿ ತೋರುವುದು ಕವಿಸೃಷ್ಟಿಯಾದರೂ ಯಾವ ಕಟ್ಟಿಗೂ ಸಿಕ್ಕಿಬೀಳದೆ ತೋರಿದುದನ್ನು ವರ್ಣಿಸಿಯೇ ಬಿಡುವುದು. ಪದುಳ=ಸಂತೋಷ. ನವರಸದೆ ಮೆರೆವ=ಶೃಂಗಾರ ಮುಂತಾದ ಒಂಭತ್ತು ರಸಗಳಿಂದ ಶೋಭಿಸುವ. ನವ ರಸಗಳು ಕವಿಸೃಷ್ಟಿಯಲ್ಲಿ ಅಲ್ಲದೆ ಏಕತ್ರವಾಗಿ ಲೋಕದಲ್ಲೆಲ್ಲೂ ಇಲ್ಲ ವೆಂದರ್ಥವು, ಲೋಕದಲ್ಲಿರುವುದು ಮಧುರಾದಿ ಷಡ್ರಸಮಾತ್ರವು. ನವನಿರ್ಮಿತಿಗೈವ=ಹೊಸಪರಿಯ ಸೃಷ್ಟಿಯನ್ನು ಮಾಡುವ. ಕವಿ ಸೃಷ್ಟಿಕಂಡು=ಕವಿಯ ಕಾವ್ಯನಿರ್ಮಾಣರೂಪವಾದ ಸೃಷ್ಟಿಯನ್ನು ನೋಡಿ. ಪದುಮದ ಅಣುಗನ=ಪದ್ಮೋದ್ಭವನಾದ ಬ್ರಹ್ಮನ. ಸೃಷ್ಟಿ ಯೊಳ್ ಪೆಸರ್ವಡೆದಿರ್ಪ=ಸೃಷ್ಟಿಯಲ್ಲಿ ಪ್ರಸಿದ್ಧವಾದ. ಸೊದೆಯು=ಅಮೃತವು. ಸಗ್ಗವನು=ಸ್ವರ್ಗವನ್ನು. ಏರ್ದುದೈ=ಏರಿತು. ದ್ರಾಕ್ಷೆ ಯದು ಮೊಗಂ ಮುರುಟಿಸಲ್=ದ್ರಾಕ್ಷೆಯು ಮುಖವನ್ನು ಮುರುಟಿಸಿ ಕೊಳ್ಳಲು. ಕಲ್ಗಟ್ಟಿತೈ=ಸಕ್ಕರೆಯು ಕಲ್ಲಾಯಿತಯ್ಯಾ.

ಅ:–ಇಲ್ಲಿ ಸುಧೆಯು ಸ್ವರ್ಗದಲ್ಲಿರುವುದೂ, ದ್ರಾಕ್ಷೆಯು ಮುದುರಿರುವುದೂ, ಸಕ್ಕರೆಯು ಕಲ್ಲಾಗಿರುವುದೂ ಸ್ವಾಭಾವಿಕವಾಗಿದ್ದು ಅವುಗಳಿಗೆ ಕವಿಸೃಷ್ಟಿಯನ್ನು ನೋಡಿ ನಾಚಿಕೆಯ ಸಂಬಂಧವು ಅಸಂಭವವಾದರೂ ಆ ಸಂಬಂಧವನ್ನು ವರ್ಣಿ ಸುವುದು ಸಂಬಂಧಾತಿಶಯೋಕ್ತ್ಯಲಂಕಾರವು.

---

೭೧. ಗುಣಧನಗಳು.

ಗುಣಯುಕ್ತ ಪಾತ್ರವಾದೊಡೆಯು ಕುಂಭವು ಕೂಪ
ಕಣಗಳಲಿ ತಾನಧೋಗತಿಗೆ ಪಕ್ಕಾಯ್ತಲೈ,
ಕ್ಷಣಕಾಲ ಬರಿದಾದ ಕತದಿಂದಲೇ ಜಗದಿ ಬರಿದಾಗಲಿರ
ಬಾರದೈ ॥
ಗುಣವಿಗದೆ ಪೋದೊಡಂ ಕುಂಭಮದು ತಾಂ ತುಂಬೆ
ಕ್ಷಣದೊಳಾ ಸ್ತ್ರೀಯರುಂ ಕತ್ತನಪ್ಪುತ್ತದರ

ಮಣಿದು ತಲೆಗೇರಿಸುತಲೊಯ್ವರೆಂದೊಡೆ ಜಗದಿ ಲೆಕ್ಕಿ
ಸಗುರ್ಣಣವನಾರುಂ ॥

ಭಾ:- ಈ ಪದ್ಯದಲ್ಲಿ ಕವಿಯು ಸುಗುಣಿಯೂ, ಯೋಗ್ಯ ಪಾತ್ರನೂ ಆದ ಪುರುಷನು ಧನಹೀನನಾದರೆ ಜನರ ಆದರಕ್ಕೆ ಗುರಿಯಾಗದೆ ಕೀಳುಸ್ಥಿತಿಯನ್ನು ಹೊಂದುವನೆಂದೂ, ಗುಣವಿಲ್ಲದವನಾದರೂ ಧನಿಕನಾಗಿದ್ದರೆ ಎಲ್ಲರಿಂದಲೂ ಮಾನ್ಯವಾಗಿ ಮೇಲ್ಮೆ ಪಡೆವನೆಂದೂ ದೃಷ್ಟಾಂತಮುಖದಿಂದ ಚಮತ್ಕಾರವಾಗಿ ವರ್ಣಿಸುವನು. ಮಡಿಕೆಯು ಗುಣಯುಕ್ತವಾದರೂ ಬರಿದಾದಾಗ ಅಧೋಗತಿಗೆ ಪಕ್ಕಾಗುವುದು. ಅದೇ ಕುಂಭವು ತುಂಬಿದಾಗ ಸ್ತ್ರೀಯರು ಅದರ ಕುತ್ತಿಗೆಯನ್ನಪ್ಪಿ, ತಲೆಯ ಮೇಲೆ ಏರಿಸಿಕೊಳ್ಳುವಂತಾಗುವುದು. ಅಂದರೆ ಬರಿದಾದ ಮಡಿಕೆಯನ್ನು ಹಗ್ಗಕಟ್ಟಿ, ಭಾವಿಗಿಳಿಸುವರೆಂದೂ ತುಂಬಿದ ಕೊಡವನ್ನು ಹಗ್ಗತೆಗೆದು ಕತ್ತಿನಲ್ಲಿ ಹಿಡಿದು ತಲೆಯ ಮೇಲೇರಿಸಿಕೊಂಡು ಹೋಗುವರೆಂದೂ ಅರ್ಥವು. ಗುಣ=ಗುಣ ಮತ್ತು ಹಗ್ಗ. ಪಾತ್ರ=ಯೋಗ್ಯ ಪುರುಷ ಮತ್ತು ತಂಬಿಗೆ ತಾಲಿನೊವಲಾದ ಪಾತ್ರೆಗಳು. ಕೂಪ=ಭಾವಿ. ಕಣ=ಚಿಕ್ಕಭಾವಿ. ಅಧೋಗತಿ=ಕೀಳುಸ್ಥಿತಿ ಮತ್ತು ಕೆಳಗೆ ಹೋಗುವಿಕೆ. ಅಪ್ಪು=ಆಲಿಂಗಿಸು. ಮಣಿ=ಬಗ್ಗು.

ಅ:- ವಿಶೇಷವಾಗಿ ಗುಣವುಳ್ಳ ಮಡಿಕೆಯನ್ನೂ, ನೀರ್ತುಂಬಿದ ಮಡಿಕೆಯನ್ನೂ, ಜನರು ಬಿದ್ದದ್ದನ್ನೂ ಆದರಿಸಿದ್ದನ್ನೂ 'ಬರಿದಾಗಲಿರಬಾರದೈ, ಲೆಕ್ಕಿಸಗುರ್ಣಣವನಾರುಂ' ಎಂಬ ಸಾಮಾನ್ಯ ವಾಕ್ಯಗಳಿಂದ ಸಾಧಿಸಿದ್ದುದರಿಂದ ಅರ್ಥಾಂತರನ್ಯಾಸವು. ಮತ್ತು ಈ ಮಡಿಕೆಯ ವರ್ಣನೆಯಿಂದ ಒಬ್ಬ ಗುಣವಂತನು ತನ್ನನ್ನು ಬಡತನದಲ್ಲಿ ಯಾರೂ ಲೆಕ್ಕಿಸದೆ ಹಣಕಾಸು ಗಳಿಸಿದೊಡನೆ ತನ್ನನ್ನು ಜನರು ಮಾನಿಸಿದ್ದನ್ನು ತಿಳಿಸುವುದಕ್ಕಾಗಿ ಉಪಮಾನವಾದ ಮಡಿಕೆಯನ್ನು ಬಣ್ಣಿಸಿದ್ದರಿಂದ ಅಪ್ರಸ್ತುತಪ್ರಶಂಸಾಲಂಕಾರವು. ಈ ಎರಡಲಂಕಾರಗಳಿಗೆ ಸಂಸೃಷ್ಟಿಯು.

೭೨. ಪರಮ ನೀಚಸ್ವಭಾವ.

ನೀನದಾರ್ಪೇಳು? ಖಲರಾಯ ನಾನಹೆ ಪಥಿಕ!
ಏನನೆಣಿಸೀ ಭಯಂಕರಗಹನದೊಳಗಿರುವೆ?
ನಾನು ಹೆಬ್ಬುಲಿಕರಡಿ ಮುಂತಾದ ಪ್ರಾಣಿಗಳ್ ತಿನ್ನ
ಲೆಂದೆಣಿಸಿ ನಿಂದೆಂ ॥
ಏನು ಬಂದುದು ಬನ್ನವಿಂತು ಗೆಯ್ಯಲ್ ನಿನಗೆ?
ಕಾನನದ ಮೃಗಗಳೆನ್ನಯ ಮಾಂಸದಾ ರುಚಿಯಿ
ನೀನಗರದವರನೆಲ್ಲರ ಕೊಂದು ತಿನುವುವೆಂಬೆಣಿಕೆಯಿಂ
ದಿಂತು ಗೆಯ್ವೆಂ ॥

ಭಾ:-ಖಲ=ದುಷ್ಟ. ಗಹನ=ಕಾಡು. ಬನ್ನ=ಕಷ್ಟ. ಇಲ್ಲಿ ಒಬ್ಬ ಪ್ರಯಾಣಿಕನು ಕಾಡಿನಲ್ಲಿ ಅವಿತುಕೊಂಡಿರುವ ದುಷ್ಟನೊಬ್ಬನನ್ನು ನೋಡಿ ನೀನಾರು? ಏಕೆ ಕಾಡಿನಲ್ಲಿ ಕುಳಿತಿರುವೆ? ಎಂದು ಪ್ರಶ್ನೆ ಮಾಡಿದಾಗ ನಾನೊಬ್ಬ ದುಷ್ಟನೆಂದೂ. ಈ ಕಾಡಿನ ಹಿಂಸ್ರ ಪ್ರಾಣಿಗಳು ತನ್ನನ್ನು ಕೊಂದು ತಿಂದು, ಆ ರುಚಿಯಿಂದ ಈ ನಗರದ ಜನರನ್ನೆಲ್ಲಾ ಕೊಂದು ತಿನ್ನಲೆಂಬ ಎಣಿಕೆಯಿಂದ ಕುಳಿತಿರುವೆನೆಂದೂ ಆ ದುಷ್ಟನು ಹೇಳುವನು. ಇದರಿಂದ ನೀಚರು ಪರರಿಗೆ ಕೇಡನ್ನುಂಟು ಮಾಡಲಿಕ್ಕೆ ತಮ್ಮ ಪ್ರಾಣವನ್ನಾದರೂ ತೊರೆದುಬಿಡುವುದಕ್ಕೆ ಹಿಂಜರಿಯರೆಂಬುದು ಸಿದ್ಧವಾಗುವುದು.

ಅ:-ಇಂತಹ ದುಷ್ಟನ ಸಂಬಂಧವು ಕಾಡಿನಲ್ಲಿ ಇಲ್ಲದಿದ್ದರೂ ಇರುತ್ತದೆ ಎಂದು ಬಣ್ಣಿಸಿದ್ದುದರಿಂದ ಸಂಬಂಧಾತಿಶಯೋಕ್ತ್ಯಲಂಕಾರವು.

---

೭೩. ಎ, ಬಿ, ಸಿ, ಡಿ,ಗಳು.

ವೇದಗಳು ಕಾಣವೈ ಸ್ಮೃತಿಗಳೆಲ್ಲಡಗಿದವೊ?
ಪೋದವೆತ್ತಲೊ? ಶಾಸ್ತ್ರಗಳ್ನ್ಯಾಯನೀತಿಗಳ್?

ಖೇದಗೊಂಡೋಡಿತಂದಿನ ನಡತೆ ಮತ್ತಿರ್ಪರೇಂ
ಪೆಣ್ಣ ದಾನಪಡೆಯಲ್ ॥
ವೇದಪಾದವನರಿತವರ ಕಾಣೆ ಎಫ್, ಎ, ಮುಂ
ತಾದ ಬೀ, ಎ; ಎಮ್, ಎ, ಬಿರುದ ಪಡೆದವರೆ, ಗತಿ
ಯಾದ ಕಾರಣ ಏ, ಬಿ, ಸೀ, ಡಿ ವರ್ಣಗಳ ಕಲ್ತವರಲ್ತೆ
ಮಾನ್ಯರೀಗಾ ॥

---

೭೪. ನೀಚ ದುರ್ಜನನು.

ಜಗದ ಜೀವನ ಹೀರೆ, ಮೆಲ್ಲಿತ್ತುದನಿಗಳಿಂ
ಸಿಗದಿದ್ದರುಂ ಬಾಗಿ, ತಲಕ್ಕೈದಿ, ಜೀವನವ
ನೊಗೆಯೆ ಕೈಸೇರ್ದುದನ್ನರಿತು ಬಿರುಸರದಿಂದ
ಲಿರದಾರ್ಭಟಿಂ ಗೊಳ್ಳುತಾ ॥
ನೊಗವ ತಿರುಹುತೆ ಏರಿ, ತಡೆಯದೈತರ್ಪ ಬಲು
ಬಗೆಯಲೇತಂಗಳನ್ನನುಕರಿಪ ದುರ್ಜನರು
ಬಗೆಯಲಾ ಏತಕ್ಕೆ ತಮ್ಮಂದಿರೋ? ಜಗದೊಳ
ಣ್ಣಂದಿರೋ? ಅರಿಯೆ ನಾಂ ॥

ಭಾ:-ಈ ಪದ್ಯದಲ್ಲಿ ಕವಿಯು ಏತಗಳ ದೃಷ್ಟಾಂತದಿಂದ ದುರ್ಜನರ ಸ್ವಭಾವವನ್ನು ವರ್ಣಿಸುವನು. ಏತಗಳು ಮೆತ್ತಗಾದ ಸ್ವರದಿಂದ ನೀರನ್ನು ಸೇದುವುದಕ್ಕಾಗಿ ಬಾಗಿ, ನೀರಿನ ತಳವನ್ನು ಸೇರಿ, ನೀರು ಸಿಕ್ಕಿದ ಬಳಿಕ ಬಿರುಸಾದ ಸ್ವರದಿಂದ ಆರ್ಭಟಿಸುತ್ತಾ ತಳದಿಂದ ಮುಖ ತಿರಿಗಿಸಿಕೊಂಡು ಮೇಲಕ್ಕೇರುವವು. ವಿಚಾರಿಸಿವರೆ ದುರ್ಜನರೂ ಹೀಗೆಯೇ ತಮ್ಮ ಜೀವನೋಪಾಯಕ್ಕಾಗಿ ಮೆದು ಮಾತುಗಳನ್ನಾಡಿಕೊಂಡು ಪರರ ಬಳಿ ಸಾರಿ, ನಮ್ರತೆ ತೋರಿಸುತ್ತಾ ಅವರ ಸರ್ವಸ್ವವನ್ನೂ ಅಪಹರಿಸಿ ಮತ್ತೆ ಬಿರುನುಡಿಗಳನ್ನುಸುರುತ್ತಾ ಮುಖ

ತಿರುಗಿಕೊಂಡು ಒಂದೆ ಹೋಗುವರೆಂದು ಭಾವವು. ಜೀವನ=ಪ್ರಾಣ ಧಾರಣೆ ಅಥವಾ ನೀರು. ಮೌಕ್ತಿಕಸ್ವನಿ=ಮುತ್ತಿನ ಸ್ವರ. ಬಿರು ಸರ=ಬಿರುಸಾದ ಸ್ವರ. ಐತರ್ಪ=ಬರುವ.

ಅ:-ಅನುಕರಿಪ ದುರ್ಜನರೆಂಬುವರಿಂದ ಯಾತನೇ ಉಪಮಾನವು. ದುರ್ಜನರು ಉಪಮೇಯವೆಂಬುದರಿಂದ ಉಪಮಾಲಂಕಾರವು. ಮತ್ತು ಅಣ್ಣಂ ದಿರೋ! ತಮ್ಮಂದಿರೋ! ಎಂದು ನಿಶ್ಚಯವಿಲ್ಲದಿರುವುದರಿಂದ ಸಂಶಯಾಲಂಕಾರವು. ಇವೆರಡಕ್ಕೆ ಸಂಸೃಷ್ಟಿಯು.

---

೭೫. ಯಮರಾಜ ಸೋದರನು.

ರೋಗಪೀಡಿತರನ್ನು ಸುಖಗೊಳಿಸಿ, ಬೆದರಿಕೆಯ
ನೀಗಿಸಲ್ಸದ್ವೈದ್ಯನಲ್ಲದಾರುಂ ನಿಲ್ಲ
ಈಗಲೀತನ ನೋಡೆ ಯಮರಾಜನಿಗು ಮಿಗಿಲ್
ಬರ್ಪನ್ನೈ ವೈದ್ಯನಿವನು ॥
ರೋಗಿಗಳ ಜೀವಮಾತ್ರಗಳನಪಹರಿಪ ಯಮ
ನಾಗಿಸಿಯು ಜೀವವನ್ನಪಹರಿಪ ಹಣವನ್ನು
ಬೇಗದಿಂದೀ ವೈದ್ಯನಣ್ಣನೈ ಯಮನಿಗಲ್ಲದ ತಮ್ಮನಲ್ಲ
ಕಾಣಲ್ ॥

ಭಾ:-ಸದ್ವೈದ್ಯ (ಸತ್+ವೈದ್ಯ)=ಒಳ್ಳೆಯ ವೈದ್ಯ. "ಯಮ ರಾಜನಿಗೂ ಮಿಗಿಲ್ ಬರ್ಪನ್ನೈ" ಅಂದರೆ ಕ್ರೂರತನದಲ್ಲಿ ಯಮರಾಜ ನಿಗಿಂತಲೂ ಹೆಚ್ಚಿನವನೆಂದು ಭಾವವು.

ಅ:-ಉಪಮಾನವಾಗಿರುವ ಯಮನಿಂದಲೂ ಉಪಮೇಯನಾದ ವೈದ್ಯನು ಹೆಚ್ಚಿನ ಕ್ರೂರನೆಂದು ಉಪಮೇಯದಲ್ಲಿ ಮೇಲ್ಮೆಯನ್ನು ಬಣ್ಣಿಸಿದ್ದುದರಿಂದ ವ್ಯತಿ ರೇಕಾಲಂಕಾರವು. ಮತ್ತು ವೈದ್ಯನತಿಕ್ರೂರನೆಂಬ ಕಥೆಯು ಸ್ಪಷ್ಟವಾಗುವುದರಿಂದ ಅಲಂಕಾರದಿಂದ ವಸ್ತುಧ್ವನಿಯು.

೭೬. ಅಳಿಯನು.

ಏಗಳುಂ ವಕ್ರನಾಗುತ್ತೆ ನಿರುತಂ ಕ್ರೂರ
ನಾಗಿ ದಿನ ದಿನ ಪೂಜೆಯುಂ ಗೊಂಡರುಂ ತೃಪ್ತ
ನಾಗದೆಯೆ ಏರಿ ಕನ್ಯಾರಾಶಿಯುಂ ಬಿಡದೆಯತ್ತೆ
ಮಾವಂದಿರನ್ನು ॥
ಆಗಳೀಗಳೆ ಎನದೆ ಏಗಳುಂ ಬಳಲಿಸುತೆ
ಭೋಗವನ್ನಿರದೆ ಗೊಂಬಾ ಅಳಿಯನಾರೆಯ್ದು
ತೂಗಲೊಂಭತ್ತು ಗ್ರಹರೊಡನೆ ಸರಿಬಾರನೈ ಪತ್ತನೆಯ
ಗ್ರಹನೆ ಪೊಸಬಂ ॥

ಭಾ:–ಇಲ್ಲಿ ಅಳಿಯನೆಂಬ ಗ್ರಹವು ಉಳಿದ ಗ್ರಹಗಳೊಡನೆ ಸರಿಹೋಲಿಸುವಾಗ ಸರಿಬಾರದಿರುವುದು ಹೇಗೆಂದರೆ· ನವಗ್ರಹರು ಯಾವಾಗಲೂ ಕ್ರೂರರಾಗಿರದೆ ನಿಜಸ್ಥಾನದಲ್ಲಿದ್ದಾಗ ಮಾತ್ರವೇ ಕ್ರೂರರಾಗಿದ್ದು, ಆ ಸಮಯದಲ್ಲಿ ಮಾತ್ರವೇ ಪೂಜೆಗೊಂಡು ತೃಪ್ತರಾಗಿ ಸರ್ತಿಯಂತೆ ಕನ್ಯಾರಾಶಿಗೆ ಬರುತ್ತಾ ಜಾತಕಿಯ ಗ್ರಹಸ್ಥಿತಿಯು ಕೆಟ್ಟಾಗ ಅವನನ್ನು ಬಳಲಿಸಿ ಭೋಗಗೊಳ್ಳುವರು. ಅಳಿಯನಾದರೂ ಸದಾ ವಕ್ರನೂ, ಕ್ರೂರನೂ ಆಗಿದ್ದು ದಿನ ದಿನದ ಪೂಜೆಯಿಂದಲೂ ತೃಪ್ತನಾಗದೆ ನಿರಂತರ ಕನ್ಯಾರಾಶಿಯನ್ನೇ ಏರಿಕೊಂಡಿದ್ದು ಸಮಯ ವಿಚಾರವಿಲ್ಲದೆ ಆತುರನಾದಾಗೆಲ್ಲಾ ಭೋಗವನ್ನು ಕಾಂಕ್ಷಿಸುತ್ತಿರುವನು. ಆದುದರಿಂದಲೇ ಈತನನ್ನು ದಶಮಗ್ರಹವನ್ನಾಗಿ ಹೇ-ಬೇಕೆಂದು ತಾತ್ಪರ್ಯವು. ಕನ್ಯಾರಾಶಿ=ಕನ್ಯೆಯೆಂಬ ರಾಶಿ. ಅಥವಾ ಕನ್ಯೆ, ಹೆಮ್ಮಕ್ಕಳು. ಆರೆಯ್ದು=ವಿಚಾರಿಸಿ. ತೂಗಲ್=ಹೋಲಿಸಲು. "ಬಳಲಿಸುತೆ ಭೋಗವಂ" ಎಂಬಲ್ಲಿ ಗ್ರಹಪಕ್ಷದಲ್ಲಿ ಬಳಲಿಸುತ್ತಾ ಭೋಗವನ್ನು ಎಂದೂ ಅಳಿಯನ ಪಕ್ಷದಲ್ಲಿ ಬಳಲಿ, ಸುತೆ ಭೋಗವಂ ಎಂದೂ ಅರ್ಥವನ್ನು ತಿಳಿಯಬೇಕು.

ಅ:-ಇಲ್ಲಿ ನಾನಾರ್ಥಶಬ್ದವಿರುವುದರಿಂದ ಶ್ಲೇಷವು. ಉಪಮಾನವಾದ ನವಗ್ರಹರಿಂದ ಉಪಮೇಯವಾಗಿರುವ ಅಳಿಯನಲ್ಲಿ ಮೇಲ್ಮೆ ಹೇಳಿದ್ದರಿಂದ ವ್ಯತಿರೇಕಾಲಂಕಾರವು. ಹತ್ತನೇ ಗ್ರಹವಾಗಿರಬೇಕೆಂದು ಉತ್ಪ್ರೇಕ್ಷಾಲಂಕಾರವು. ಅಂಗಾಂಗಿ ಭಾವ ಸಂಕರವು.

೨೨. ಕೊಕ್ಕರೆಯು.

ಮೀನರಾಶಿಯೊಳಿದ್ದು ಬಹುಕಾಲ ರಂಜಿಪೆನು
ನಾನು ಕಂದಿಸಿತಿಲ್ಲದಿರ್ಪೆ ಕುಂದಿಲ್ಲದನ
ದೇನೆನ್ನ ಸೊಬಗಹಹ ಎರಡು ಪಕ್ಷದಿ ಮೆರೆವೆ ಸೂರ್ಯನಿಂ
ದಂಜಲಾರೆಂ ।
ನಾನು ಪೋಗದ ದಿಕ್ಕು ದೇಶಗಳುಮಿರ್ಪುವೆ?
ನಾನಲ್ತೆ ದ್ವಿಜರಾಜನೆಂದು ಕೊಕ್ಕರೆ ಹಕ್ಕಿ
ತಾನು ಚಂದಿರನನ್ನು ದೂಷಿಪುದು ನಿತ್ಯದಲಿ ನೀಚರ್ಗೆ
ಮಾತು ಮೇಲ್ಪೈ ॥

ಭಾ:-ಇಲ್ಲಿ ಕೊಕ್ಕರೆಯು ತಾನೇ ದ್ವಿಜರಾಜನೆಂದು ಚಂದ್ರನನ್ನು ಪ್ರತಿಭಟಿಸುವುದು. ತಾನು ಚಂದ್ರನಂತೆ ಸ್ವಲ್ಪ ಕಾಲವೇ ಅಲ್ಲದೆ ಬಹುಕಾಲ ಮೀನರಾಶಿಯಲ್ಲಿದ್ದು, ಕಳಂಕವಿಲ್ಲದೆ ಸೊರಗದೆ ಎರಡೂ ಪಕ್ಷಗಳಲ್ಲಿ ರಾಜಿಸುತ್ತಿದ್ದು, ಸೂರ್ಯನಿಂದಂಜದೆ ಬಯಲಿನ ಕಡೆಯಲ್ಲಿ ಸಂಚರಿಸುತ್ತಿರುವುದರಿಂದಲೂ ಆ ಗುಣಗಳಾವುವೂ ಚಂದ್ರನಲ್ಲಿಲ್ಲದಿರುವುದರಿಂದಲೂ ಎಂದು ತಿಳಿಯಬೇಕು. ಮೀನರಾಶಿ=ಮೀನವೆಂಬ ರಾಶಿ, ಅಥವಾ ಮೀನುಗಳ ರಾಶಿ. ಕಂದು=ಕಳಂಕ. ಕುಂದಿಲ್ಲದನು=ಸೊರಗದಿರುವವನು. ಪಕ್ಷ=ಶುಕ್ಲ ಕೃಷ್ಣಪಕ್ಷಗಳು. ಅಥವಾ ರೆಕ್ಕೆ. ದ್ವಿಜರಾಜ=ನಕ್ಷತ್ರಗಳೊಡೆಯ. ಚಂದ್ರ. ಅಥವಾ ಪಕ್ಷಿಗಳೊಡೆಯ.

ಅ:-'ನೀಚರ್ಗೆ ಮಾತು ಮೇಲ್ಮೆ' ಯೆಂದು ಸಾಮಾನ್ಯದಿಂದ ವಿಶೇಷವಾದ ಕೊಕ್ಕರೆಯ ಮಾತನ್ನು ಸಾಧಿಸಿದ್ದರಿಂದ ಅರ್ಥಾಂತರನ್ಯಾಸಾಲಂಕಾರವು. ದ್ವಿಜರಾಜ, ಮೀನರಾಶಿ, ಪಕ್ಷ ಶಬ್ದಗಳಿಗೆರಡರ್ಥವಿರುವುದರಿಂದ ಶ್ಲೇಷಾಲಂಕಾರವು ಜನರಿಗೆ ಆನಂದವನ್ನೀಸಗುವ ಗುಣವಂತನನ್ನು ದೂಷಿಪ ದುರ್ಜನನ ವೃತ್ತಾಂತವನ್ನು ಮನಸ್ಸಿನಲ್ಲಿಟ್ಟು, ಕೊಕ್ಕರೆಯನ್ನು ಬಣ್ಣಿಸಿದ್ದರಿಂದ ಅಪ್ರಸ್ತುತಪ್ರಶಂಸಾಲಂಕಾರವು. ಆದಕ್ಕೂ ಅಪ್ರಸ್ತುತಪ್ರಶಂಸೆಗೂ ಸಂಸೃಷ್ಟಿಯು. ಶ್ಲೇಷಾರ್ಥಾಂತರನ್ಯಾಸಗಳಿಗೆ ಅಂಗಾಂಗಿಭಾವ ಸಂಕರವು.

೭೮. ಕೊಕ್ಕರೆಯು.

ಬಟ್ಟೆ ಬಿಟ್ಟಿಹೆ ನೀರ ನಡುವೆಯೇಕಕ್ಕಾಲಿನಿಂ
ನಿಟ್ಟಿಸಿರುಬಿಡದೆ ನಾನಲುಕದೆಯು, ಚಲಿಸದೆಯು
ಗಟ್ಟಿನಟ್ಟಿರೆಕಣ್ಣ ಮುಚ್ಚನಂತಾನಿಮಿಷಧ್ಯಾನಪರನಾಗಿ
ನಿರುತಂ ॥
ಮುಟ್ಟಿ, ಮೌನವ ಶುದ್ಧ ದ್ವಿಜವರ್ಯನಾಗಿ ಬಲು
ಕಷ್ಟವಂ ಸಹಿಸಿ ನಿಂದೆನು ರಾಜಹಂಸ ಪರಿ
ವೇಷ್ಟಿತಂ ನಾನಾಗೆ ಪರಮಹಂಸನೆಯಲ್ತೆ?ನುತ್ತೆ
ಕೊಕ್ಕರೆ ಮೆರೆವುದೂ ॥

ಭಾ:-ಇಲ್ಲಿ ಕೊಕ್ಕರೆಗೆ ಪರಮಹಂಸಯೋಗಿತ್ವವನ್ನು ಕೆಳಗೆ ವಿವರಿಸಿದಂತೆ ತಿಳಿಯತಕ್ಕುದು. ಬಟ್ಟೆ ಬಿಟ್ಟಿಹೆ=ಯೋಗಿ ಪಕ್ಷದಲ್ಲಿ ದಿಗಂಬರನಾಗಿರುವೆನು ಎಂದರ್ಥವು. ಕೊಕ್ಕರೆಯಾದರೂ ಜನರು ಅಡ್ಡಾಡುವ ದಾರಿ ಬಿಟ್ಟಿರುವುದೆಂದು ಅರ್ಥವು. ಅನಂತಾನಿಮಿಷ ಧ್ಯಾನಪರನು-ಅನಂತ=ಅಪರಿಮಿತವಾಗಿ. ಪೆಚ್ಚಾಗಿ. ಅನಿಮಿಷ=ದೇವರ. ಧ್ಯಾನಪರನು=ಧ್ಯಾನದಲ್ಲಿ ಆಸಕ್ತನು. ಯೋಗಿಯು ಯಾವಾಗಲೂ ದೇವರ ಧ್ಯಾನದಲ್ಲಿಯೇ ಮಗ್ನನು. ಮತ್ತು ಕೊಕ್ಕರೆಯು ಅನಂತ=ಅಪರಿಮಿತಗಳಾದ ಅನಿಮಿಷ=ಮೀನುಗಳ ಧ್ಯಾನಪರವು. ಕೊಕ್ಕರೆಯು ಯಾವಾಗಲೂ ಮೀನು ಹಿಡಿಯುವುದರಲ್ಲಿಯೇ ನಿರತ

ಸಾದಮುದಃ ಎಂಬ ಭಾವವು. ಶುದ್ಧ ದ್ವಿಜವರ್ಯನು=ಯೋಗಿಯು ಪವಿತ್ರ ಬ್ರಾಹ್ಮಣಶ್ರೇಷ್ಠನು. ಕೊಕ್ಕರೆಯು ಪಕ್ಷದಲ್ಲಿ ಅಶುದ್ಧ ದ್ವಿಜವರ್ಯಂ ಎಂದು ಸಂಧಿ ವಿಂಗಡಿಸಿ, ಅಪವಿತ್ರವಾದ ಪಕ್ಷಿಯೆಂದು ಅರ್ಥ ಮಾಡಬೇಕು. ಅಥವಾ ಶುದ್ಧ=ಬಿಳಿ. ದ್ವಿಜ=ಪಕ್ಷಿ. ವರ್ಯ=ಶ್ರೇಷ್ಠನು. ರಾಜಹಂಸಪರಿವೇಷ್ಟಿತಂ=ಯೋಗಿಯು ರಾಜರ್ಷಿಗಳಿಂದ ಸುತ್ತಲ್ಪಟ್ಟವನು. ಕೊಕ್ಕರೆಯು ಕೆರೆಯ ಬಳಿಯಲ್ಲಿ ಸುಳಿಯುವ ರಾಜಹಂಸಪಕ್ಷಿಗಳಿಂದ ಸುತ್ತುವರಿಯಲ್ಪಟ್ಟದ್ದು ಎಂದು ಅರ್ಥವು. ಅಲುಕು=ಅಲುಗು, ಹಂದಾಡು.

ಅ:—ನಾನಾರ್ಥಶಬ್ದಗಳಿಂದ ಶ್ಲೇಷಾಲಂಕಾರವು ಇದರಿಂದ ಕೊಕ್ಕರೆಯು ಮುನಿಯಂತಿರುವುದೆಂದು ಸ್ಪಷ್ಟವಾಗುವುದರಿಂದ ಅಲಂಕಾರದಿಂದ ಅಲಂಕಾರಧ್ವನಿ.

೭೯. ವಿರಹಿಣಿಯಾದ ಉತ್ಕಂಠಿತೆಯು.

ಓರ್ವಸುದತಿಯು ನಲ್ಲನಿಹ ಕಡೆಗೆ ಕರಡಿಕೆಯ
ನೋರ್ವತೊತ್ತಿನ ಕೈಯ್ಯೊಳಿತ್ತು ಕಳುಹುತ್ತಾಗ
ಗರ್ವದಿಂ ಬರೆದಳದರಲ್ಲಿ ನಾಗರಹಾವ ಮೇಲೆ ಮಾದೇವ
ನನ್ನೂ ॥
ಪಾರ್ವಹನುಮಂತನಂ ಮತ್ತೆ ಸಂಪಗೆಹೂವ
ತೋರ್ವರ್ಥವೇನಿದಕೆ? ಪೇಳೆ ಕವಿಶೇಖರರ
ನೋರ್ವಹಾರವ ಬೇಳ್ವನವನ ಮನದೆಣಿಕೆಯನು
ಸಲ್ಲಿಸಲಿ ಕನ್ನಡಿಗರೂ ॥

ಭಾ:—ನಲ್ಲ=ಪ್ರಿಯ. ತೊತ್ತು=ದಾಸಿ. ಹಾರವ=ಬ್ರಾಹ್ಮಣ. ಬೇಳ್ವಂ=ಬೇಡುವನು. ಇಲ್ಲಿ ಸುದತಿಯು ಪ್ರಿಯನ ಅಗಲಿಕೆಯ ವೇಳೆಯಲ್ಲಿ ಕರಡಿಗೆಯಂತೆ ಭದ್ರವಾದ ಮನೆಯಲ್ಲಿ ಹೊರ ಹೊರಡದೆ ಒಳಗೇ ಇದ್ದು, ವಿರಹವೇದನೆಯನ್ನು ತಾಳಲಾರದೆ ಉದ್ದೀಪಕವಾದ ಮಲಯಮಾರುತವು ತನ್ನನ್ನು ಸೋಕದಂತೆ ನುಂಗಿ ಬಿಡುವುದಕ್ಕೆ ಹಾವನ್ನು ಸಾಕುತ್ತಿರುವೆನೆಂದೂ. ಮನ್ಮಥನು ಬಾಣಬಿಟ್ಟು ಹಿಂದಿರು

ಗವಂತೆ ಮಹಾದೇವನನ್ನೂ ಹಾಗೂ ಮೂರ್ಛೆಬರುವ ಸಂಭವಪಿದ್ದಾ ಗಲೆಲ್ಲಾ ಸಂಜೀವನಾಹರಣದಿಂದ ಕಪಿಗಳನ್ನು ಮೂರ್ಛೆ ತಿಳಿಸಿದ ಹನುಮಂತನನ್ನೂ ಸ್ಮರಿಸುತ್ತಿರುವೆನೆಂದೂ, ಭ್ರಮರಗಳು ಬಂದು ಝೇಂಕರಿಸದಂತೆ ಸಂಪಗೆಯ ಹೂವನ್ನು ಇಟ್ಟಿರುವೆನೆಂದೂ, ಪ್ರಿಯ ನಾದ ನೀನು ಬಂದು ತನ್ನನ್ನು ಇಂತಹ ಆಪತ್ತಿನಿಂದ ಉದ್ಧರಿಸಬೇ ಕೆಂದೂ ಸೂಚಿಸುವಳು. ಮಲಯಾನಿಲ, ಭ್ರಮರ ಮುಂತಾದುವು ಗಳು ಉದ್ದೀಪಕಗಳಾಗಿ ವಿರಹಿಗಳಿಗೆ ಹೆಚ್ಚಿನ ಸಂತಾಪಗಳನ್ನುಂಟು ಮಾಡುವವೆಂದು ವರ್ಣಿಸುವುದು ಕವಿಸಮಯ.

ಅ:-ಇನ್ನೊಬ್ಬರ ಅಭಿಪ್ರಾಯ ತಿಳಿಯಲು ಸಮರ್ಥನಿಗೆ ತಿಳಿಯುವಂತೆ ತನ್ನ ಅಭಿಪ್ರಾಯವನ್ನು ಬೇರೆ ಜನರಿಗೆ ಅರಿಯದಂತೆ, ಗೂಢವಾಗಿ ಬರೆದಾಗಲೀ ಬೇರೆ ರೀತಿಯಿಂದಾಗಲೀ ಸೂಚಿಸುವುದರಿಂದ ಸೂಕ್ಷ್ಮಾಲಂಕಾರವು.

---

೮೦. ದೂಷಕ ಮೂಷಿಕಗಳು.

ಬಹುನಿಷ್ಕಪಟನಾರಿಯಾದೊಡೆಯುಮಿಲಿಯಲ್ಲ
ಬಹುಧಾನ್ಯಘಾತಕನುದಾದರೆಯುಮಿಲಿಯಲ್ಲ
ಬಹುರಂಧ್ರಗಳ ಪುಡುಕಿ ಪಿಡಿದರೆಯುಮಿಲಿಯಲ್ಲ
ಮತ್ತಾರು ಪೇಳು ಎನಲು ॥
ಬಹುಕಷ್ಟಗೊಂಡು ಚಿಂತಿಸಿ ಪೇಳ್ದನುತ್ತರವ
ನಹುದು ಮೂಷಕಧರ್ಮವುಳ್ಳವನು ಜಗದೊಳಗೆ
ಇಹನು ದೂಷಕನಲ್ಲ ದಾರುಮಿಲ್ಲೆಂದಿದಕೆ ಹೇಗರ್ಥ
ಹೊಂದಿಸುವುದೈ ॥

ಭಾ:-ಈ ಪದ್ಯದ ಮೊದಲ ಮೂರು ವಿಶೇಷಣಗಳನ್ನು ದೂಷ ಕನಲ್ಲಿಯೂ ಮೂಷಿಕದಲ್ಲಿಯೂ ಹೊಂದಿಸಬೇಕು. ಬಹು ನಿಷ್ಕಪಟ ನಾರಿ=ದೂಷಕನು ಬಹಳವಾಗಿ ಕಪಟವಿಲ್ಲದ ಸಜ್ಜನರಿಗೆ ಶತ್ರು. ಇಲಿಯು ಬಹುನಿಷ್ಕ=ಹೆಚ್ಚು ಬೆಲೆಯ. ಪಟ=ವಸ್ತ್ರಕ್ಕೆ ನಾರಿ. ಶತ್ರು.

ಬಹುಧಾನ್ಯಘಾತಕ=ದೂಷಕನು. ಬಹುಧಾ=ಬಹುವಿಧದಿಂದಲೂ ಅನ್ಯಘಾತಕ=ಪರರಿಗೆ ಹಿಂಸೆಮಾಡುವವನು. ಇಲಿಯಾದರೋ ಬಹು ಧಾನ್ಯ+ಘಾತಕ=ಹೆಚ್ಚು ಧಾನ್ಯಗಳಿಗೆ ಹಾನಿ ಕೊಡುವುದು. ದೂಷಕನು ಬಹು ರಂಧ್ರಗಳನ್ನು ಹುಡುಕಿ ಹಿಡಿವನು. ಅಂದರೆ ಪರರು ದೋಷದಲ್ಲಿ ಸಿಕ್ಕಿಬೀಳುವಂತೆ ಮಾಡುವ ಅನೇಕ ಸಂದರ್ಭವನ್ನು ಕಂಡುಹಿಡಿಯುವನು. ಇಲಿಯು ಅನೇಕ ಬಿಲಗಳನ್ನು ಕಂಡುಹಿಡಿಯುವುದು.

ಅ:—ಇದರಿಂದ ಇಲಿಯಂತೆ ದೂಷಕನೆಂದು ಉಪಮೆಯು ಸ್ಪಷ್ಟವಾಗುವುದರಿಂದ ಶ್ಲೇಷಾಲಂಕಾರವು.

---

೮೧. ಕನ್ನಡ ಚಮತ್ಕೃತಿ.

ಸರಸರಾಜನ ನರಸನೆಂಬರ್ಕೈ, ತುಂಬಿದುದ
ನರಮನೆಯುದೆಂಬರ್ಕೈ, ಕುಂದಿ ಕಂದುವ ಪೂವ
ನರೆ ಕುಂದದ ಪೂವಿದೆಂದರುಪುವರ್, ಕತ್ತೆಯನ್ನಿದಂ
ಹೇರೆಂಬರ್ಕೈ ।
ಮರನೊಂದ ಹತ್ತೆಂದು ಕಲ್ಮಣ್ಣಿಕೋಟೆಯುಂ
ಭರದೆ ಮುತ್ತೆಂದರುಹುವರ್ ಕನ್ನಡದೆಯುಮಮ
ನರರ ಪಾಡುವರೆಂಬರೀ ಭಾಷೆಯೇನೊಳ್ಪುವಡೆದಿರ್ಪು
ದಯ್ಯ ಜಗದೊಳ್ ॥

ಭಾ:—ಸರಸ=ಶೃಂಗಾರ, ವೀರ ಮುಂತಾದ ನವರಸಗಳಿಂದ ಕೂಡಿದವನು. ಅರಸ=ರಸಗಳಿಲ್ಲದವನು. ಇದು ಅರಸನಿಗೆ ರೂಢನಾಮವು. ತುಂಬಿದುದ=ಐಶ್ವರ್ಯಸಮೃದ್ಧವಾದ, ರಾಜನ ಮನೆಯನ್ನು. ಅರಮನೆ=ಅರ್ಧತುಂಬಿದ ಮನೆ, ಅರಸನ ಮನೆ. ಅರಮನೆಯೆಂಬುದು ಸಂಗತಾರ್ಥವು. ಕಂದಿ, ಕುಂದುವ=ಮುಸುಕಿ, ಬಾಡುವ. ಕುಂದದ ಪೂ=ಬಾಡದ ಹೂ. ಜಾಜಿಯ ಹೂವಿಗೆ ಕುಂದ

ವೆಂದು ಹೆಸರು. ಹೇರು=ಭಾರ, ಹೊರಿಸು. ಹತ್ತು=ಹತ್ತೆಂಬ ಸಂಖ್ಯೆ, ಅಥವಾ ಮೇಲೇರು. ಮುತ್ತು=ಮುಕ್ತಾಫಲ, ಅಥವಾ ಮುತ್ತಿಗೆಹಾಕು.

ಅ:-ಮೇಲೆ ಹೇಳಿದ ಶ್ಲಿಷ್ಟಶಬ್ದಗಳ ಮೊದಲರ್ಥವನ್ನು ತೆಗೆದುಕೊಂಡು ಭಾಷೆಗೆ, ತೋರುವಿಕೆಯಲ್ಲಿ ಅಸಂಗತಾರ್ಥವುಳ್ಳತನವನ್ನು ತೋರಿಸಿ ಅರ್ಥಾಂತರದಿಂದ ಒಳ್ಪನ್ನು ಉಪಪಾದಿಸತಕ್ಕುದು ವಿರೋಧಾಭಾಸಾಲಂಕಾರವು.

---

೮೨. ಗಜೇಂದ್ರಮೋಕ್ಷವು.

ವಿಧುವಾದ ಮಧುಕರಂ ಪಗೆತನದೆ ವನದೊಳಗೆ
ವದನದಿಂ ನುಂಗಿದಪಕಾರದಾ ದಂಪತಿಯ
ಪದೆದು ಪಾಲಿಸೆ ವಿಕಾರಂಗೊಳ್ಳದಿಹ ತಾಂ ವಿನಾಯಕಂ
ಕಡಲಣುಗಿಯಾ ॥
ಮುದದೆ ಮಕರವ ತರಿದು ದಂತಿಯುಂ ಬಿಡಿಸಿರ್ಪ
ಪದುಮೆಯಾ ನಾಯಕನ ಪೊಗಳಲ್ಕೆ ಮನೆಯೊಳಗೆ
ಕದನಮಿರದಾರ್ಗಮದು ಪಂಸಾರದಲಿ ಶಾಂತಿ ನೆಲೆಗೊಂಡು
ಸುಖಮಿರ್ಪುದೈ ॥

ಭಾ:-ಹಿಂದೆ ದುರ್ವಾಸಶಾಪದಿಂದ ಕಾಡಿನಲ್ಲಿ ಗಜೇಂದ್ರನಾಗಿ ಜನಿಸಿದ ಇಂದ್ರದ್ಯುಮ್ನರಾಜನು ಒಂದು ದಿನ ತನ್ನ ಆನೆಗಳ ಗುಂಪಿನೊಡನೆ ನೀರಾಟಕ್ಕಿಳಿಯಲು ಆ ಕೊಳದಲ್ಲಿದ್ದೊಂದು ಮೊಸಳೆಯು ಕಾಲು ಹಿಡಿದು ಎಳೆಯಲಾಗಿ ಎಷ್ಟಕ್ಕೂ ಬಿಡಿಸಿಕೊಳ್ಳಲಾರದ ಆ ಗಜೇಂದ್ರನು ಶ್ರೀಮನ್ನಾರಾಯಣನನ್ನು ಮೊರೆ ಇಟ್ಟನು. ಆ ಭಕ್ತವತ್ಸಲನಾದ ಪರಮಾತ್ಮನು ಚಕ್ರದಿಂದ ಮೊಸಳೆಯನ್ನು ತುಂಡಿಸಿ. ಗಜೇಂದ್ರನನ್ನು ಬಿಡಿಸಿದ ಕಥೆಯನ್ನು ಇಲ್ಲಿ ನೆನೆಪಿಸಿಕೊಳ್ಳತಕ್ಕದ್ದು. ವಿಧುವಾದ=ಧುಕಾರವಿಲ್ಲದ (ವಿಜನ, ವಿದೇಶ ಎಂಬಂತೆ). ಮಧುಕರಂ ಇಲ್ಲಿ ಧುಕಾರವನ್ನು ಕಳೆದರೆ, ಮಕರಂ=ಮೊಸಳೆಯು. ಪಗೆತನದೆ=

ಸ್ಥೈರದಿಂದ. ವನದೊಳಗೆ=ನೀರಿನಲ್ಲಿ. ವದನದಿಂ=ಬಾಯಿಂದ. ನುಂಗಿದ=ಕಚ್ಚಿಹಿಡಿದ. ಅಪಕಾರದ=ಪಕಾರವಿಲ್ಲದ. ಆ ದಂಪತಿ ಇಲ್ಲಿ ಪಕಾರ ಕಳೆದರೆ ಆ ದಂತಿ=ಆ ಆನೆಯನ್ನು. ಪಾಲಿಸೆ=ಕಾಪಾಡಲು. ಕಡಲಣುಗಿಯು=ಕ್ಷೀರಸಾಗರಪುತ್ರಿಯಾದ ಲಕ್ಷ್ಮಿಯು. ಪಿಕಾರಂಗೊಳ್ಳದಿಹ=ಪಿಕಾರವಿಲ್ಲದ. ಪಿನಾಯಕಂ, ಇಲ್ಲಿ ಪಿ ಕಳೆದರೆ ನಾಯಕಂ=ರಮಣನು. ಮುದದೆ=ಸಂತೋಷದಿಂದ. ಮಕರವನ್ನು ಛೇದಿಸಿ ದಂತಿಯನ್ನು ಬಿಡಿಸಿದ ಆ ಲಕ್ಷ್ಮೀವಲ್ಲಭನಾದ ದೇವರನು ಸ್ಮರಿಸಿದರೆ ಗೃಹಕಲಹವು ದೂರವಾಗಿ ಮನೆಯಲ್ಲಿ ಶಾಂತಿ ನೆಲೆಗೊಳ್ಳುವುದೆಂದು ಭಾವವು.

ಅ:-ಇಲ್ಲಿ ಪ್ರಕೃತಾಪ್ರಕೃತಾನೇಕವಿಷಯವಾದ ಸಭಂಗ ಶ್ಲೇಷಾಲಂಕಾರವು.

---

೮೪. ಈಶ ವ್ಯಾಸರು.

ತಲೆಯೊಳಿಹ ಬಾಂಬೊಜ್ಜ ಮೀನೆರೆಯರಿಂ ಹರಂ
ಸಲೆ ನೆಗಡಿಗೊಳೆ ಬೂದಿಯಂ ಮೈಗೆ ಪೂಸಿಯುಂ
ಫಲವಿಲ್ಲದಿರೆ ನಸ್ಯದಿಂ ಶೈತ್ಯವಾರಲದ ಮೆಚ್ಚಿ
ಕೈಯ್ಯಾಂತು ತೋರ್ಪಂ ।
ಮಲೆಯಲಿಹ ವ್ಯಾಸರ್ಷಿಯುಂ ನಸ್ಯವಂ ಕೈಗೆ
ತಳೆದು ಶಿಷ್ಯಗ್ರದಂ ತೋರ್ದರುಪುದಂ ನೋಡೆ
ಕಳೆವುದಜ್ಞಾನ, ಶೈತ್ಯಗಳಸಿದು ಶಿಷ್ಯರೇ! ಎಂಬನ್ತೆ
ನಸ್ಯವೇ ಮೇಲ್ ॥

ಭಾ:-ಬಾಂಬೊಜ್ಜ ಮೀನೆರೆಯರ್=ಗಂಗಾಚಂದ್ರರು. ನೆಗಡಿಗೊಳ್=ಶೈತ್ಯವನ್ನು ಹೊಂದು. ಕೈಯ್ಯಾಂತು (ಕೈಯ್ಯಲ್ಲಿ+ಆಂತು)=ಕೈಯ್ಯಲ್ಲಿ ಧರಿಸಿ. ಮಲೆ=ಕಾಡು. ತಳೆ=ಹೊಂದು. ಅರುಪ್ಪುದು=ಹೇಳುವುದು. ಇಲ್ಲಿ ಈಶ್ವರ, ವ್ಯಾಸರ್ಷಿಗಳ ಜ್ಞಾನಮುದ್ರೆಯನ್ನು

ತೋರಿಸುವ ಅಂಗುಷ್ಠ ತರ್ಜನಿ ಬೆರಳುಗಳ ಸಂಯೋಗವನ್ನು ಈಶ್ವರನು ತಲೆಯಲ್ಲಿ ಗಂಗಾ ಚಂದ್ರರನ್ನು ಧರಿಸಿ. ನೆಗಡಿಯಾಗುವುದರ ಪರಿಹಾರಕ್ಕಾಗಿ ನಸ್ಯವನ್ನು ಹಿಡಿದಿರುವನೆಂದೂ, ವ್ಯಾಸಮಹರ್ಷಿಯು ಮಳೆಯಲ್ಲಿ ಶೈತ್ಯನಿವಾರಣೆಗಾಗಿ ಕೈಯ್ಯಲ್ಲಿ ನಸ್ಯ ಹಿಡಿದು ಶಿಷ್ಯರಿಗೆ ಇದು ಶೀತಹಾರಿಯೆಂದು ಉಪದೇಶಿಸುತ್ತಿರುವನೆಂದೂ ವರ್ಣಿಸಿದೆ. (ಜ್ಞಾನಮುದ್ರೆಯೆಂದ) ಅಂಗುಷ್ಠ ತರ್ಜನಿಗಳ ಸಂಯೋಗದಿಂದ ಶಿಷ್ಯರಿಗೆ ತತ್ವೋಪದೇಶ ಮಾಡುವುದನ್ನೂ, ಅದರಿಂದಲೇ ನಸ್ಯ ಹಿಡಿದುಕೊಳ್ಳುವುದನ್ನೂ ನೆನೆಸಿನಲ್ಲಿಡಬೇಕು.

ಅ:–ಇಲ್ಲಿ ಉಪಮಾನೋಪಮೇಯ ವಾಕ್ಯಗಳಲ್ಲಿರುವ ಧರ್ಮವನ್ನು ಪ್ರತ್ಯೇಕ ಉಪಮಾನೋಪಮೇಯ ವಾಕ್ಯಗಳಲ್ಲಿ ಹೇಳಿದರೆ ಪ್ರತಿವಸ್ತೂಪಮೆಯು. ಇಲ್ಲಿ ಈಶನು ಉಪಮಾನ, ವ್ಯಾಸನು ಉಪಮೇಯ 'ನಸ್ಯ ತೋರ್ಪಂ ತೋರ್ದರುವುದಂ' ಎಂದು ಸಾಮಾನ್ಯ ಧರ್ಮವನ್ನು ಪ್ರತ್ಯೇಕವಾಗಿ ಹೇಳಿದೆ.

೮೪. ಹೊಟ್ಟೆ ಮತ್ತು ಬೇರೆ ಅಂಗಗಳು.

ಓತು ಹೊಟ್ಟೆಯ ಕತದಿ ಬೇಡಿ, ಕಾಡುತೆ ಜನರ,
ಸೋತೆ ನಾನೆಸಗಿ ಕಜ್ಜಗಳ ತುತ್ತನು ಕೊಟ್ಟು
ಸೋತೆ ನಾ ನೋಡಿಯಡಿಯಾಡಿ ನಾನಗಿದಳಲ್ದಿನದು ಕೂತು
ತಿಂಬುದೆಂದಾ ॥

ಮಾತು ಕೈಕಾಲ್ಬಾಯ್ಗಳೊಂದಾಗಿ ಪೊಡೆಯುಮೋ
ಲಾಂತು ಪುರುಡಂ ದುಡಿಯದಿರೆ ಮೌನಮುದ್ರೆಯಿಂ
ದೇತರಂ ಬಳಲ್ದುವೋ! ಅಂತುಟಪ್ಪಪ್ರಧಾನರ್ಗಳೊ
ಳ್ಪುರುಡನಾಂಪರ್ ॥

ಭಾ:–ಓತು = ಪ್ರೀತಿಸಿ. ಕತ = ಕಾರಣ. ಎಸಗು = ಮಾಡು. ಕಜ್ಜ = ಕಾರ್ಯ. ಅಡಿಯಾಡು = ನಡೆ, ಸಂಚರಿಸು. ಅಳಲ್ದೆಂ = ಆಯಾಸಗೊಂಡೆನು. ಪೊಡೆ=ಹೊಟ್ಟೆ. ಪುರುಡು=ಮತ್ಸರ. ದುಡಿ=

ಕೆಲಸವಾಡು. ಮೌನಮುದ್ರೆ=ಮಾತಿಲ್ಲದೆ ಇರುವ ಸ್ಥಿತಿ. ಜನರನ್ನು ಕಾಡಿ ಬೇಡುವ ಮಾತೂ, ಕೆಲಸಮಾಡುವ ಕೈಯ್ಯೂ, ನಡೆಯುವ ಕಾಲೂ, ಜಗಿಯುವ ಬಾಯೂ, ಇವುಗಳೊಂದಾಗಿ ನಮ್ಮ ಈ ಕೆಲಸಗಳೆಲ್ಲಾ ಕೇವಲ ಹೊಟ್ಟೆಗಾಗಿ. ಆ ಹೊಟ್ಟೆಯಾದರೂ ಯಾವ ಕೆಲಸವೂ ಇಲ್ಲದೆ ತಿನ್ನುವುದಲ್ಲಾ ಎಂದು ಮತ್ಸರದಿಂದ ಯಾವ ಕೆಲಸವನ್ನೂ ಮಾಡದಿರಲು ಕೊನೆಗೆ ಹೊಟ್ಟೆಗಿಲ್ಲದೆ ತಮ್ಮ ಪ್ರಾಣವೇ ಕುಂದಿಬೆಂಡಾದುವು. ಆದುದರಿಂದ ತಮಗೆ ಮೇಲಾದವರಲ್ಲಿ ಹೊಟ್ಟೆಕಿಚ್ಚು ಮಾಡುವವರ ಗತಿಯೂ ಹೀಗಾಗುವುದೆಂಬ ಭಾವವು.

ಅ:—ಇಲ್ಲಿ ಅಪ್ರಸ್ತುತವಾಗಿ ವರ್ಣಿಸುವ ಹೊಟ್ಟೆ ನಾಲಗೆ ಮೊದಲಾದ ಅವಯವಗಳ ವೃತ್ತಾಂತದಿಂದ ಒಂದು ಗೃಹಕೃತ್ಯದಲ್ಲಿ ಯಜಮಾನನ ಮೇಲಿನ ಬೇಸರದಿಂದ ಗೆಯ್ಯದೆ ಸುಮ್ಮಗಿದ್ದು, ಅವರಿಂದ ಕೊನೆಗೆ ತಾವೇ ದುಃಖಪಟ್ಟ ಮನೆಮಂದಿಗಳ ಪ್ರಸ್ತುತ ವೃತ್ತಾಂತವು ತಿಳಿಯುಬರುವುದರಿಂದ ಅಪ್ರಸ್ತುತಪ್ರಶಂಸಾಲಂಕಾರವು.

೬೫. ಹಲ್ಲು-ನಾಲಗೆಗಳು.

ನಾನಲ್ಲದೊಡೆ ಪಲ್ಲೆ! ನೀಂ ತಿಂಬುದೇನೆಂತು?
ನಾನಿರದೆ ಪುರುಳದೇಂ ನಾಲಿಗೆಯೆ! ನಿನಗೆ ಪೇ
ಳೆಸೆ ಅಕ್ಕರ ಮಂತ್ರಬಲದಿಂದೆ ಮೆರೆವೆನ್ನೆ ಪ್ರಾಣಕಂ
ಜೀವಮಾಗೆ ॥
ಮನನೆಂಬೆಯ್ನಾಲಿಗೆಯೆ! (ವಜ್ರಪಂಜರಂ) ಜಗಿಯದುಳಿಸಿದಂ
ನಾನಲ್ತೆ ನಿನಗುಣಲ್ದಾತಾರನಪ್ಪೆ ನಿ
ನ್ನೇನುಸುರ್ದಪೆಯ್ ಪಲ್ಲೆ! ಮುಚ್ಚು ಬಾಯ್ಯೆರಳ್ಮಾತ ನಾನಾಡ
ಲೆಲ್ಲಿರ್ಪೆ ನೀಂ ॥

ಭಾ:—ಪುರುಳು=(ಚಂದ) ಅರ್ಥ. ಪ್ರಾಣಕಂ=ಪ್ರಾಣವಾಯುವಿಗೂ. ಉಸುರ್=ಹೇಳು. ಜೀವಮಾಗಿ (ಜೀವಂ-ಆಗಿ)=ಜೀವನ

ಪ್ರದನಾಗಿ. ಇಲ್ಲಿ ಹಲ್ಲು ನಾಲಗೆಗಳ ಸಂವಾದವು ಮೊದಲು ನಾಲಗೆಯ ಪ್ರಶ್ನೆಗಳಿಂದ ತೊಡಗುವುದು. ಆಹಾರವನ್ನು ಮೊದಲು ನಾಲಗೆಯೇ ಎತ್ತಿಕೊಂಡು, ಹಲ್ಲಿಗೆ ಕಚ್ಚ ಕೊಡುವುದರಿಂದ ಹಲ್ಲಿಗೆ ಋಣಬಡಿಸುವವನು ನಾನೇ ಎಂದು ನಾಲಗೆಯ ಅಭಿಪ್ರಾಯ. ಹಲ್ಲು ಕಚ್ಚಿದ ಹೊರತು ನಾಲಗೆಗೆ ನುಂಗುವುದು ಅರಿದಾದುದರಿಂದ ನಾನಿಲ್ಲದೆ ನಿನಗೆ ಪುರುಳಿಲ್ಲವೆಂದು ಹಲ್ಲಿನ ಅಭಿಪ್ರಾಯ. ಮತ್ತು ಅಕ್ಷರ ಮಂತ್ರಗಳ ಬಲವು ತನಗಿರುವುದರಿಂದ ನಾನೇ ಶ್ರೇಷ್ಠನೆಂದು ತಿರಿಗಿ ನಾಲಗೆಯ ಅಭಿಪ್ರಾಯ. ಕಚ್ಚಲು ತನ್ನ ವಶ ಬಂದ ಆಹಾರವನ್ನು ಮರಳಿ ಕೊಡುವುದು ತನ್ನ ಇಷ್ಟವಾದುದರಿಂದ ನಿನಗೆ ಅನ್ನದಾತೃ ತಾನೇ ಎಂದು ತಿರಿಗಿ ಹಲ್ಲಿನ ಅಭಿಪ್ರಾಯ. ನಾಲಗೆಯಿಂದ ಕೆಟ್ಟ ಮಾತುಗಳು ಹೊರಟಾಗ ಪೆಟ್ಟು ಹಲ್ಲಿಗೆ ಬಿದ್ದು ಹಲ್ಲೇ ಉದುರುವ ಸಂಭವವಿರುವುದರಿಂದ ಅದರ ಇರವೇ ತನ್ನ ಆಧೀನವೆಂದು ನಾಲಗೆಯ ಮಾತಿನ ಅಭಿಪ್ರಾಯವು.

---

೮೬. ಗ್ರಂಥನಾಮವು.

ಅ	ಸು	ಗೆ	ಮರವದಾವುದು ಶೋಕವಿಲ್ಲದುದು? ಶುದ್ಧಳಾರ್?
ಗ	ರ	ತಿ	ಆರುಹಿಂಬಿಗೇಂ ಪೆಸರು? ರಕ್ಷಣೆಗೆ ಪೆಸರೇನು?
ಆ	ಸ	ರೆ	ವರುಷಸಂದಾತಗೇಂ ಪೆಸರು? ಕೈಯ್ಯಲಿ ಬಾಜಿ
ಸಾ	ಕ	ಣೆ	ಸುವ ವಾದ್ಯಕೇನು ಪೆಸರೈ? ॥
ಸ್ಥ	ವಿ	ರ	ತಿರೆಯ ಜನರಿಗೆ ಬದುಕೆ ಬೇಕೇನು? ಕೇಳಲಿಕೆ
ಸ	ತಾ	ರಿ	ನಿರುತವೆಂತಿಹಮಾತು ಸೊಗಸುವುದು? ಜನಮನಕೆ
ಆ	ಹಾ	ರ	ಒರೆಯಲಿದಕುತ್ತರವ ಮಧ್ಯಮಾಕ್ಷರಮುಪ್ಪುದೀ
ಸು	ರ	ಸ	ಗ್ರಂಥನಾಮವಯ್ಯಾ ॥

ಭಾ:– ಇಂಬು = ಆಶ್ರಯ. ತಿರೆ = ಭೂಮಿ. ಬದುಕೆ = ಬದುಕಲಿಕ್ಕೆ. ಒರೆ = ಹೇಳು. ಒರೆಯಲಿದಕುತ್ತರವ = ಈ ಹಿಂದೆ ಕೇಳಿದ

ಪ್ರಶ್ನೆಗಳಿಗೆ ಉತ್ತರ ಹೇಳಲು. ಮಧ್ಯಮಾಕ್ಷರಂ=ಆ ಉತ್ತರಗಳ ನಡುವಿನ ಅಕ್ಷರಗಳನ್ನು ಕೂಡಿಸಿ ಉಂಟಾದ ಪದವು. ಅಸುಗೆ=ಅಶೋಕಮರ. ಷಪಿರ=ಮುದುಪ. ಸುರಸ=ರಸವತ್ತಾದುದು.

---

೮೭. ಕವಿನಾಮವು (ಕ್ಷಮಾಭ್ಯರ್ಥನೆಯು).

ನಿತ್ಯದಲಿ ಭಜಕರನು ಕಾವನಲ್ಲವೆ ನೀನು
ರಾವಣಾಂತಕ! ಎನ್ನ ಸೊಲ್ಲಿನೊಳು ಬೆರೆತಿರುವ
ಬಹುತೆರದ ತೊಡಕುಗಳನರ್ಥಕ್ಕೆ ಕುಂದು ಬಾರದ ತೆರದಿ
ಪರಿಹರಿಸು, ಬ ॥
ಲ್ಲಾಳಪೆಸರಿಂದ ಪಂಡಿತನು ನಾನಹೆನು ಪೇ
ಳಲದೇನನೊಳ್ನುಡಿಗಳನು ಜೋಡಿಸಲು ತಿಳಿಯೆ
ನಾಂ ಬುಧರೆ! ಸಂತತಂ ಮನ್ನಿಸಿರಿ "ಮೊದಲನೆಯ ತಪ್ಪೆ"
ನುತಲೀ ಬಾಲನಾ ॥

ಭಾ:–ಈ ಪದ್ಯದ ಪ್ರತಿ ಚರಣದ ಒಂದನೆಯ ಮತ್ತು ಏಳನೆಯ ಅಕ್ಷರಗಳನ್ನು ಓದಿದರೆ ಈ ಕವಿಯ ಹೆಸರು ಬರುವುದೆಂದು ತಿಳಿಯ ಬೇಕು. ಬಲ್ಲಾಳನೆಂಬ ಹೆಸರಿನಿಂದ ಮಾತ್ರ ಪಂಡಿತನು. ಬಲ್ಲಾಳ ಬಲ್ಲ+ಆಳ್=ಬಲ್ಲಾಳ್.

---

೮೮. ಚರಮ ಮಂಗಲಾಚರಣೆಯು.

ಸುರಸಕವಿತಾಹಾರವಿದು, ಸಿಂಡ್ಬಪುರದಲ್ಲಿ
ಗುರುವಾದ ನಾರಾಯಣಾರ್ಯರಾಣತಿಯಿಂದೆ
ನರಸಿಂಹತನುಜಾತನಾದವನ್ನಿದ ಬರೆದೆ ಗೆಳೆಯರನು
ತೃಪ್ತಿಗೊಳಿಸಲ್ ॥

ವರಕವಿಗಳಿದನವರು ಬಾಲ ಬಾಲಕಿಯರುಂ
ಧರಿಸುವಂತನವರತ ತಂತಮ್ಮ ಕಂಠದೊಳ್
ಕರುಣಿಸೌ ಶ್ರೀಮುಖಂ ಮೊದಲು ರವಿಯುದಿಪನಕ ದೇವಿ!
ಕಟ್ಟಾಣಿಯಂತೆ ॥

ಭಾ:-ಗುರುವಾದ ನಾರಾಯಣಾರ್ಯನ=ಸಿಡಂಬೂರುಬೀಡು ನಾರಾಯಣ ಬಲ್ಲಾಳರ (ಗುರುಗಳ). ನರಸಿಂಹಸುತನುಜಾತಂ=ಸಿ. ನರಸಿಂಹ ಬಲ್ಲಾಳರ ಮಗನು. ಈ ಪದ್ಯದಿಂದ ಕವಿಯು ತನ್ನ ಗ್ರಂಥವು ಆಚಂದ್ರಾರ್ಕವಾಗಿ ಬೆಳಗುವಂತೆ ತನ್ನ ಸಿಡಂಬೂರು ಬೀಡಿನ ದೇವತೆಯಾದ ಕಾಳಿಯನ್ನು ಪ್ರಾರ್ಥಿಸುವನು. ಗೆಳೆಯರನು=ಮೇಲ್ತರಗತಿಯ ಬಾಲಕರನ್ನು. ಶ್ರೀಮುಖಂ ಮೊದಲು=ಶ್ರೀಮುಖ ಸಂವತ್ಸರ ಮೊದಲ್ಗೊಂಡು. ರವಿಯುದಿಪನಕ=ಸೂರ್ಯನು ಉದಯಿಸುತ್ತಿರುವ ವರೆಗೆ. ಕಟ್ಟಾಣಿ=ಒಂದು ಜಾತಿಯ ಚಿನ್ನದ ಸರ. ವ ಕಟ್ಟಾಣಿ ಮುತ್ತು. ಕವಿತೆಯೂ, ಸರವೂ ಕಂಠದಲ್ಲೇ ಧರಿಸಲಿಕ್ಕೆ ಯೋಗ್ಯವಾದುದರಿಂದ ಸುರಸಕವಿತಾಹಾರವು ಸರ್ವಥಾ ಕಂಠಧಾರಣೆಗೆ ಯೋಗ್ಯವೆಂದು ಭಾವವು.

೮೯. ಪ್ರತ್ಯಾಶೆ.

ಬುಧಜನರೆ! ನುರಿತರಿವಿನಾ ಕವಿಗಳಾಕಾವ್ಯ
ಮದು ಸುರಸವಾಗಿ ಮಿತಿಮೀರೆಯಿಲ್ಲದೆ ಬೆಳಗ (ಮೆರೆಯು)
ಲಿದಶಾಸ್ತ್ರ ಸಾಹಿತ್ಯಪಂಡಿತರ್ಮೆಚ್ಚರೆಂಬೀ ಭೀತಿ
ಯೆನಗೇತಕೆ ॥
ಮುದವಿನಾಂಗ್ಲೇಯಪಂಡಿತರು ಗೆಯ್ವಹ ಹಬೆಯ
ವುದಿದ ಬಂಡಿಯು ವೇಗಶಾಲಿಗಳ್ಪ್ರಂಟರುಂ
ಚದುರರುಂ ತಂತಮ್ಮ ಜಾಗ ಜೀಗದೆ ಸೇರಲೋವರಲ್ಲದೆ
ಮಾಣರೈ ।

ಭಾ:-ಸುರಿತ=ಶಿಕ್ಷಿತರಾದ. ಅರಿವಿನ=ಜ್ಞಾನವುಳ್ಳ. ಸುರಸಂ=ರಸಭರಿತವಾದ. ಮಿತಿ=ಅವಧಿ. ಬೆಳಗು=ಶೋಭಿಸು. ಮುದ=ಸಂತೋಷ. ಗೆಯ್ಯು=ಮಾಡು. ಪುದಿದ=ಹೊಸತಾದ. ಚದುರ=ಚತುರ. ಓವು=ಪ್ರೀತಿಸು. ಮಾಣ್=ತಡೆ, ಬಿಡು. ಲೋಕದಲ್ಲಿ ಜನರು ತಾವು ಬಯಸಿದ ಕಡೆಗೆ ಹೋಗಲು ತಾವೇ ಸಮರ್ಥರಾದವರೂ ಅಥವಾ ಕುಂಟರೂ, ಅರ್ವಾಚೀನರು ನಿರ್ಮಿಸಿದ ಈಗಣ ಹೊಗೆಬಂಡಿಯು ಹೊಸದೆಂದು ಬಗೆಯದೆ ಅದನ್ನೇ ಪ್ರೀತಿಸುವಂತೆ ಪ್ರಾಚೀನ ಕಾವ್ಯಗಳೆಷ್ಟಿದ್ದರೂ ಅವುಗಳನ್ನು ಹೊಂದಿ ಹೊಸರೀತಿಯಿಂದಿರುವ ಈ ಕೃತಿಯು ಗುಣಯುಕ್ತವಾಗಿದ್ದಲ್ಲಿ ವಿದ್ವಾಂಸರು ಕೂಡ ಇದು ಹೊಸದೆಂದು ಭಾವಿಸದೆ ಆದರಿಸುವರು ಎಂದು ಭಾವವು.

ಅ:-ಈ ಪದ್ಯದಲ್ಲಿ ಶಾಸ್ತ್ರ ಸಾಹಿತ್ಯಪಂಡಿತರ ಮೆಚ್ಚದಿರುವಿಕೆಗೂ, ವೇಗಶಾಲಿ, ಕುಂಟ, ಕುರುಡರ ಮೆಚ್ಚುವಿಕೆಗೂ ವೈಧರ್ಮ್ಯದಿಂದ ಬಿಂಬ ಪ್ರತಿಬಿಂಬ ಭಾವ ತೋರುವುದರಿಂದ ದೃಷ್ಟಾಂತಾಲಂಕಾರವು.

೯೦. ರಥಬಂಧೋದ್ಧಾರ (ಮಹಾಕಾಳಿ).

ನಿಂಡ್ಬಪುರದಾ ತೊಡಂಕುಗಳೆಲ್ಲವಂ ಬೂದಿ
ಗೆಯ್ದಿರುವ ದೇವಿ ಭಕ್ತರಿಗೆ ಶ್ರೀಧನಧಾನ್ಯ
ವಂ ಮಡಗುತಲಿ "ಮಹಾಕಾಳಿ" ಯೆನುತಾಕಾಂಕ್ಷೆ ಪೂರೈಸಿ
ಬಳಿಯುಮಿಹದೊಳ್ ॥

ಅಮ್ಮನವರುಂ ಗಜಾನನದೇವತೆಯು ವರವ
ಕೊಡುವರೇ ಹೊರತು, ಬೇರಿಲ್ಲವೈ ಗತಿಯು ಶ್ರುತಿ
ವಾರ್ತೆಯದು ತಾಂ ಯುಕ್ತಿ ಕೂಡುವಂತಿರೆ ಜಗದಿ ಗೆಯ್ದು
ಶ್ರೀಮಾಯೆ ಮೆರೆವಳ್ ॥

ಭಾ:- ನಿಂಡ್ಬಪುರ = ನಿಡಂಬೂರು. ತೊಡಂಕು = ತೊಂದರೆ. ಬೂದಿಗೆಯ್ದು = ನಾಶಮಾಡಿ. ಮಡಗು = ಕೊಡು. ಗಜಾನನದೇವತೆಯು = ಗಣಪತಿಯು. ಶ್ರುತಿವಾರ್ತೆ = ವೇದವಾಕ್ಯ. ಯುಕ್ತಿಕೂಡುವಂತೆ = ಒಪ್ಪುವಂತೆ. ಈ ರಥಬಂಧದೊಳಗಣ ದೊಡ್ಡ ಅಕ್ಷರಗಳನ್ನು ಓದಿಕೊಂಡರೆ ನಮ್ಮ "ನಿಡಂಬೂರು ಶ್ರೀಮಹಾಕಾಳಿ ಅಮ್ಮನವರೇ ಗತಿಯು ಶ್ರೀ" ಎಂಬ ಅಭೀಷ್ಟವಾಕ್ಯವು ಸಿಗುವುದು. ಈ ಪದ್ಯಾರ್ಥ ಮಾಡುವಾಗ "ಕಲೌ ದುರ್ಗಾ ವಿನಾಯಕೌ" ಕಲಿಯುಗದಲ್ಲಿ ಇಷ್ಟಾರ್ಥವನ್ನು ಕೊಡಲಿದ್ದವರು ದುರ್ಗಾದೇವಿ ಮತ್ತು ಗಣಪತಿ. ಎಂಬರ್ಥವನ್ನು ಒಳಕೊಂಡ ವಾಕ್ಯವನ್ನು ನೆನೆಪಿನಲ್ಲಿಟ್ಟುಕೊಳ್ಳಬೇಕು.

ನಿ

ಂಡ್ಬ ಪು ರ

ದಾ ತೊ ಡಂ ಕು ಗ

ಳಿ ಲ್ಲ ವಂ ಬೂ ದಿ ಗೆ ಯ್ದಿ

ರು ವ ದೇ ವಿ ಭ ಕ್ತ ರಿ ಗೆ ಶ್ರೀ

ಧ ನ ಧಾ ನ್ಯ ವಂ ಮ ಡ ಗು ತ ಲಿ ಮ

ಹಾ ಕಾ ಳಿ ಯೆ ನು ತಾ ಕಾ ಂಕ್ಷೆ ಪೂ ರೈ ಸಿ ಬ ಳಿ



ಯ ಮಿ ಹ ದೊ ಳ್॥ ಅ ಮ್ಮ ನ ವ ರುಂ ಗ ಜಾ ನ

ನ ದೇ ವ ತೆ ಯು ವ ರ ವ ಕೊ ಡು ನ

ರೇ ಹೊ ರಿ ತು ಬೇ ರಿ ಲ್ಲ ವೈ ಗ

ತಿ ಯು ಶ್ರ ತಿ ವಾ ರ್ತೆ ಯ

ದು ತಾಂ ಯು ಕ್ತಿ ಕೂ

ಡು ವಂ ತಿ

ಶ್ರೀ

ರಜಗ ದೆಗ್ರಯ್ದು ಮಾಘಮೆ ರವಳ್

ನಿಡಂಬೂರು ಶ್ರೀಮಹಾಕಾಳಿಯಮ್ಮನವರೇ ಗತಿಯು ಶ್ರೀ.

ಕರಾವಾಳಿಗಾಗಿ

